# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಸದಸ್ಯರ ಹೆಸರು** | : | **ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)** |
| **ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **825** |
| **ಉತ್ತರಿಸಬೇಕಾದ ದಿನಾಂಕ** | : | **12.12.2023** |
| **ಉತ್ತರಿಸಬೇಕಾದ ಸಚಿವರು** | : | **ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು.** |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>KMFನಲ್ಲಿ ವ್ಯಾಪಾರ ವಹಿವಾಟುಗಳನ್ನು ಹೆಚ್ಚಿಸಲು ಯಾವ ರೀತಿಯ ಮಾರ್ಕೆಟಿಂಗ್ ಸೂತ್ರಗಳನ್ನು (Marketing Strategies) ಬಳಸಲಾಗುತ್ತಿದೆ ಹಾಗೂ ಅಳವಡಿಸಲಾಗುತ್ತಿದೆ; (ಪೂರ್ಣ ಮಾಹಿತಿ ನೀಡುವುದು)</td><td>ಕೆ.ಎಂ.ಎಫ್. ನಲ್ಲಿ ವ್ಯಾಪಾರ ವಹಿವಾಟುಗಳನ್ನು ಹೆಚ್ಚಿಸಲು ಬಳಸಲಾಗುತ್ತಿರುವ ಮಾರ್ಕೆಟಿಂಗ್ ಸೂತ್ರಗಳು ಹಾಗೂ ಅಳವಡಿಸಿರುವ ಕುರಿತು ಪೂರ್ಣ ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.</td></tr>
<tr><td>ಆ</td><td>KMFನಲ್ಲಿ ಕಳೆದ 5 ವರ್ಷಗಳಲ್ಲಿ ಮಾಡಲಾದ ಸಂಪೂರ್ಣ ವ್ಯಾಪಾರ ವಹಿವಾಟುಗಳ ಬೆಳವಣಿಗೆ ವಿವರಗಳನ್ನು ನೀಡುವುದು;</td><td>ಕೆ.ಎಂ.ಎಫ್.ನಲ್ಲಿ ಕಳೆದ 5 ವರ್ಷಗಳಲ್ಲಿ ಮಾಡಲಾದ ಸಂಪೂರ್ಣ ವ್ಯಾಪಾರ ವಹಿವಾಟುಗಳ ವಿವರ ಈ ಕೆಳಕಂಡಂತಿದೆ:<br>(ರೂ.ಕೋಟಿಗಳಲ್ಲಿ)
<table>
<tr><th>ವರ್ಷ</th><th>ಕರ್ನಾಟಕ ಹಾಲು ಮಹಾಮಂಡಳ (ಕೆ.ಎಂ.ಎಫ್.)</th><th>ಜಿಲ್ಲಾ ಹಾಲು ಒಕ್ಕೂಟಗಳು</th><th>ಒಟ್ಟು</th><th>ಶೇ.ವಾರು ಬೆಳವಣಿಗೆ(%)</th></tr>
<tr><td>2018-19</td><td>4389.35</td><td>10076.28</td><td>14465.63</td><td>-</td></tr>
<tr><td>2019-20</td><td>4695.27</td><td>11745.47</td><td>16440.74</td><td>13.65</td></tr>
<tr><td>2020-21</td><td>5343.07</td><td>11618.76</td><td>16961.83</td><td>17.26</td></tr>
<tr><td>2021-22</td><td>6658.02</td><td>13087.75</td><td>19745.77</td><td>36.55</td></tr>
<tr><td>2022-23</td><td>6100.01</td><td>14514.16</td><td>20614.17</td><td>42.50</td></tr>
</table></td></tr>
<tr><td>ಇ</td><td>KMFನಲ್ಲಿ ಉತ್ಪನ್ನವಾಗುತ್ತಿರುವ ಹಾಲಿನ ವಿವಿಧ ಉಪ ಉತ್ಪನ್ನಗಳು (Sub Products) ಯಾವುವು; ಯಾವ-ಯಾವ ಉಪ ಉತ್ಪನ್ನಗಳು ಎಲ್ಲೆಲ್ಲಿ ತಯಾರಾಗುತ್ತಿವೆ; ಮತ್ತು ಎಷ್ಟು ಪ್ರಮಾಣದಲ್ಲಿ ತಯಾರಾಗುತ್ತಿರುತ್ತವ;, ಹಾಲಿನ ವಿವಿಧ ಉಪ ಉತ್ಪನ್ನಗಳನ್ನು ಎಷ್ಟು ಪ್ರಮಾಣದಲ್ಲಿ ತಯಾರು ಮಾಡಬೇಕು ಎಂಬುದರ ಬಗ್ಗೆ ಇರುವ ಮಾನದಂಡಗಳೇನು? (ಸಂಪೂರ್ಣ ಮಾಹಿತಿ ನೀಡುವುದು)</td><td>ಕೆ.ಎಂ.ಎಫ್.ನಲ್ಲಿ ಉತ್ಪನ್ನವಾಗುತ್ತಿರುವ ಹಾಲಿನ ವಿವಿಧ ಉಪ ಉತ್ಪನ್ನಗಳು (Sub Products) ಹಾಲಿನ ಶೇಖರಣೆಗನುಗುಣವಾಗಿ ತಯಾರಿಸುತ್ತಿದ್ದು, ಉಪ ಉತ್ಪನ್ನಗಳ ವಿವರವನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.</td></tr>
</table>

**ಇ- ಪಸಂಮೀ 253 ಸಲೆವಿ 2023**

(ಸಹಿ)

**(ಕೆ. ವೆಂಕಟೇಶ್)**

**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

<u>ಅನುಬಂಧ-1</u>

## ಕಹಾಮದ ವ್ಯಾಪಾರ ವಹಿವಾಟು ಹೆಚ್ಚಿಸಲು ಸಮಗ್ರ ಮಾರುಕಟ್ಟೆ ದೂರಗಾಮಿ ಯೋಜನೆ 2026-27 ಅನ್ನು ರೂಪಿಸಲಾಗಿ ವಿವರಗಳು ಈಕೆಳಕಂಡಂತೆ ಇರುತ್ತದೆ.

### ಕರ್ನಾಟಕ ಸಹಕಾರ ಹಾಲು ಮಹಾಮಂಡಳದ ಧ್ಯೇಯ,ಮೌಲ್ಯಗಳು, ಉದ್ದೇಶಗಳು ಮತ್ತು ದೂರದೃಷ್ಟಿ

**ಧ್ಯೇಯ**

ಗ್ರಾಮೀಣ ಪ್ರದೇಶದ ಹಾಲು ಉತ್ಪಾದಕ ಸದಸ್ಯರ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಭಿವೃದ್ಧಿ ಸಾಧಿಸಲು ಅತ್ಯವಶ್ಯವಾದ ಸಹಕಾರಿ ಹೈನುಗಾರಿಕೆ ಅಭಿವೃದ್ಧಿ ಯೋಜನೆಗೆ ಮತ್ತಷ್ಟು ಚುರುಕುಗೊಳಿಸುವುದು.

**ಮೌಲ್ಯಗಳು**

ಬದ್ಧತೆ, ಮುಕ್ತ ಸಂವಹನ, ಸತ್ಯಸಂಧತೆ, ಪ್ರಾಮಾಣಿಕತೆ, ವೈಜ್ಞಾನಿಕ ದೃಷ್ಟಿಕೊನದ ನಿರ್ಧಾರ, ಸಾಂಘಿಕಕಾರ್ಯ, (ಪರಸ್ಪರ) ಗೌರವಿಸುವಿಕೆ.

**ಉದ್ದೇಶಗಳು**

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಹಾಲು ಉತ್ಪಾದಕರ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ಕಾರ್ಯಗಳನ್ನು ಜಾರಿಗೊಳಿಸಲಿದೆ.

- ಸದಸ್ಯ ಉತ್ಪಾದಕರ ಹಾಲಿಗೆ ವರ್ಷಪೂರ್ತಿ ಯೋಗ್ಯ ಮಾರುಕಟ್ಟೆ ಒದಗಿಸುವುದು.
- ಉತ್ತಮ ಗುಣಮಟ್ಟದ ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ಶಹರದ ಗ್ರಾಹಕರಿಗೆ ಒದಗಿಸುವುದು.
- ಹಳ್ಳಿಗಳಲ್ಲಿ ಸಹಕಾರಿ ತತ್ವದಡಿಯಲ್ಲಿ ಹೈನುಗಾರಿಕೆ ಚಟುವಟಿಕೆಗಳನ್ನು ನಿರ್ವಹಿಸಲು ಅವಶ್ಯವಾದ ಸಂಸ್ಥೆಗಳನ್ನು ರೂಪಿಸಿ ಬಲಪಡಿಸುವುದು.
- ಹಾಲು ಉತ್ಪಾದನೆ, ಸಂಸ್ಕರಣೆ ಹಾಗೂ ವಿತರಣೆಗೆ ಅವಶ್ಯವಾದ ಮೂಲಬೂತ ಸೌಕರ್ಯಗಳ ಸ್ಥಾಪನೆ ಹಾಗೂ ತಾಂತ್ರಿಕ ನೆರವು ನೀಡುವುದು.
- ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಾವಕಶ ಕಲ್ಪಿಸಿ ತನ್ಮೂಲಕ ಹಳ್ಳಿಗಳಿಂದ ಪಟ್ಟಣಕ್ಕೆ ವಲಸೆ ಹೋಗದಂತೆ ತಡೆಯುವುದರ ಜೊತೆಗೆ ಗ್ರಾಮೀಣ ಮಟ್ಟದಲ್ಲೇ ಆರ್ಥಿಕ ಸ್ವಾಲಂಬನೆ ಹೊಂದಲು ಅವಶ್ಯ ಚಟುವಟಿಕೆ ರೂಪಿಸುವುದು.

**ದೂರದೃಷ್ಟಿ**

- ಕರ್ನಾಟಕ ಸಹಕಾರ ಹಾಲು ಮಹಾಮಂಡಳಯು, ರಾಷ್ಟ್ರದ ಇತರೇ ಹಾಲು ಮಹಾಮಂಡಳಿಗಿಂತ ಭಿನ್ನವಾದ ಉನ್ನತ ಧ್ಯೇಯವನ್ನು ಅನುಸರಿಸುತ್ತಿದ್ದು ಮತ್ತಷ್ಟು ಕಾರ್ಯತತ್ಪರವಾಗಲಿದೆ.
- ಮಹಾಮಂಡಳಿಯ ನೈಜ ಮಾಲಿಕರಾಗಿರುವ ಹಾಲು ಉತ್ಪಾದಕರ ಶ್ರೇಯೋಭಿವೃದ್ಧಿಗೆ ಶ್ರಮಿಸಲಿದೆ.
- ಉತ್ಪಾದಕರೇ ಸಹಕಾರಿ ಸಂಘಗಳ ಆಧಾರ ಸ್ಥಂಭಗಳು. ಗ್ರಾಮೀಣ ಜನತೆಗೆ ಉದ್ಯೋಗ ಒದಗಿಸುವ ಜೊತೆಗೆ ಹೈನುಗಾರಿಕೆಯಿಂದ ಆರ್ಥಿಕ ಸ್ವಾವಲಂಬನಾ ಮಾರ್ಗ ರೂಪಿಸುವುದು.
- ಹಾಲು ಶೇಖರಣೆ ಹಾಗೂ ಮಾರಾಟ ಬೆಲೆಯ ನಡುವಿನ ಅಂತರವನ್ನು ಕಡಿಮೆ ಮಾಡುವುದು.
- ಉತ್ತಮ ಮಾರಾಟಜಾಲದ ವ್ಯವಸ್ಥೆಯಿಂದ ಗ್ರಾಹಕರಿಗೆ ಗುಣಮಟ್ಟದ ಹಾಲು ನೀಡುವುದರ ಜೊತೆಗೆ ಉತ್ಪಾದಕರಿಗೆ ಸ್ಪರ್ಧಾತ್ಮಕ ಬೆಲೆ ನೀಡುವುದು.
- ಉತ್ಕೃಷ್ಟ ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು, ಅಂತರರಾಷ್ಟ್ರೀಯ ಸಂಸ್ಥೆಗಳು ಹಾಗೂ ಖಾಸಗಿ ಡೇರಿಗಳಿಗಿಂತ ಭಿನ್ನವಾಗಿ ಸರಬರಾಜು ಮಾಡಿ ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗೆ ಶ್ರಮಿಸುವುದು.

( ಪೀಠಿಕೆ

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಕರ್ನಾಟಕದಲ್ಲಿನ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಪ್ರತಿನಿಧಿಸುವ ಶೃಂಗ ಸಂಸ್ಥೆಯಾಗಿದೆ. ಕರ್ನಾಟಕ ಸಹಕಾರ ಹಾಲು ಮಹಾಮಂಡಳ 15 ಜಿಲ್ಲಾ ಹಾಲು ಒಕ್ಕೂಟಗಳನ್ನು ಹೊಂದಿದ್ದು, ರಾಜ್ಯದ ಎಲ್ಲಾ ಜಿಲ್ಲೆಗಳನ್ನು ವ್ಯಾಪಿಸುತ್ತಾ ವಿವಿಧ ಪಟ್ಟಣ/ನಗರ/ಗ್ರಾಮೀಣ ಮಾರುಕಟ್ಟೆಯಲ್ಲಿನ ಗ್ರಾಹಕರಿಗೆ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಸರಬರಾಜು ಮಾಡುತ್ತಿದೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಜಿಲ್ಲಾ ಹಾಲು ಒಕ್ಕೂಟಗಳ 25 ಲಕ್ಷ ಹಾಲು ಉತ್ಪಾದಕ ಸದಸ್ಯರನ್ನು ಹೊಂದಿದ್ದು 2021–22 ನೇ ಸಾಲಿನ ಅಂಕಿಅಂಶಗಳನ್ವಯ ಒಟ್ಟು 16,021 ಗ್ರಾಮೀಣ ಹಾಲು ಉತ್ಪಾದಕರ ಸಹಕಾರಿ ಸಂಘಗಳನ್ನು ಹೊಂದಿದೆ. ಜಿಲ್ಲಾ ಹಾಲು ಒಕ್ಕೂಟಗಳು ಪ್ರತಿನಿತ್ಯ ಸರಾಸರಿ 74.41 ಲಕ್ಷ ಲೀಟರ್ ಹಾಲು ಶೇಖರಿಸುತ್ತಿದ್ದು, ರಾಷ್ಟ್ರದಲ್ಲಿ ಅಮುಲ್ ನಂತರದಲ್ಲಿ ಸದಸ್ಯತ್ವ ಹಾಗೂ ಶೇಖರಣೆಯಲ್ಲಿ ಎರಡನೇ ಸ್ಥಾನ ಗಳಿಸಿದೆ. ಕರ್ನಾಟಕ ಸಹಕಾರ ಹಾಲು ಮಹಾಮಂಡಳ2021–22 ನೇ ಸಾಲಿನಲ್ಲಿ ರೂ.5342.02 ಕೋಟಿ ವಹಿವಾಟು ನಡೆಸಿದ್ದು, ನಿವ್ವಳ ರೂ.174.56 ಕೋಟಿಗಳಷ್ಟು ಲಾಭಗಳಿಸಿದೆ. ಕಳೆದ ಐದು ವರ್ಷಗಳಲ್ಲಿ ಜಿಲ್ಲಾ ಹಾಲು ಒಕ್ಕೂಟಗಳು ಹಾಲು ಶೇಖರಣೆಯಲ್ಲಿ ಶೇ.6.2 ರಷ್ಟು ಹಾಗೂ ಹಾಲು ಮಾರಾಟದಲ್ಲಿ ಶೇ.3.9 ರಷ್ಟು ಪ್ರಗತಿ ಸಾಧಿಸಿವೆ.

ಕಳೆದ ನಾಲ್ಕು ದಶಕಗಳಿಂದ ಕರ್ನಾಟಕ ಸಹಕಾರ ಹಾಲು ಮಹಾಮಂಡಳವು ಸಹಕಾರಿ ಹೈನು ಅಭಿವೃದ್ಧಿ ಕಾರ್ಯಕ್ರಮಗಳಿಂದಾಗಿ ಕರ್ನಾಟಕ ರಾಜ್ಯದ ಹೈನು ಉದ್ಯಮವು ಹಾಲಿನ ಕೊರತೆಯ ಪರಿಸ್ಥಿತಿಯಿಂದ ಪ್ರಗತಿ ಹೊಂದಿ ಸಮೃದ್ಧಿಯ ಸನ್ನಿವೇಶವನ್ನು ತಲುಪಲು ಸಾಧ್ಯವಾಗಿದೆ. ಕರ್ನಾಟಕ ಸರ್ಕಾರವು ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಹಾಲಿಗೆ ನೀಡುತ್ತಿರುವ ರೂ.5/– ಸಹಾಯಧನವು ಈ ರೀತಿಯ ಪ್ರಗತಿಗೆ ಪೂರಕವಾಗಿದೆಯನ್ನಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಕಳೆದ 5 ವರ್ಷಗಳಲ್ಲಿ, ಹಾಲು ಶೇಖರಣೆಯಲ್ಲಿ 6.2% ಹಾಗೂ ರೀಟೇಲ್ ಹಾಲು ಮಾರಾಟದಲ್ಲಿ 3.9% ಸಂಯುಕ್ತ ವಾರ್ಷಿಕ ಬೆಳವಣಿಗೆ ದರಗಳನ್ನು (CAGR) ಹೊಂದಿರುತ್ತದೆ.

ಮಾರ್ಚ್ 2020 ರಿಂದ ಕೋವಿಡ್–19 ಸಾಂಕ್ರಾಮಿಕ ರೋಗವು ದೇಶದಾದ್ಯಂತ ವ್ಯಾಪಿಸಿಕೊಂಡಿದ್ದ ಹಿನ್ನಲೆಯಲ್ಲಿ ಸರ್ಕಾರದಿಂದ ಲಾಕ್‌ಡೌನ್ ಘೋಷಣೆಯಾಗಿದ್ದ ನಿಮಿತ್ತ ಸಾಂಸ್ಥಿಕ ಮಾರಾಟ ಹಾಗೂ HORECA ವಿಭಾಗದ ಮಾರುಕಟ್ಟೆಯು ಹೆಚ್ಚಾಗಿ ಕುಂಠಿತವಾಗಿದ್ದು, ಹಾಲು ಮತ್ತು ಹಾಲಿನ ಉತ್ಪನ್ನಗಳ ಬೇಡಿಕೆಯು ಅನಿಶ್ಚಿತವಾಗಿರುತ್ತದೆ. ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯ ವರದಿಯಂತೆ, ದೇಶದಾದ್ಯಂತ ಸಹಕಾರಿ ಹಾಲು ಮಹಾಮಂಡಳಿಗಳಿಂದ ಮಾರಾಟವಾಗುವ ಹಾಲಿನ ಮಾರಾಟದಲ್ಲಿ ಶೇ.15 ರಷ್ಟು ಕುಂಠಿತವಾಗಿದ್ದು, ಲಾಕ್‌ಡೌನ್ ತೆರವುಗೊಳಿಸಿದ ನಂತರ ಅಕ್ಟೋಬರ್–2020 ರಲ್ಲಿ ಹಾಲು ಮಾರಾಟದಲ್ಲಿ ಪ್ರಗತಿಯನ್ನು ಗಮನಿಸಲಾಗಿದೆ.(ಪುನಶ್ಚೇತನಗೊಂಡಿರುತ್ತದೆ).

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಮತ್ತು ಆಧೀನ ಜಿಲ್ಲಾ ಹಾಲು ಒಕ್ಕೂಟಗಳು ಹಾಲು ಉತ್ಪಾದಕರ ಸಹಕಾರ ಸಂಘಗಳಿಂದ ಹಾಲನ್ನು ಖರೀದಿಸಿ,ಸಂಸ್ಕರಿಸಿ,ಪ್ಯಾಕ್ ಮಾಡಿ ಮಾರಾಟ ಮಾಡಲು ಬದ್ದರಾಗಿರುವುದರಿಂದ, ಹಾಲು ಉತ್ಪಾದಕ ಸದಸ್ಯರಿಂದ ಶೇಖರಣೆಯಾದ ಎಲ್ಲಾ ಹಾಲನ್ನು ಖರೀದಿಸುವುದು ಅನಿವಾರ್ಯವಾಗಿರುತ್ತದೆ.
ಕೋವಿಡ್ 19 ಲಾಕ್ ಡೌನ್ ನಿಂದಾಗಿ ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರು ತಮ್ಮ ಜೀವನೋಪಾಯಕ್ಕಾಗಿ ಗ್ರಾಮೀಣ ಪ್ರದೇಶದತ್ತ ತೆರಳಿರುವುದರಿಂದ, ಸಾಕಷ್ಟು ಜನರು ಹೈನುಗಾರಿಕೆ ವೃತ್ತಿಯ ಮೇಲೆ ಅವಲಂಬಿತರಾಗುತ್ತಿದ್ದು, ಹಾಲಿನ ಶೇಖರಣೆ ಹೆಚ್ಚುತ್ತಿರುತ್ತದೆ. ಅದರೊಂದಿಗೆ, ಖಾಸಗಿ ಡೇರಿ ಉದ್ದಿಮೆದಾರರು, ಹಾಲು ಉತ್ಪಾದಕರಿಂದ ಹಾಲನ್ನು ಖರೀದಿಸುವುದನ್ನು ನಿಲ್ಲಿಸಿದ್ದು, ಕಹಾಮದ ಹಾಲಿನ ಶೇಖರಣಾ ಪ್ರಮಾಣವು ಬಹುತೇಕ ಒಕ್ಕೂಟಗಳಲ್ಲಿ ಹೆಚ್ಚಾಗಿರುತ್ತದೆ.

ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯ ಮಾಹಿತಿಯ ಪ್ರಕಾರ, ಸಹಕಾರಿ ಹಾಲು ಒಕ್ಕೂಟಗಳ ಮಾರಾಟದಲ್ಲಿ ಪ್ರತಿನಿತ್ಯ ಶೇಕಡ 15 ರಷ್ಟು ಕುಂಠಿತಕ್ಕೆ ಕಾರಣವಾಗಿರುತ್ತದೆ. ಕೋವಿಡ್ 19 ರ ಲಾಕ್‌ಡೌನ್‌ನ್ನು ಅಕ್ಟೋಬರ್ 2020 ರಲ್ಲಿ ಮುಕ್ತವಾದಾಗ, ಮಾರುಕಟ್ಟೆಯಲ್ಲಿ ಹಾಲು ಮಾರಾಟದಲ್ಲಿ ಏರಿಕೆಯ ಸ್ಥಿತಿ ತಲುಪಿದ್ದರೂ, ಕೋವಿಡ್ ಎರಡನೇ ಅಲೆ ಮಾರ್ಚ್ 2021 ರ ವರೆಗೂ ವಿಸ್ತರಿಸಿದ್ದರಿಂದ ಜನ ಸಾಮಾನ್ಯರ ಜೀವನದಲ್ಲಿ ಅಪಾರ ನಷ್ಟವಾಗಿ ಸಾವುನೋವಿನ ಜೊತೆಗೆ ಆರ್ಥಿಕ ಪರಿಸ್ಥಿಯು ತುಂಬ ಹದಗೆಟ್ಟಿತು. ಸೆಪ್ಟಂಬರ್ 2021 ರಲ್ಲಿ ಆರ್ಥಿಕ ಪರಿಸ್ಥಿತಿಯಲ್ಲಿ ಗಣನೀಯ ಬದಲಾವಣೆಯಾದರೂ, ಕೋವಿಡ್ ಮಹಾಮಾರಿಯ ಪೂರ್ವದಿನಗಳಲ್ಲಿಯ ಸ್ಥಿತಿಯನ್ನು ತಲುಪಲಾಗುತ್ತಿಲ್ಲ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಹಾಗೂ ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳು ತಮ್ಮ ಧ್ಯೇಯಕ್ಕನುಗುಣವಾಗಿ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಸದಸ್ಯರಿಂದ ಶೇಖರಿಸುವ ಎಲ್ಲಾ ಹಾಲನ್ನು ವರ್ಷ ಪೂರ್ತಿ ಸಂಗ್ರಹಿಸಲು ಬದ್ಧವಾಗಿವೆ.

ಕೋವಿಡ್ 19 ರ ಪ್ರಭಾವದಿಂದಾಗಿ ನಗರ ಪಟ್ಟಣಗಳಿಂದ ಹಳ್ಳಿಗಳಿಗೆ ಜನರು ವಲಸೆ ಬಂದು ಹೈನುರಾಸುಗಳ ಪೋಷಣೆಗೆ ಹೆಚ್ಚು ಗಮನ ನೀಡಿದ್ದರ ಫಲವಾಗಿ, ಗ್ರಾಮೀಣ ಪ್ರದೇಶಗಳಲ್ಲಿ ಹಾಲು ಉತ್ಪಾದನೆ ಹೆಚ್ಚಾಗಲು ಕಾರಣವಾಗುವುದರ ಜೊತೆಗೆ ಖಾಸಗಿ ಹಾಲು ಮಾರಾಟಗಾರರು ಹಾಲು ಖರೀದಿ ಮಾಡುವ ಕಾರ್ಯ ನಿಲ್ಲಿಸಿದ್ದರಿಂದ ಹಾಲು ಉತ್ಪಾದಕರ ಸಹಕಾರಿ ಸಂಘಗಳಲ್ಲಿ ಹಾಲು ಶೇಖರಣೆ ಪ್ರಮಾಣ ಅಧಿಕವಾಯಿತುಯೆಂದರೆ ತಪ್ಪಾಗಲಾರದು.

ಹಾಲು ಮತ್ತು ಹಾಲಿನ ಉತ್ಪನ್ನಗಳು ಕಡಿಮೆ ಜೀವಿತ ಅವಧಿಯ ಪದಾರ್ಥಗಳಾಗಿದ್ದು ಕೋವಿಡ್ ಕಾರಣದಿಂದ ವಾಹನಗಳ ಸಾಗಾಟಕ್ಕೆ ನಿರ್ಬಂಧವಿದ್ದರಿಂದ ಅವುಗಳನ್ನು ಬಹಳ ದೂರದ ಸ್ಥಳಗಳಿಗೆ ಸಾಗಾಣಿಕೆ ಮಾಡಿ ಮಾರಾಟ ಮಾಡಲು ಬಹಳ ಕಷ್ಟವಾಯಿತು.

ಮನೆಬಳಕೆಯಲ್ಲಿ ಹಾಲಿನ ಪ್ರಮಾಣ ಸ್ವಲ್ಪ ಮಟ್ಟಿಗೆ ಏರಿಕೆಯಾಗಿದ್ದರೂ, ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟದಲ್ಲಿ ಗಣನೀಯ ವ್ಯತ್ಯಾಸ ಕಂಡುಬರಲಿಲ್ಲ. ಹೋಟಲ್, ಆಫೀಸ್, ಶಾಲೆಗಳು ಸಿಹಿತಿಂಡಿಗಳ ಅಂಗಡಿಗಳು ಮುಚ್ಚಿದ್ದರಿಂದ ಈ ವಲಯದಲ್ಲಿ ಮಾರಾಟವಾಗುತ್ತಿದ್ದ ಹಾಲು ಹಾಗೂ ಹಾಲಿನ ಉತ್ಪನ್ನಗಳ ಮಾರಾಟದ ಪ್ರಮಾಣ ಸಂಪೂರ್ಣವಾಗಿ ಕುಸಿದಿತ್ತು.

ಕೋವಿಡ್ 19 ರ ಕಾರಣದಿಂದ ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಕ್ಷೀರಭಾಗ್ಯ ಯೋಜನೆ ಅಡಿ ಸರ್ಕಾರಿ ಶಾಲೆ ಮತ್ತು ಅಂಗನವಾಡಿಗಳಿಗೆ ಸರಬರಾಜು ಮಾಡುತ್ತಿದ್ದ ಹಾಲಿನ ಪುಡಿಯ ವಿತರಣೆ ಸಂಪೂರ್ಣವಾಗಿ ನಿಂತಿದ್ದರಿಂದ, ವಾರಕ್ಕೆ ಐದು ದಿವಸ ಮಕ್ಕಳಿಗೆ ನೀಡುತ್ತಿದ್ದ ಹಾಲಿನ ಪುಡಿಯು ಮಾರಾಟವಾಗದೇ ಉಳಿದು ಹೆಚ್ಚಿನ ಪುಡಿಯು ದಾಸ್ತಾನಾಗಿ ಉಳಿಯುವಂತಾಯಿತು. ಇದರಿಂದಾಗಿ ಹೆಚ್ಚಿನ ಪ್ರಮಾಣದಲ್ಲಿ ಕೆನೆರಹಿತ ಹಾಲಿನ ಪುಡಿ ಹಾಗೂ ಬೆಣ್ಣೆಯ ಉತ್ಪಾದನೆಯನ್ನು ಮಾಡುವ ಅನಿವಾರ್ಯ ಉಂಟಾಗಿ ಉತ್ಪಾದಿಸಿದ ಕೆನೆರಹಿತ ಹಾಲಿನಪುಡಿ ಹಾಗೂ ಬೆಣ್ಣೆಗೆ ಬೇಡಿಕೆ ಇಲ್ಲದೇ ಇದ್ದುದರಿಂದ ಅವುಗಳನ್ನು ಸ್ಪರ್ಧಾತ್ಮಕ ದರಗಳಲ್ಲಿ ಮಾರಾಟ ಮಾಡಲು ಅಡಚಣೆಯಾಯಿತು.

ಇದೇ ಅವಧಿಯಲ್ಲಿ ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳ ಹಾಲು ಶೇಖರಣೆ ಪ್ರಮಾಣವು ಶೇ.8 ರಷ್ಟು ಅಧಿಕವಾಗಿ ದಶಕದ ದಾಖಲೆಯಾಯಿತು. ಸೆಪ್ಟಂಬರ್ 2021 ರಲ್ಲಿ ದಿನನಿತ್ಯ ಹಾಲು ಶೇಖರಣೆ ಪ್ರಮಾಣವು ದಾಖಲೆಯ 88.30 ಲಕ್ಷ ಲೀಟರು ತಲುಪಿತು. ಹೀಗಾಗಿ ಅಧಿಕವಾಗಿ ಶೇಖರಣೆಯಾದ ಹಾಲಿನ ಮಾರಾಟದ ಹೊಣೆಯನ್ನು ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಹಾಗೂ ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳು ಹೊರಬೇಕಾಯಿತು.

ಹಾಲು ಹಾಗೂ ಹಾಲಿನ ಉತ್ಪನ್ನಗಳು "ನಂದಿನಿ" ಬ್ರ್ಯಾಂಡ್‌ನಲ್ಲಿ ಮಾರಾಟವಾಗುತ್ತಿವೆ. ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಹಾಲು, ತಾಜಾ ಉತ್ಪನ್ನಗಳು, ಬೆಣ್ಣೆ, ತುಪ್ಪ ಇತ್ಯಾದಿ ಉತ್ಪನ್ನಗಳ ಮಾರಾಟವನ್ನು ನಿರ್ವಹಿಸುತ್ತಿವೆ. ಬೆಂಗಳೂರು, ಕೋಲಾರ, ಮಂಡ್ಯ, ತುಮಕೂರು ಹಾಲು ಒಕ್ಕೂಟಗಳು ಮತ್ತು ಮದರ್ ಡೇರಿ ಸೇರಿ ಬೆಂಗಳೂರಿನಲ್ಲಿ ಹಾಲಿನ ಮಾರಾಟವನ್ನು ನಿರ್ವಹಿಸುತ್ತಿವೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳವು ತನ್ನ ಆಧೀನ ಜಿಲ್ಲಾ ಸಹಕಾರಿ ಒಕ್ಕೂಟಗಳಲ್ಲಿ ಸಂಗ್ರಹಣೆಯಾಗುವ ಹೆಚ್ಚುವರಿ ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡುವ ಹೊಣೆಹೊತ್ತಿದೆ. ದಕ್ಷಿಣ ಭಾರತದಲ್ಲಿ, **"ನಂದಿನಿ"** ಅಗ್ರ ಸ್ಥಾನ ಪಡೆದಿರುವ ಹಾಲು ಮತ್ತು ಹಾಲಿನ ಉತ್ಪನ್ನಗಳ ಬ್ರಾಂಡ್ ಆಗಿರುವುದರಿಂದ, ದೂರಗಾಮಿ ಯೋಜನ ಅವಧಿ 2026-27 ರ ಅಂತ್ಯದ ವೇಳೆಗೆ ಭಾರತದಾದ್ಯಂತ ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡುವ ಪ್ರತಿಷ್ಠೆಯ ಸಂಸ್ಥೆಯಾಗಲಿದೆ. ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಹಾಗೂ ಅಧೀನ ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳ ಒಟ್ಟಾರೆ ವಹಿವಾಟು ಸುಮಾರು ರೂ.16,441 ಕೋಟಿಗಳಷ್ಟು ಆಗಲಿದೆ.

## 1) ನಂದಿನಿ ರೀಟೇಲ್ ಹಾಲು ಮತ್ತು ಮೊಸರು ಮಾರಾಟ

ಹಾಲು ಒಂದು ಜೈವಿಕ ಉತ್ಪನ್ನವಾಗಿರುವುದರಿಂದ, ಹಾಲು ಮತ್ತು ಹಾಲಿನ ಉತ್ಪನ್ನಗಳ ಜೀವಿತಾವಧಿ ಕಡಿಮೆಯಿರುವುದರಿಂದ ಕೋವಿಡ್ ಪರಿಸ್ಥಿತಿಯಲ್ಲಿ ವಾಹನಗಳು, ವಸ್ತುಗಳ ಸಾರಿಗೆ ವ್ಯವಸ್ಥೆಯು ವ್ಯತ್ಯಯ ಉಂಟಾಗಿರುವುದರಿಂದ ಹಾಲು ಮತ್ತು ಹಾಲಿನ ಉತ್ಪನ್ನಗಳ ಗುಣಮಟ್ಟವನ್ನು ಕಾಪಾಡಿಕೊಂಡು ದೂರ ಪ್ರದೇಶಗಳಿಗೆ ಉತ್ಪನ್ನಗಳನ್ನು ತಲುಪಿಸುವುದು ಅತ್ಯಂತ ದೊಡ್ಡ

ಸವಾಲಾಗಿರುತ್ತದೆ. ಹೋಟೆಲ್‌ಗಳು, ಕಛೇರಿಗಳು, ಶಾಲೆಗಳು ಹಾಗೂ ಊಟಿಖಇಅಂ ವಿಭಾಗದ ಎಲ್ಲಾ ಸಂಸ್ಥೆಗಳು ಮುಚ್ಚಿದ್ದರಿಂದ ಹಾಲಿನ ವಿಲೇವಾರಿ ಕಷ್ಟಕರವಾಗಿದ್ದು, ಮನೆ ಬಳಕೆ ಹೆಚ್ಚಾಗಿದ್ದರೂ ಬೇಡಿಕೆಯ ಪ್ರಮಾಣವು ಅಷ್ಟಾಗಿ ಹೆಚ್ಚಾಗಿರುವುದಿಲ್ಲ. ಆದ್ದರಿಂದ, ಕೋವಿಡ್ ಪರಿಸ್ಥಿತಿಯಲ್ಲಿ ಕಳೆದು ಹೋದ ಹಾಲಿನ ಮಾರುಕಟ್ಟೆಯನ್ನು ಪಡೆಯುವುದು ದುಸ್ತರವಾಗಿರುತ್ತದೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳವು, ಅಧೀನ ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳಲ್ಲಿನ ಹೆಚ್ಚುವರಿ ಹಾಲಿನ ವಿಲೇವಾರಿಗೆ ಸಮರ್ಪಕ ಮಾರ್ಗೋಪಾಯಗಳನ್ನು ಒಕ್ಕೂಟಗಳ ಸಮನ್ವಯದೊಂದಿಗೆ ರೂಪಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯವಲ್ಲದೇ ಹೊರ ರಾಜ್ಯಗಳಿಗೆ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟವನ್ನು ಸ್ವತಃ ವ್ಯವಸ್ಥೆ ಮಾಡುತ್ತಿದ್ದು ಪ್ರಸ್ತುತ ಮುಂಬೈ, ಚೆನ್ನೈ, ಕೋಯಮತ್ತೂರ್, ಹೈದರಾಬಾದ್, ಸೊಲ್ಲಾಪುರ್, ವಿದರ್ಭ ಪ್ರಾಂತ್ಯ, ಗೋವಾ, ಪುಣೆ– ಈ ಪ್ರದೇಶಗಳಲ್ಲಿಯೂ ನಂದಿನಿ ಬ್ರಾಂಡ್‌ನಲ್ಲಿ ಹಾಲಿನ ಮಾರಾಟವಾಗುತ್ತಿರುತ್ತದೆ.

ದ್ರವರೂಪದ ಹಾಲಿನ ಮಾರುಕಟ್ಟೆಯು ಶಾಶ್ವತ ಮಾರುಕಟ್ಟೆಯಾದ್ದರಿಂದ ಹಾಲಿನ ವಿಲೇವಾರಿಯು ಹೆಚ್ಚಿನ ಪ್ರಮಾಣದಲ್ಲಿ ರೀಟೇಲ್ ಹಾಲು ಮಾರಾಟದಿಂದಲೇ ಸಾಧ್ಯವಾಗಲಿದ್ದು, ಪ್ರಸ್ತುತ ಪ್ರತಿದಿನ ಶೇಖರಣೆಯಾಗುತ್ತಿರುವ ಗರಿಷ್ಠ 83.3 ಲಕ್ಷ ಲೀಟರ್ ಹಾಲಿಗೆ ಈ ಕೆಳಕಂಡಂತೆ ಮುಂದಿನ 5 ವರ್ಷಗಳಲ್ಲಿ ಹೆಚ್ಚಾಗುವ ಶೇಖರಣಾ ಪ್ರಮಾಣಕ್ಕೆ ದ್ರವರೂಪದಲ್ಲಿ ಹಾಲು ಹಾಗೂ ಮೊಸರಿನ ವಿಲೇವಾರಿಗೆ ಕ್ರಮವಿಡಬೇಕಾಗಿರುತ್ತದೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ 15 ಜಿಲ್ಲಾ ಸಹಕಾರಿ ಹಾಲು ಒಕ್ಕೂಟ/ಘಟಕಗಳಿಂದ 2020–21 ನೇ ಆರ್ಥಿಕ ವರ್ಷದಲ್ಲಿ ಸರಾಸರಿ ಪ್ರತಿದಿನ ಒಟ್ಟು 35,09,756 ಲೀ ರೀಟೇಲ್ ಹಾಲು ಹಾಗು 5,13,920 ಕೆಜಿ ಮೊಸರು ಮಾರಾಟವಾಗಿದ್ದು, ಸಮಗ್ರ ಮಾರುಕಟ್ಟೆ ಯೋಜನೆ ಅನ್ವಯ, ಹಿಂದಿನ ವರ್ಷದ ಮಾರಾಟ ಸಾಧನೆ ಮೇಲೆ ಮುಂದಿನ ಸಾಲುಗಳಾದ 2021–22 ರಿಂದ 2026–27 ರಲ್ಲಿ ಪ್ರತಿ ವರ್ಷಕ್ಕೆ ಶೇ 5 ರಷ್ಟು ಹಾಲು ಹಾಗು ಮೊಸರನ್ನು ಶೇ 20 ರಂತೆ ಸ್ಥಳೀಯ ಮಾರುಕಟ್ಟೆ ಬೆಳವಣಿಗೆಯಾಗಿ ಗುರಿಯನ್ನು ನಿಗದಿಪಡಿಸಲಾಗಿದೆ.
ಹೊರ ರಾಜ್ಯದಲ್ಲಿ ಹಾಲು ಮಾರಾಟದ ಗುರಿಯನ್ನು ಶೇಕಡಾ 50 ಹಾಗು ಮೊಸರು ಶೇ 40 ರಂತೆ ಅಲ್ಲಿನ ಮಾರುಕಟ್ಟೆಯ ಬೆಳವಣಿಗೆಯ ಆಧಾರದಲ್ಲಿ ನಿಗದಿಪಡಿಸಲಾಗಿದೆ.

**Overall Pouch Milk and Curd Sales Projected till 2026-27 :**

Qty in Ltr's

| Sachet sales/day | 2016-17 | 2020-21 | % Growth | CAGR (%) | 2021-22 | 2022-23 | 2023-24 | 2024-25 | 2025-26 | 2026-27 | CAGR (%) |
|---|---|---|---|---|---|---|---|---|---|---|---|
| Milk (within state) | 3222468 | 3333930 | 3 | 1 | 3569410 | 3747881 | 3935275 | 4132038 | 4338640 | 4555572 | 4 |
| Milk (Outside state) | 168922 | 175826 | 4 | 1 | 324500 | 488000 | 638000 | 828500 | 1075000 | 1330000 | 27 |
| **Total Milk** | **3393977** | **3509756** | **3** | **1** | **3893910** | **4235881** | **4573275** | **4960538** | **5413640** | **5885572** | **7** |
| Curd (within state) | 411982 | 488035 | 18 | 4 | 627011 | 752413 | 902896 | 1083475 | 1300170 | 1560204 | 16 |
| Curd (Outside state) | 0 | 25885 | | | 37561 | 50230 | 65660 | 84782 | 106457 | 132700 | 23 |
| **Total Curd** | **411982** | **513920** | **25** | **5** | **664572** | **802643** | **968556** | **1168257** | **1406627** | **1692904** | **17** |
| **Grand Total (Milk+Curd)** | **3907778** | **4128969** | **6** | **1** | **4675299** | **5165600** | **5679029** | **6277611** | **6982676** | **7755043** | **9** |

## ಬೆಂಗಳೂರು ನಗರದಲ್ಲಿ ನಂದಿನಿ ಹಾಲಿನ ಮಾರುಕಟ್ಟೆಯಲ್ಲಿ ನಂದಿನಿ ಪಾಲು:

ಪ್ರಸ್ತುತ ಬೆಂಗಳೂರು ನಗರದಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಹಾಲು ಮತ್ತು ಮೊಸರಿಗೆ ಸರಾಸರಿ ಕನಿಷ್ಠ 253 ಮಿಲಿ, ತಲಾ ಸೇವನಾ ಬಳಕೆ (Per Capita Consumption) ನಂತೆ ಅಂದಾಜು 31,04,702 ಲೀಟರ್‌ನಷ್ಟು ಮಾರುಕಟ್ಟೆ ಗಾತ್ರವಿರುತ್ತದೆ (market size).

| Bangalore market area | Population (Nos) | Sales of milk and Curd (LPD/KPD) | private sales (LPD) | Total sales (Nandini+ private) | Effective demand (Milk and Curd) @ 253ml | Nandini Brand (%) | Private brand, (%) | unorganised sector ( %) |
|---|---|---|---|---|---|---|---|---|
| | 11318933 | 2133247 | 800000 | 2933247 | 3104702 | 68.7 | 26 | 5.5 |

## ಕರ್ನಾಟಕ ರಾಜ್ಯದಲ್ಲಿ ಇನ್ನುಳಿದ ನಗರ ಹಾಗು ಗ್ರಾಮೀಣ ಭಾಗಗಳಲ್ಲಿ ಹಾಲಿನ ಮಾರುಕಟ್ಟೆಯಲ್ಲಿ ನಂದಿನಿ ಪಾಲು:


ಪ್ರಸ್ತುತ ರಾಜ್ಯದಾದ್ಯಂತ ನಗರ ಹಾಗು ಗ್ರಾಮೀಣ ಜನಸಂಖ್ಯೆಯ ಆಧಾರದ ಮೇಲೆ ಹಾಲು ಮತ್ತು ಮೊಸರಿಗೆ ಸರಾಸರಿ ಕನಿಷ್ಠ 191 ಮಿಲಿ, ತಲಾ ಸೇವನಾ ಬಳಕೆ (Per Capita Consumption) ನಂತೆ ಪ್ರತಿನಿತ್ಯ ಅಂದಾಜು 80,55,769 ಲೀಟರ್‌ನಷ್ಟು ಮಾರುಕಟ್ಟೆ ಗಾತ್ರವಿರುತ್ತದೆ (market size).


| Karnataka State market area | Population | Sales of milk & Curd (LPD/KPD) | Private sales (LPD) | Total sales (Nandini+ Private) (LPD/KPD) | Effective demand (Milk and Curd) @ 191 ml | Nandini Brand (%) | Private brand, (%) | unorganised sector ( %) |
|---|---|---|---|---|---|---|---|---|
| | 39309568 | 4303503 | 1300000 | 5603503 | 8055769 | 53 | 16 | 31 |

## Milk & Curd Sales in the last 5 years

| Year | Milk Qty in LPD | MILK GROWTH % | Curd | CURD GROWTH % |
|---|---|---|---|---|
| 2016-17 | 3222468 | | 411982 | |
| 2017-18 | 3265248 | 1.33 | 439448 | 6.67 |
| 2018-19 | 3294564 | 0.90 | 464886 | 5.79 |
| 2019-20 | 3396496 | 3.09 | 525792 | 13.10 |
| 2020-21 | 3333930 | -1.84 | 488035 | -7.18 |
| 2021-22 | 3406366 | 2.17 | 512696 | 5.05 |
| For 5 yrs | | 5.65 | | 23.43 |


## Year wise projected total milk sales (LPD):





2020–21 ನೇ ಸಾಲಿನಲ್ಲಿ ಸರಾಸರಿ ಪ್ರತಿ ದಿನ 33,33,930 ಲೀಟರ್‌ಗಳಿದ್ದು, ಈ ಪ್ರಮಾಣಕ್ಕೆ ಅನುಗುಣವಾಗಿ ಮುಂದಿನ 6 ವರ್ಷಗಳಗೆ ರಾಜ್ಯದಲ್ಲಿ ಶೇ. 5 ರಷ್ಟು ಮಾರಾಟಗುರಿಯನ್ನು ಇಟ್ಟುಕೊಂಡಿದ್ದು, ಹೊರರಾಜ್ಯದಲ್ಲಿ ಶೇ. 50 ರಷ್ಟು ಮಾರಾಟ ಗುರಿಯನ್ನು ಇಟ್ಟುಕೊಳ್ಳಲಾಗಿದೆ.

## Year wise projected total Curd sales (LPD):






**<u>ಹಾಲು ಮಾರಾಟಗಾರರು ಮತ್ತು ನಂದಿನಿ ಪಾರ್ಲರ್ ವಿವರಗಳು:</u>**

ಪಟ್ಟಿ (ಅ) ಮತ್ತು (ಆ) ಗಳಲ್ಲಿ ಒಕ್ಕೂಟವಾರು ಹಾಲು ಹಾಗೂ ಮೊಸರು ಮಾರಾಟ ಪ್ರಮಾಣಗಳ ಗುರಿಯನ್ನು ನಿಗಧಿಪಡಿಸಿದ್ದು, ಅದರ ಅನ್ವಯ ಅವಶ್ಯಕತೆ ಯಿರುವ ಹೆಚ್ಚುವರಿ ಪಾರ್ಲರ್‌ಗಳ ನಿರ್ಮಾಣ ಹಾಗೂ ರೀಟೇಲ್ ಮಾರಾಟಗಾರರ ನೇಮಕಾತಿ ವಿವರವನ್ನು ಪ್ರಸ್ತುತ ಚಾಲ್ತಿಯಲ್ಲಿರುವ ಮಾರಾಟಗಾರರ ಸಂಖ್ಯೆ ಹಾಗೂ ಯೋಜಿಸಲಾದ ಹಾಲು ಮಾರಾಟ ಪ್ರಮಾಣಕ್ಕೆ ಅನುಗುಣವಾಗಿ ಈ ಕೆಳಕಂಡಂತೆ ಸಿದ್ದಪಡಿಸಿದೆ.

ಹಾಲು ಮತ್ತು ಮೊಸರಿನ ಮೂಲಕ ಒಟ್ಟಾರೆ 2020–21 ರಿಂದ 8,63,551 ಮೆ.ಟನ್ ವಿಲೇವಾರಿ ಆಗಿದ್ದು, ಇದನ್ನು 2026–27 ನೇ ಸಾಲಿಗೆ --- ಮೆ.ಟನ್ ವಿಲೇವಾರಿ ಮಾಡಲು ಅಂದಾಜಿಸಲಾಗಿರುತ್ತದೆ.

**<u>ಡೀಲರ್, ಪಾರ್ಲರ್ ಮತ್ತು ಕ್ಷೇತ್ರ ಸಿಬ್ಬಂದಿಗಳು :</u>**

- ಆಯಾ ಸ್ಥಳಗಳ ಜನದಟ್ಟಣೆ, ಪ್ರಸ್ತುತ ವ್ಯಾಪಾರ ನಿರ್ವಹಿಸುತ್ತಿರುವ ಮಾರಾಟಗಾರರ ಕಾರ್ಯಕ್ಷಮತೆಯನ್ನು ಪರಿಗಣನೆಗೆ ತೆಗೆದುಕೊಂಡು, ಪ್ರತಿನಿತ್ಯ ಗರಿಷ್ಠ 1200 ಲೀ ಗಿಂತ (100 ಕ್ರೇಟ್ಸ್) ಹೆಚ್ಚು ಹಾಲು ಮಾರಾಟ ಮಾಡುತ್ತಿದ್ದಲ್ಲಿ ಅಂತಹ ಸ್ಥಳಗಳಲ್ಲಿ ಸೂಕ್ತ ಸಂಖ್ಯೆಯ ಮಾರಾಟಗಾರರನ್ನು ಹೊಸದಾಗಿ ನೇಮಕ ಮಾಡಿ ಅವರ ಮಾರಾಟ ಪ್ರಮಾಣ ಮಿತಿ ನಿಗದಿಪಡಿಸುವುದು.
- ಒಕ್ಕೂಟಗಳಲ್ಲಿನ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳ ಪ್ರಮುಖ ಆಯ್ದ ಸ್ಥಳಗಳಲ್ಲಿ ಹಾಲಿನ ಉತ್ಪನ್ನಗಳ ಲಭ್ಯತೆ ಕಲ್ಪಿಸಲು ಕನಿಷ್ಠ ಸಂಖ್ಯೆಗಳ ಪಾರ್ಲರ್‌ಗಳನ್ನು ಬೇಡಿಕೆ ಅನುಸಾರ ಪ್ರಾರಂಭಿಸುವುದು. ವಿವರ ಈ ಕೆಳಕಂಡಂತಿದೆ.

| Year | Total Milk and Curd (KPD) | No of Parlors | No of Franchises | Agents | Field Staff |
|---|---|---|---|---|---|
| 2021-22 | 4303503 | 930 | 883 | 14897 | 371 |
| 2022-23 | 4612730 | 1214 | 970 | 15641 | 398 |
| 2023-24 | 4956229 | 1529 | 1068 | 16424 | 427 |
| 2024-25 | 5339474 | 1880 | 1175 | 17245 | 460 |
| 2025-26 | 5768969 | 2250 | 1293 | 18107 | 496 |
| 2026-27 | 6252443 | 2495 | 1422 | 19013 | 536 |

ಸ್ಥಳೀಯ ಮಾರುಕಟ್ಟೆ ವ್ಯಾಪ್ತಿಯಲ್ಲಿ ರೀಟೇಲ್ ಮಾರಾಟಗಾರರ ನೇಮಕ ಹಾಗೂ ಪಾರ್ಲರ್‌ಗಳ ನಿರ್ಮಾಣಕ್ಕೆ ಕನಿಷ್ಠ ಅರ್ಹತೆಗಳನ್ನು/ಅಂಶಗಳ ವಿವರಗಳನ್ನು ಸೂಕ್ತವೆಂದು ಅಭಿಪ್ರಾಯಿಸಲಾಗಿದೆ. (ಅನುಭಂದ–11)

ಪಾರ್ಲರ್‌ಗಳ ಸ್ಥಾಪನೆಗೆ ಈ ಕೆಳಕಂಡ ಅಂಶಗಳನ್ನು ಅಳವಡಿಸಿಕೊಳ್ಳುವುದು.

ಒಕ್ಕೂಟಗಳಲ್ಲಿ ಮಾನವ ಸಂಪನ್ಮೂಲಗಳ ನಿಯೋಜನೆ:

ಒಕ್ಕೂಟಗಳಲ್ಲಿ ಕಾರ್ಯ ನಿರ್ವಹಿಸುವ ಕ್ಷೇತ್ರ ಸಿಬ್ಬಂದಿಗಳಿಗೆ ಚಾಲ್ತಿಯಲ್ಲಿರುವ ಮಾರಾಟ ಪ್ರತಿನಿತ್ಯ ಪ್ರಮಾಣ 10,000 ರಿಂದ 15,000 ಲೀಟರ್ ಗೆ ಒಬ್ಬರಂತೆ ಕ್ಷೇತ್ರ ಸಿಬ್ಬಂದಿಯನ್ನು ನಿಗಧಿಪಡಿಸುವುದು ಹಾಗು ಸದರಿ

ಮಾರುಕಟ್ಟೆಯ ವ್ಯಾಪ್ತಿಯಲ್ಲಿ ಸರಾಸರಿ ಪ್ರತಿ ವರ್ಷಕ್ಕೆ 6% ಮಾರಾಟ ಬೆಳವಣಿಗೆಯ ಗುರಿಗಳನ್ನು ನಿಗದಿಪಡಿಸುವುದು. ಅದೇ ರೀತಿ ಹೊಸ ಅಥವಾ ಬೆಳೆಯುತ್ತಿರುವ ಮಾರುಕಟ್ಟೆ ಪ್ರದೇಶಗಳಿಗೆ ಶೇ. 10 ರಷ್ಟು ಮಾರಾಟದ ಗುರಿ ನಿಗಧಿಪಡಿಸುವುದು.
ಮಾರುಕಟ್ಟೆ ವಿಭಾಗದ ಇತರೇ ಕಾರ್ಯಗಳಾದ ಬೇಡಿಕೆ, ಪಡೆಯುವಿಕೆ, ವಿತರಣೆ, ಸಾಗಾಣಿಕೆ, ಬಾಕಿ ನಿಯಂತ್ರಣ ಇತ್ಯಾದಿ ಕಾರ್ಯಗಳಿಗೆ ಸಿಬ್ಬಂದಿಗಳನ್ನು ನಿಯೋಜಿಸಿ, ಕ್ಷೇತ್ರ ಸಿಬ್ಬಂದಿಗಳನ್ನು ಮಾರಾಟ ಅಭಿವೃಧಿ ಕಾರ್ಯಕ್ಕೆ ಸಿಮೀತಗೊಳಿಸಿ ಮಾರಾಟ ಗುರಿಗಳ ಸಾಧನೆಗೆ ಜವಾಬ್ದಾರಿ ನೀಡುವುದು.
ಕ್ಷೇತ್ರ ಸಿಬ್ಬಂದಿಯ ಪ್ರತಿ ದಿನದ ಕಾರ್ಯ ಚಟುವಟಿಕೆಗಳ ಅವಲೋಕನ, ಪ್ರಗತಿ, ಸಮಯ ನಿಯೋಜನೆ ಇತ್ಯಾದಿಗಳ ಬಗ್ಗೆ ತ್ವರಿತ ಮಾಹಿತಿಗಳನ್ನು ಪಡೆಯಲು ಆಧುನಿಕ ತಂತ್ರಾಂಶಗಳನ್ನು ಬಳಸಿಕೊಳ್ಳುವುದು ಹಾಗು ಇದರಿಂದ ಸಿಬ್ಬಂದಿಯ ಸಮಯ ಹಾಗು ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಳ್ಳುವುದು.

ಗ್ರಾಹಕ ವಿಚಾರಣೆ/ದೂರು ನಿರ್ವಹಣೆ ಬಗ್ಗೆ ಪ್ರತ್ಯೇಕ ವ್ಯವಸ್ಥೆಯನ್ನು ಕಲ್ಪಿಸುವುದು ಹಾಗೂ ಸದರಿ ವ್ಯವಸ್ಥೆ ಮತ್ತು ಕ್ಷೇತ್ರ ಸಿಬ್ಬಂದಿಗಳೊಂದಿಗೆ ಸಮನ್ವಯ ಸಾಧಿಸಿ ಕಾರ್ಯನಿರ್ವಹಿಸುವುದು.

ಹೊಸ ಹಾಗೂ ಚಾಲ್ತಿಯಲ್ಲಿರುವ ಸಿಬ್ಬಂದಿಗಳಿಗೆ ಪ್ರತಿವರ್ಷ ಮಾರುಕಟ್ಟೆಯಲ್ಲಿ ಬದಲಾಗುತ್ತಿರುವ ಸನ್ನಿವೇಶ ಹಾಗೂ ಬೆಳವಣಿಗೆಗಳ ಬಗ್ಗೆ ಉನ್ನತ ಮಟ್ಟದ ಮಾರುಕಟ್ಟೆ ತರಭೇತಿ ಕಾರ್ಯಗಾರಗಳನ್ನು ಹಮ್ಮಿಕೊಳ್ಳುವುದು.

| No. of Marketing field staff essential at Unions required to achieve projected Milk sales (Within State) | | | | | | | | |
|---|---|---|---|---|---|---|---|---|
| | 2020-21 Present | (2020-21) | 2021-2022 | 2022-23 | 2023-24 | 2024-25 | 2025-26 | 2026-27 |
| TOTAL | 182 | 258 | 270 | 283 | 295 | 313 | 330 | 345 |

## Proposed Marketing Staff structure for outside state milk and curd sales (2021-2027):

| Sl no | State | Telangana state | | Andra pradesh state | | | Tamilnadu state | | | | Goa state | Maharastra state | | | | | | | Total staff (NOs) |
|---|---|---|---|---|---|---|---|---|---|---|---|---|---|---|---|---|---|---|---|
| | Marketing by KMF Union | HAMUL | | KOMUL | KOMUL | RBKMUL | BAMU: | CHAMUL | MYMUL | | BEMUL | BEMUL | | TUMUL | | BIMUL | BIMUL | | |
| | Market staff structure(Nos) | Hyderbad | | Vijayawada | Ananthpura District (New launch) | Ananthpura | TN except chennai | Coimbature/Nili giris Dist | Chennai | | Goa | Pune | | Mumbai | | Solapura | vidharabha (new launch) | | |
| | | 1st phase | 2 nd phase | 1st phase | 1st phase | 1st phase | 1st phase | 2 nd phase | 1st phase | 2 nd phase | 1st phase | 1st phase | 2 nd phase | 1st phase | 2 nd phase | 1st phase | 1st phase | 2 nd phase | |
| 1 | State -Head (Consultant ) | 1 | 0 | 1 | 0 | 0 | 0 | 0 | 1 | 0 | 0 | 0 | 0 | 1 | 0 | 0 | 0 | 0 | 4 |
| 2 | Zonal manager( 1 lkh lts/day | 1 | 1 | 0 | 0 | 0 | 0 | 0 | 1 | 1 | 0 | 0 | 0 | 3 | 2 | 0 | 0 | 0 | 9 |
| 3 | Consultant ASM ( 25000 lts/day) | 2 | 2 | 1 | 0 | 1 | 1 | 1 | 2 | 2 | 2 | 1 | 1 | 7 | 3 | 1 | 1 | 0 | 28 |
| 4 | sales excutives (5000 lts/person) | 10 | 10 | 5 | 2 | 4 | 4 | 4 | 10 | 10 | 15 | 5 | 5 | 20 | 20 | 5 | 8 | 2 | 139 |
| 5 | Finance staff | 1 | 1 | 1 | 0 | 1 | 1 | 1 | 1 | 1 | 1 | 1 | 1 | 2 | 2 | 1 | 1 | 1 | 18 |
| 6 | clerical staff | 1 | 1 | 1 | 0 | 1 | 1 | 1 | 1 | 1 | 1 | 1 | 1 | 2 | 2 | 1 | 1 | 1 | 18 |
| 7 | CCO( Data entry) | 1 | 1 | 1 | 0 | 1 | 1 | 1 | 1 | 1 | 1 | 1 | 1 | 2 | 2 | 1 | 1 | 1 | 18 |
| | TOTAL | 17 | 16 | 10 | 2 | 8 | 8 | 8 | 17 | 16 | 20 | 9 | 9 | 37 | 31 | 9 | 12 | 5 | 234 |

Note: 1. ಹಾಲಿನ ಸ್ಯಾಚೆ ಮಾರಾಟ ಸ್ಥಿರಗೊಂಡ ನಂತರ (stabilized), ಹಾಲಿನ ಮಾರಾಟದ ಗುರಿಯನ್ನು ಉತ್ಪನ್ನಗಳ ಮಾರಾಟದ ಗುರಿಯೊಂದಿಗೆ ಪುನರ್‌ವಿಮರ್ಶಿಸಬಹುದು.

(ಹಾಲಿನ ಮಾರುಕಟ್ಟೆ ಅಭಿವೃದ್ಧಿ ಸ್ಥಿರಗೊಂಡ ನಂತರ ಕ್ಷೇತ್ರ ಸಿಬ್ಬಂದಿಗಳಿಗೆ ನಂದಿನಿ ಉತ್ಪನ್ನಗಳ ಮಾರಾಟ ಗುರಿ ಸಹ ನಿಗದಿಪಡಿಸಿ ಹಾಲು ಉತ್ಪನ್ನಗಳ ಮಾರುಕಟ್ಟೆ ವಹಿವಾಟು ಹೆಚ್ಚಿಸಿ ಷೇರ್ ಹೆಚ್ಚಿಸುವುದು.)

(Once milk market is stabilized, sales target may be reallocated along with product sales)

2. ಹೊರರಾಜ್ಯದಲ್ಲಿ ಹಾಲು ಮತ್ತು ಮೊಸರಿನ ಮಾರಾಟಕ್ಕೆ ಪ್ರತಿ ರಾಜ್ಯಕ್ಕೆ ಒಬ್ಬರಂತೆ ಸಲಹೆಗಾರರನ್ನು ನೇಮಿಸಿಕೊಳ್ಳುವುದು.

**ಹೊರ ರಾಜ್ಯದ ಹಾಲು ಮಾರಾಟ ಗುರಿಯ ಅನುಸಾರ ಈ ಕೆಳಕಂಡ ಕ್ರಮಗಳ ಅವಶ್ಯವಿರುತ್ತದೆ.**

- ಹೊರ ರಾಜ್ಯದ ಗ್ರಾಹಕರಿಗೆ ಉತ್ತಮ ಗುಣಮಟ್ಟದ ನಂದಿನಿ ಹಾಲಿನ ನಿರಂತರ ಸರಭರಾಜಿಗೆ ಅವಶ್ಯಕತೆಯಿರುವ ಪ್ರದೇಶಗಳಲ್ಲಿ ಕೋಪ್ಯಾಕಿಂಗ್ ಘಟಕಗಳನ್ನು ಹೊಂದುವುದು.
- ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿಯಿಂದ ಗುತ್ತಿಗೆ ಆದಾರದಲ್ಲಿ ಆಂದ್ರಪ್ರದೇಶ, ತೆಲಂಗಾಣ, ತಮಿಳುನಾಡು ಮತ್ತು ಮಹಾರಾಷ್ಟಗಳಿಗೆ ಅವಶ್ಯಕತೆಯಿರುವ ಮಾರುಕಟ್ಟೆ ವಿಷಯದಲ್ಲಿ ಉತ್ತಮ ಜ್ಞಾನವುಳ್ಳ ಸಲಹೆಗಾರರನ್ನು ನೇಮಕ ಮಾಡಿಕೊಂಡು ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟದ ಗುರಿ ನಿಗದಿಪಡಿಸುವುದು.
- ಆಯಾ ರಾಜ್ಯದ ಹಾಲಿನ ಮಾರುಕಟ್ಟೆಯ ಅವಧಿಯ ಗುರಿಯ ಅನುಸಾರವಾಗಿ ಸಲಹೆಗಾರರ ಅಧೀನದಲ್ಲಿ ಹಂತ ಹಂತವಾಗಿ ಸ್ಥಳೀಯ ಮಾರುಕಟ್ಟೆ ಪ್ರದೇಶಗಳಿಗೆ ಅಂದರೆ ದಿನವಹಿ 1 ಲಕ್ಷ, ಲೀಟರ್ ಹಾಲಿನ ಮಾರಾಟಕ್ಕೆ ಪ್ರಾಂತಿಯ ವ್ಯವಸ್ಥಾಪಕರು (ಮಾರಾಟ)( Regional Sales Manager(RSM), 25000 ಲೀಟರ್ ಹಾಲು ಮಾರಾಟಕ್ಕೆ ಪ್ರಾದೇಶಿಕ ವ್ಯವಸ್ಥಾಪಕರು (ಮಾರಾಟ) (Area Sales Manager(RSM) ಮತ್ತು 5000 ಲೀಟರ್ ಹಾಲಿನ ಮಾರಾಟಕ್ಕೆ, ಮಾರಾಟ ಕಾರ್ಯನಿರ್ವಹಕ(ಖಚಿಟಜ ಇಥಜಛಿಣಣುತಜ) ರವರಿಗೆ ನೇಮಿಸಿ ನಿಗದಿಪಡಿಸುವುದು.

- ಆಯಾ ಪ್ರದೇಶಗಳ ಮಾರುಕಟ್ಟೆ ಉಪಕಚೇರಿಯ ವಹಿವಾಟು ನಿರ್ವಹಣೆಗೆ ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿಯಿಂದ ಹಣಕಾಸು, ಲೆಕ್ಕಪತ್ರ ಸಿಬ್ಬಂದಿ ಹಾಗೂ ಸಿಸ್ಟಮ್ ಆಪರೇಟರ್(ಡೇಟ್ ಎಂಟ್ರಿ) ಸಿಬ್ಬಂದಿಗಳನ್ನು ನೇಮಿಸುವುದು.

## ನಂದಿನಿ ಗುಡ್ ಲೈಫ್ ಯು.ಹೆಚ್.ಟಿ ಟೆಟ್ರಾಪ್ಯಾಕ್ ಹಾಲಿನ ಮಾರಾಟ ಯೋಜನೆಯ ದೃಷ್ಟಿಕೋನ ಮತ್ತು ತಂತ್ರಗಾರಿಕೆ

ರಾಷ್ಟ್ರದ ಸಹಕಾರಿ ಹೈನೋದ್ಯಮದಲ್ಲಿ ದ್ವಿತೀಯ ಸ್ಥಾನ ಗಳಿಸಿರುವ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿಯ ಹೆಮ್ಮೆಯ ಉತ್ಪನ್ನವಾದ ನಂದಿನಿ ಗುಡ್ ಲೈಫ್ ಭಾರತಾದ್ಯಂತ ಲಕ್ಷಂತರ ಗ್ರಾಹಕರಿಗೆ ಪೌಷ್ಟಿಕಭರಿತ ಹಾಲನ್ನು ವಿತರಿಸಿ ಮೆಚ್ಚುಗೆ ಗಳಿಸಿದೆ. ಎರಡು ದಶಕಗಳ ಹಿಂದೆ ಅಂದರೆ 1999 ನೇ ಸಾಲಿನಲ್ಲಿ ನಂದಿನಿ ಗುಡ್ ಲೈಫ್ ಉತ್ಪಾದನೆ ಆರಂಭಿಸಿದ್ದು, ಭಾರತದಲ್ಲಿ ಯು.ಹೆಚ್.ಟಿ ಸಂಸ್ಕರಿಸಿದ ಅತ್ಯಾಧುನಿಕ ತಾಂತ್ರಿಕತೆಯನ್ನು ಬಳಸಿಕೊಂಡು ಪ್ಯಾಕ್ ಮಾಡಲಾದ ಹೆಮ್ಮೆಯ ಉತ್ಪನ್ನ ಟೆಟ್ರಾ ಪ್ಯಾಕ್ ಬ್ರಿಕ್ ಹಾಗೂ ಫಿನೊ ಪ್ಯಾಕ್‌ಗಳಲ್ಲಿ ದೀರ್ಘಕಾಲ ಬಾಳಿಕೆ ಬರುವ ಈ ಉತ್ಪನ್ನವು ದಕ್ಷಿಣ ಭಾರತದಲ್ಲಿ ಅಗ್ರ ಸ್ಥಾನಗಳಿಸಿದ್ದು ರಾಷ್ಟ್ರದ ಮೂಲೆ ಮೂಲೆಯನ್ನು ತಲುಪಿದ್ದು ಜಮ್ಮು ಕಾಶ್ಮೀರ ಹಾಗೂ ರಾಷ್ಟ್ರದ ಈಶಾನ್ಯ ರಾಜ್ಯಗಳಲ್ಲಿ ಲಭ್ಯವಿದೆ. ಸದರಿ ಹಾಲು ಭಾರತದ ಬಹುತೇಕ ನಗರಗಳಲ್ಲಿ ಹಾಗೂ ಇ ಕಾಮರ್ಸ್ ಚಾನಲ್ ನಲ್ಲಿಯೂ ಲಭ್ಯವಾಗುತ್ತದೆ. ನಂದಿನಿ ಗುಡ್ ಲೈಫ್ ಪೌಷ್ಟಿಕ ಭರಿತವಾಗಿದ್ದು ದೇಶ ಕಾಯುವ ನಮ್ಮ ಯೋಧರಿಗೆ ದೇಶದ ಗಡಿಭಾಗದ ಪ್ರದೇಶಗಳಿಂದ ಸರಬರಾಜು ಮಾಡಲಾಗುತ್ತಿದೆ.

ನಂದಿನಿ ಗುಡ್ ಲೈಫ್ ಹಾಲು ಪ್ರತಿದಿನ ಸರಾಸರಿ 8.0 ಲಕ್ಷ ಲೀಟರ್ ಮಾರಾಟವಾಗುತ್ತಿದ್ದು, ವಾರ್ಷಿಕವಾಗಿ ರೂ .1400 ಕೋಟಿ ವಹಿವಾಟು ಮಾಡಲಾಗುತ್ತಿದೆ. ಹಾಲನ್ನು ದೀರ್ಘಕಾಲ ಬಾಳಿಕೆ ಬರಬಲ್ಲಂತೆ ಕಾಪಾಡಲು ಯು.ಹೆಚ್.ಟಿ ಸಂಸ್ಕರಣೆಯ ಜೊತಗೆ ಅವಶ್ಯಕವಾದ ವಿಶೇಷವಾದ ಪ್ಯಾಕೇಜಿಂಗ್ ಅಳವಡಿಸಿರುವುದರಿಂದ ಈ ಹಾಲು ಫಿನೋ ಪ್ಯಾಕ್ನಲ್ಲಿ 90 ದಿನ ಹಾಗೂ ಬ್ರಿಕ್ ಪ್ಯಾಕ್‌ನಲ್ಲಿ 180 ದಿನ ವಾತಾವರಣದ ಉಷ್ಣತೆಯಲ್ಲಿ ಬಾಳಿಕೆ ಬರುವುದರಿಂದ, ಗ್ರಾಮೀಣ ಪ್ರದೇಶದಲ್ಲಿ ಫ್ರಿಜ್‌ಗಳ ಅವಶ್ಯಕತೆಯಿಲ್ಲದೆ ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲಿ ಈ ಹಾಲಿಗೆ ಹೆಚ್ಚಿನ ಬೇಡಿಕೆ ಇರುತ್ತದೆ. ಶೀಥಲೀಕರಣ ವ್ಯವಸ್ಥೆ/ ಫ್ರಿಜ್ ಅವಶ್ಯಕತೆ ಇಲ್ಲದಿರುವುದರಿಂದ ರಾಷ್ಟ್ರದ ಎಲ್ಲಾ ಭಾಗಗಳಿಗೆ ಅತಿ ವೇಗವಾಗಿ ಮಾರಾಟ ವಾಗುವ ಗ್ರಾಹಕ ವಸ್ತುಗಳ ಜೊತೆಗೆ ಸರಬರಾಜಾಗುತ್ತದೆ.

ನಂದಿನಿ ಗುಡ್ ಲೈಫ್ ಹಾಲನ್ನು ಪ್ಯಾಕ್ ಮಾಡಲು ಬಳಸುವ ಕಾರ್ಟನ್ ಗಳನ್ನು 75 ರಷ್ಟು ಕಾಗದದಿಂದ ತಯಾರಿಸಲಾಗಿದ್ದು, ಕಾಗದ ಅಂಶವನ್ನು ಮರುಬಳಕೆ ಮಾಡಬಹುದಾಗಿದೆ. ಮಾರಾಟವಾಗುವ ಶೇ.60 ರಷ್ಟು ಕಾರ್ಟನ್ ಗಳನ್ನು ಮಾರುಕಟ್ಟೆ ಪ್ರದೇಶದಿಂದ ಗ್ರಾಹಕರಿಂದ ಪಡೆದು ಮರುಬಳಕೆ ಮಾಡಿ ಇತ್ತೀಚಿನ ದಿನಗಳಲ್ಲಿ ವಿನೂತನವಾಗಿ ಕಾಗದ, ರಫ್ ಹಾಳೆ, ಡೆಸ್ಕ್ ಮತ್ತು ಕುರ್ಚಿಗಳನ್ನು ಮಾಡಲಾಗುತ್ತಿದೆ. ಇದರಿಂದ ಪರಿಸರದ ಮೇಲೆ ಆಗುವ ದುಷ್ಪರಿಣಾಮಗಳನ್ನು ತಡೆಗಟ್ಟಲು ಅನುಕೂಲವಾಗಿರುತ್ತದೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳನಂದಿನಿ ಗುಡ್ ಲೈಫ್ ಉತ್ಪನ್ನವನ್ನು ಭಾರತಾದಾದ್ಯಂತ ಮಾರಾಟ ಮಾಡಲು ಅವಶ್ಯಕವಾದ ಜಾಹೀರಾತು ನೀಡಲು (ಪ್ರಚಾರ ನಡೆಸಲು) ಬಹಳಷ್ಟು ಶ್ರಮಿಸುತ್ತಿದೆ. ಇದಕ್ಕಾಗಿ ಸಾಕಷ್ಟು ಹಣ ಖರ್ಚು ಮಾಡುವ ಜೊತೆಗೆ ಪ್ರದರ್ಶನ ಮಾರಾಟ ಯೋಜನೆಯನ್ನು ವಿಸ್ತೃತವಾಗಿ ನಡೆಸಿದೆ. ಈ ಉತ್ಪನ್ನದ ಜಾಹೀರಾತನ್ನು ದಕ್ಷಿಣ ಭಾರತದ ಮೇರು ನಟರಾದ ಶ್ರೀಮತಿ ರಮ್ಯಕೃಷ್ಣ, ಶ್ರೀ ಪುನೀತ್ ರಾಜ್‌ಕುಮಾರ್, ಕುಮಾರಿ ರಾಗಿಣಿ ದ್ವಿವೇದಿ ಹಾಗೂ ಕುಮಾರಿ ಶ್ರೇಯಾ ಶರಣ್ ಅವರಿಂದ ಮಾಡಿಸಲಾಗಿದೆ. ಹಲವಾರು ವರ್ಷಗಳಿಂದ ಈ ನಟರುಗಳು ಗ್ರಾಹಕರ ಮನವನ್ನು ಗೆದ್ದಿರುವುದರಿಂದ ಇವರುಗಳು ಉತ್ಪನ್ನವನ್ನು ಪ್ರಚಾರ ಪಡಿಸಿರುವುದರಿಂದ ಉತ್ಪನ್ನದ ಮಾರಾಟಕ್ಕೆ ಅನುಕೂಲವಾಗಿರುತ್ತದೆ.

ಉತ್ಪನ್ನಗಳ ಜಾಹೀರಾತು ಸರ್ವತೋಮುಖವಾಗಿ ಕಾಣಿಸಲು ಪ್ರಮುಖ ದೃಷ್ಯ ಮಾಧ್ಯಮಗಳಾದ ಟಿ.ವಿ ವಾಹಿನಿಗಳು, ಮಲ್ಟಿಪ್ಲೆಕ್ಸ್, ಸಿನಿಮಾ ಥಿಯೇಟರ್ ಗಳು ಹೋರ್ಡಿಂಗ್ ಗಳು, ಬಸ್ ಶೆಲ್ಟರ್ ಗಳು, ಬಸ್ ಮೇಲೆ ಪ್ರಚಾರ ನಡೆಸುವುದರ ಜೊತೆಗೆ ಮುದ್ರಣ ಮಾಧ್ಯಮಗಳಾದ ದಿನಪತ್ರಿಕೆಗಳು, ವಾರ/ಮಾಸಿಕ ಪತ್ರಿಕೆಗಳು ಹಾಗೂ ಶ್ರವಣ ಮಾಧ್ಯಮ ರೇಡಿಯೋ ಮಾಧ್ಯಮವನ್ನು ಬಳಸಿಕೊಳ್ಳಲಾಗುವುದು. ಇದರ ಜೊತೆ ಜೊತೆಗೆ ಬೇರೆ ರಾಜ್ಯಗಳ ಪ್ರಮುಖ ಸುದ್ದಿ ಹಾಗೂ ಮನರಂಜನೆ ವಾಹಿನಿಗಳಲ್ಲಿ ಆಯಾ ರಾಜ್ಯದ ಭಾಷೆಯಲ್ಲಿ ಜಾಹೀರಾತು ಪ್ರಚಾರ ಕೈಗೊಳ್ಳಲು ಯೋಜಿಸಲಾಗಿದೆ. ಇಂದಿನ ಸಮುದಾಯವನ್ನು ಆಕರ್ಷಸುತ್ತಿರುವ ಡಿಜಿಟಲ್ ಮಾಧ್ಯಮದಲ್ಲಿ ನಂದಿನಿ ಉತ್ಪನ್ನಗಳ ಪ್ರಚಾರಕ್ಕೆ ವ್ಯವಸ್ಥೆ ಮಾಡಲಾಗುತ್ತದೆ. ನಂದಿನಿ ಗುಡ್ ಲೈಫ್ ಹಾಲಿನ ಪ್ಯಾಕೆಟ್ ಮೇಲೆ ವಿಶೇಷವಾದ ಕ್ಯೂಆರ್ ಕೋಡ್ ಅಳವಡಿಸಿದ್ದು ಇದನ್ನು ಅಳವಡಿಸಿಕೊಂಡಿರುವ ಕೆಲವೇ ಬ್ರಾಂಡ್ ಗಳಲ್ಲಿ ನಂದಿನಿಯೂ ಒಂದೆಂದು ತಿಳಿಸಲು ಹೆಮ್ಮೆಯಾಗುತ್ತದೆ. ಪ್ರತಿಯೊಂದು ನಂದಿನಿ

ಪ್ಯಾಕ್ ಮೇಲೆ ಕ್ಯೂಆರ್ ಕೋಡ್ ಅಳವಡಿಸಿದ್ದು ಸಂತಸದ ಸಂಗತಿ. 2020 ರ ಸಾಲಿನಲ್ಲಿ ಡಿಜಿಟಲ್ ಮಾಧ್ಯಮದ ಮೂಲಕ ಒಟ್ಟು 48 ಮಿಲಿಯನ್ ಗ್ರಾಹಕರನ್ನು ಸಾಮಾಜಿಕ ಜಾಲತಾಣದ ಮೂಲಕ ಪ್ರಚಾರ ಕಾರ್ಯಕ್ರಮದಲ್ಲಿ ತಲುಪಿದೆ. ಕ್ಯೂಆರ್ ಕೋಡ್ ಅಳವಡಿಕೆಯಿಂದ ಗ್ರಾಹಕರ ಮನೆ ಹಾಗೂ ಮನವನ್ನು ತಲುಪುವುದರಲ್ಲಿ ಯಶ್ವಸಿಯಾಗಿದೆ. ಮೆಲ್ಕಂಡ ಮಾಧ್ಯಮದ ಹೊರತಾಗಿ ಮಾರುಕಟ್ಟೆ ಪ್ರದೇಶದಲ್ಲಿ ನೇರವಾಗಿ ಮಾರಾಟಗಾರರ ಹಾಗೂ ಗ್ರಾಹಕರನ್ನು ತಲಪಲು ಹಿಂದಿನಿಂದಲೂ ಬಳಸುತ್ತಿದ್ದ ಸಾಂಪ್ರದಾಯಿಕ ವಿಧಾನಗಳನ್ನು ಅನುಸರಿಸಲಾಗುವುದು. ಅದರಲ್ಲಿ ಸಂಚಾರಿ ವಾಹನವನ್ನು ಬಳಸಿ ದಕ್ಷಿಣ ಭಾರತದ ನಾಲ್ಕು ರಾಜ್ಯಗಳಲ್ಲಿ ಅಲ್ಲಿನ ಸ್ಥಳೀಯ ಭಾಷೆ ಬಲ್ಲವರನ್ನು ಬಳಸಿಕೊಂಡು ಗ್ರಾಮೀಣ ಪ್ರದೇಶಗಳಲ್ಲಿ ಪ್ರಚಾರ ಮಾಡಲಾಗುವುದು. ಇತರೆ ಬ್ರಾಂಡ್‌ಗಿಂತ ವಿಶೇಷ ಗುಣವಿರುವ ನಂದಿನಿ ಗುಡ್‌ಲೈಫ್ ಹಾಲಿನ ಮಾದರಿ ಒದಗಿಸಿದಾಗ ನೇರವಾಗಿ ನೋಡಿದ ಗ್ರಾಹಕರು ಉತ್ಪನ್ನದ ಬಗ್ಗೆ ವಿಶೇಷವಾದ ನಂಬಿಕೆ ಹೊಂದಲು ಸಹಕಾರಿಯಾಗಿ ಪರಿಣಮಿಸಲಿದೆ. ಉತ್ಪನ್ನಗಳು ಮಾರಾಟವಾಗುವ ಜಾಗದಲ್ಲಿ ನಂದಿನಿ ಬ್ರಾಂಡ್ ಹಾಗೂ ಉತ್ಪನ್ನಗಳನ್ನು ನೆನಪಿಸುವಂತಹ ಪ್ರಚಾರ ಸಾಮಗ್ರಿಗಳಾದ ಪೋಸ್ಟರ್,ಡ್ಯಾಂಗ್ಲರ್ಸ್, ಡೀಲರ್ ಬೋರ್ಡ್ ಮುಂತಾದವುಗಳನ್ನು ಅಳವಡಿಸಲಾಗುವುದು. ವಿತರಣಾ ಜಾಲದಲ್ಲಿ ವಿನೂತನವಾದ ಪದ್ದತಿಯನ್ನು ಅಳವಡಿಸಿ 100 ಮಿ.ಲಿ/200 ಮಿ.ಲಿ ಪ್ಯಾಕ್‌ಗಳನ್ನು ಇರಿಸಲು ಒಂದು ಪ್ಲಾಸ್ಟಿಕ್ ಜಾರ್ ನೀಡಲಾಗಿದ್ದು, ಇದರಿಂದ ನಂದಿನಿ ಹಾಲಿನ ಪ್ಯಾಕ್‌ಗಳು ಗ್ರಾಹಕರ ಕಣ್ಣಿಗೆ ಕಾಣುವಂತಾಗಿ ಮಾರಾಟ ಹೆಚ್ಚಾಗಲು ಕಾರಣವಾಗಲಿದೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳಿ ಹಾಗೂ ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳು ಯು.ಹೆಚ್.ಟಿ ಹಾಲನ್ನು ಉತ್ಪಾದನೆ ಮಾಡುವ ವ್ಯವಸ್ಥೆಗೆ ಸಾಕಷ್ಟು ಹೂಡಿಕೆ ಮಾಡಿವೆ. ಹೀಗಾಗಿ ಭಾರತಾದ್ಯಂತ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಉತ್ಪಾದನಾ ಘಟಕಗಳ ಸಾಮರ್ಥ್ಯ ಹೆಚ್ಚಳದ ಜೊತೆಗೆ ಫಿಲ್ಲಿಂಗ್ ಹಾಗೂ ಪ್ಯಾಕಿಂಗ್ ವ್ಯವಸ್ಥೆಗೆ ಆಯೋಜಿಸಿದೆ.

ಕಳೆದ 5 ವರ್ಷಗಳಲ್ಲಿ ಯು.ಹೆಚ್.ಟಿ ಹಾಲಿನ ಮಾರಾಟದಲ್ಲಿ ಶೇ.13 ರಷ್ಟು ಪ್ರಗತಿ ಸಾಧಿಸಿದೆ. ಇದನ್ನು ಗಣನೆಗೆ ತೆಗೆದುಕೊಂಡರೆ ಶೇ. 13 ರಷ್ಟು ವಾರ್ಷಿಕ ಪ್ರಗತಿಯಂತೆ 2025-26 ರ ವೇಳೆಗೆ ಪ್ರತಿದಿನ ಸರಾಸರಿ 15 ಲಕ್ಷ ಲೀಟರ್ ಮಾರಾಟ ಗುರಿ ಸಾಧಿಸಬಹುದೆಂದು ಯೋಜಿಸಲಾಗಿದೆ.

| Description | 2020-21 | 2021-22 | 2022-23 | 2023-24 | 2024-25 | 2025-26 | 2026-27 |
|---|---|---|---|---|---|---|---|
| Capacity Plan(LPD) | 10 Lakh | 10 Lakh | 12 Lakh | 14 Lakh | 15 Lakh | 17 Lakh | 19 lakh |
| Sales Forecast(LPD) | 8 Lakh | 9 Lakh | 10.2 Lakh | 11.5 Lakh | 13 Lakh | 15 Lakh | 16 lakh |

ಫ್ಲೆಕ್ಸಿ ಪ್ಯಾಕ್ ನಲ್ಲಿ ಮಾರಾಟವಾಗುವ ಉತ್ಪನ್ನ ಕಳೆದ 5 ವರ್ಷಗಳಲ್ಲಿ ಶೇ.15 ರಷ್ಟು ಪ್ರಗತಿ ಸಾಧಿಸಿದ್ದು ಕಳೆದ ಸಾಲುಗಳಲ್ಲಿ ಅಭಿವೃದ್ಧಿಯನ್ನು ಗಣನೆಗೆ ತೆಗೆದುಕೊಂಡರೆ 2025-26 ರ ಸಾಲಿನಲ್ಲಿ ಸಹ ಶೇ.15 ರಷ್ಟು ಏರಿಕೆಯಾಗಬಹುದೆಂದು ಆಶಿಸಿ ಪ್ರತಿ ನಿತ್ಯ 2.10 ಲಕ್ಷ ಲೀಟರ್ ಫ್ಲೆಕ್ಸಿ ಹಾಲು ಮಾರಾಟವಾಗುವ ಆಶಯ ಹೊಂದಿದ್ದು ವರ್ಷವಾರು ಮಾರಾಟದ ವಿವರ ಈ ಕೆಳಕಂಡಂತಿದೆ.

| Description | 2020-21 | 2021-22 | 2022-23 | 2023-24 | 2024-25 | 2025-26 | 2026-27 |
|---|---|---|---|---|---|---|---|
| Sales Forecast(LPD) | 1.05 Lakh | 1.20 Lakh | 1.38 Lakh | 1.59 Lakh | 1.83 Lakh | 2.10 Lakh | 2.40 Lakh |

ಹೆಚ್ಚುತ್ತಿರುವ ಯು.ಹೆಚ್.ಟಿ ಹಾಲಿನ ಮಾರಾಟ ಪ್ರಮಾಣದ ಏರಿಕೆಯನ್ನು ಗಮನಿಸಿ ಕರ್ನಾಟಕ ಸಹಕಾರ ಹಾಲು ಮಹಾಮಂಡಳಿ ಹಾಗೂ ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳು ಯು.ಹೆಚ್.ಟಿ ಹಾಲನ್ನು ಉತ್ಪಾದಿಸುವ ಸಾಮಾರ್ಥ್ಯವನ್ನು ಹೆಚ್ಚಿಸಲು ಸೂಕ್ತ ಕ್ರಮ ಕೈಗೊಂಡು ಮುಂದಿನ 5 ವರ್ಷಗಳಲ್ಲಿ ಉಂಟಾಗುವ ಹಾಲಿನ ಬೇಡಿಕೆಯನ್ನು ಪೂರೈಸಬಹುದಾಗಿದೆ.

**2025-26 ರ ವೇಳೆಗೆ ದಿನ ನಿತ್ಯ 15 ಲಕ್ಷ ಲೀ ಹಾಲಿನ ಮಾರಾಟಕ್ಕೆ ಮಾಡಬೇಕಾದ ಕಾರ್ಯಕ್ರಮಗಳು**

ಈ ಮೇಲ್ಕಂಡ ಕಾರ್ಯಗಳ ಫಲವಾಗಿ ನಂದಿನಿ ಗುಡ್‌ಲೈಫ್ ಹಾಲಿನ ಮಾರಾಟದ ಪ್ರಮಾಣ ಭಾರತದಲ್ಲಿ ಅಮುಲ್ ಬ್ರಾಂಡ್ ಹಾಲಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಮಾರಾಟವಾಗಿ ಮಾರುಕಟ್ಟೆಯ ಶೇ.40 ರಷ್ಟು ಪಾಲನ್ನು ಉದ್ದೇಶಿಸಿದೆ. ಇದೇ ರೀತಿಯ ಪ್ರಗತಿಯನ್ನು ಉಳಿಸಿಕೊಳ್ಳಲು 2025-26 ರ ದೂರಗಾಮಿ ಯೋಜನೆಯಲ್ಲಿ ಈ ಕೆಳಕಂಡ ಕಾರ್ಯತಂತ್ರ ಅನುಸರಿಸಲಾಗುವುದು.

1. **ರೀಟೇಲ್ ವಿತರಣೆ ಜಾಲವನ್ನು ವಿಸ್ತರಿಸುವ ಬಗ್ಗೆ.**
   ನಂದಿನಿ ಗುಡ್‌ಲೈಫ್ ಹಾಲಿನ ಮಾರುಕಟ್ಟೆ ಜಾಲದಲ್ಲಿ 161 ವಿತರಕರು/ ಸೂಪರ್ ಸ್ಟಾಕಿಸ್ಟ್‌ಗಳು, 1329 ಸಗಟು ಮಾರಾಟಗಾರರು 1.15 ಲಕ್ಷ ರೀಟೇಲ್ ಅಂಗಡಿಗಳಿವೆ. ರಾಷ್ಟ್ರದ ಒಟ್ಟು 28 ರಾಜ್ಯಗಳು ಹಾಗೂ 8 ಕೇಂದ್ರಾಡಳಿತ ಪ್ರದೇಶಗಳಲ್ಲಿ ನಂದಿನಿ ಗುಡ್‌ಲೈಫ್ 20 ರಾಜ್ಯಗಳು ಹಾಗೂ 5 ಕೇಂದ್ರಾಡಳಿತ ಪ್ರದೇಶದಲ್ಲಿ ಮಾರಾಟ ಜಾಲ ಹೊಂದಿದ್ದೇವೆ.

   ಮಾರಾಟ ಜಾಲದ ಸೃಷ್ಟಿಯಲ್ಲಿ ಅಮುಲ್ ಮಾದರಿಯನ್ನೆ ಅಳವಡಿಸಿಕೊಂಡು ಮಾರಾಟದಲ್ಲಿ ಪ್ರಗತಿಯನ್ನು ಸಾಧಿಸಲಾಗುತ್ತಿದೆ. (ಅಮುಲ್ ಹತ್ತು ಸಾವಿರ ಡೀಲರ್‌ಗಳು 167 ಸೂಪರ್ ಸ್ಟಾಕಿಸ್ಟ್ ಹೊಂದಿದ್ದು 10 ಲಕ್ಷ ರೀಟೇಲ್ ಅಂಗಡಿಗಳನ್ನು ಹೊಂದಿದೆ.) ಮುಂಬರುವ ದಿನಗಳಲ್ಲಿ ಮಾರಾಟ ಜಾಲವನ್ನು ವೃದ್ಧಿಗೊಳಿಸುವಾಗ ಹತ್ತು ಸಾವಿರ ಜನ ಸಂಖ್ಯೆಗೆ ಒಬ್ಬ ಡೀಲರ್ ಇರುವಂತೆ ಗುಡ್‌ಲೈಫ್ ಮಾರಾಟದ ಪ್ರಗತಿಯನ್ನು ಸಾಧಿಸಲಾಗುವುದು. ಮುಂದಿನ ದಿನಗಳಲ್ಲಿ ನಂದಿನಿಯ ಉತ್ಪನ್ನಗಳನ್ನು ರಾಷ್ಟ್ರದ ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಾರಾಟ ಜಾಲ ಸ್ಥಾಪಿಸಲು ಕ್ರಮವಿಡಲಾಗುವುದು.

## 2.0 ಹೆಚ್ಚುವರಿ ಹಾಲು

ಒಕ್ಕೂಟಗಳಲ್ಲಿ ಶೇಖರಣೆಯಾದ ಹಾಲು ಸ್ಯಾಚೆ ರೂಪದಲ್ಲಿ ಮಾರಾಟವಾಗದೇ ಉಳಿದ ಹಾಲನ್ನು, ಹಾಲಿನ ಉತ್ಪನ್ನಗಳು ಹಾಗೂ ಕ್ಷೀರಭಾಗ್ಯ ಯೋಜನೆಯ ವಿತರಣೆಗೆ ಅವಶ್ಯಕವಿರುವ ಹಾಲಿನಪುಡಿ ಉತ್ಪಾದನೆಗೆ ಬಳಸಿ ಉಳಿದ ಪ್ರಮಾಣವನ್ನು ಕರ್ನಾಟಕ ಸಹಕಾರ ಹಾಲು ಮಹಾಮಂಡಳಮಾರಾಟ ಮಾಡಲು ಯೋಜಿಸಿದೆ. ಹಾಲಿನ ಶೇಖರಣೆ ಹಾಗೂ ವಿತರಣೆಯ ಪ್ರಮಾಣ ಈ ಕೆಳಕಂಡಂತಿದೆ. ಶೇಖರಣೆಯಾದ ಹಾಲಿನಲ್ಲಿ ಸರಾಸರಿ ಶೇ. 4 ರಷ್ಟು ಜಿಡ್ಡಿನಾಂಶ ಹಾಗೂ ಶೇ. 8.5 ರಷ್ಟು ಜಿಡ್ಡೇತರ ಘನಪದಾರ್ಥವನ್ನು ಗಣನೆಗೆ ತೆಗೆದುಗೊಂಡು ಹಾಲಿನ ಘನಾಂಶದ ಪ್ರಮಾಣವನ್ನು ನಿಗದಿ ಪಡಿಸಲಾಗಿದೆ. ಲಾಭ ಬರುವಂತಹ ಉತ್ಪನ್ನಗಳನ್ನು ತಯಾರಿಸಿ ಉಳಿದ ಹಾಲನ್ನು ಪುಡಿಯಾಗಿ ಪರಿವರ್ತಿಸುವಂತೆ ಯೋಜಿಸಲಾಗಿದೆ.

ಅನುಬಂದ

2020-21 ನೇ ಸಾಲಿನಲ್ಲಿ ದಿನನಿತ್ಯ ಸರಾಸರಿ 81.32 ಲಕ್ಷ ಲೀಟರ್ ಹಾಲನ್ನು 15 ಜಿಲ್ಲಾ ಹಾಲು ಒಕ್ಕೂಟಗಳು ಶೇಖರಿಸಿವೆ. ಕರ್ನಾಟಕ ಸಹಕಾರ ಹಾಲು ಮಹಾಮಂಡಳಿಯ ಒಕ್ಕೂಟಗಳು ಮತ್ತು ಮದರ್ ಡೇರಿಯು ದಿನನಿತ್ಯ ಸರಾಸರಿ ಒಟ್ಟು 34.04 ಲಕ್ಷ ಲೀಟರ್ ಸ್ಯಾಚೆ ರೂಪದಲ್ಲಿ ಹಾಲನ್ನು ರಾಜ್ಯದಲ್ಲಿ ಮಾರಾಟ ಮಾಡಿವೆ.ಪ್ರತಿನಿತ್ಯ ಸರಾಸರಿ 5.09 ಲಕ್ಷ ಕೆ.ಜಿ ಹಾಲನ್ನು ಮೊಸರಿನ ಉತ್ಪಾದನೆಗೆ ಮತ್ತು 1.50 ಲಕ್ಷ ಲೀಟರ್ ಹಾಲನ್ನು ತಾಜಾ ಉತ್ಪನ್ನಗಳ ತಯಾರಿಕೆಗೆ ಬಳಸಿದ್ದು. 7.0 ಲಕ್ಷ ಲೀಟರ್ ಹಾಲನ್ನು ಹಾಲಿನ ಪುಡಿಯಾಗಿ ಪರಿವರ್ತಿಸಿ ಕ್ಷೀರಭಾಗ್ಯ ಯೋಜನೆಗಾಗಿ ನೀಡಲಾಗಿದೆ.( ಪಾಶ್ಚೀಕರಿಸಿದ ಸ್ಯಾಚೆಟ್ ಹಾಲನ್ನು ದಿನನಿತ್ಯ ಸರಾಸರಿ 1.70 ಲಕ್ಷ ಲೀಟರ್ ಹಾಲನ್ನು ಹಾಗೂ)

**3.0 ಉತ್ಪನ್ನವಾರು ಸಾಮರ್ಥ್ಯದ ಘಟಕಗಳು**

2020-21 ರನ್ವಯ ಯು.ಹೆಚ್.ಟಿ ಹಾಲು, ತುಪ್ಪ, ಬೆಣ್ಣೆ, ಹಾಲಿನ ಪುಡಿ, ದೀಡಿರ್ ಮಿಶ್ರಣ, ಸಿಹಿ ಉತ್ಪನ್ನ, ಬಿಸ್ಕೆಟ್ ಮುಂತಾದ ಉತ್ಪನ್ನಗಳನ್ನು ತಯಾರಿಸಲು ಸನ್ನದ್ಧವಾಗಿರುವ ಘಟಕಗಳು ಈ ಕೆಳಕೆಂಡಂತಿದೆ.

**4.0 ಹಾಲಿನ ಉತ್ಪನ್ನಗಳ ಮಾರಾಟ**

ಕರ್ನಾಟಕ ಸಹಕಾರ ಹಾಲು ಮಹಾಮಂಡಳಿ ಹಾಗೂ ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳು ಕಳೆದ ಹಲವಾರು ವರ್ಷಗಳ ಪರಿಶ್ರಮದಿಂದ ವಿವಿಧ ರೀತಿಯ ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ಮಾರಾಟಕ್ಕೆ ಒದಗಿಸುತ್ತಿವೆ. ಪ್ರಸ್ತುತ 75 ಹಾಲಿನ ಉತ್ಪನ್ನಗಳನ್ನು ಸುಮಾರು 350 ವಿವಿಧ ಪ್ರಮಾಣದ ಪ್ಯಾಕ್‌ಗಳಲ್ಲಿ (SKU) ಮಾರಾಟ ಮಾಡುತ್ತಿದೆ.

ಇದರಲ್ಲಿ

- ತುಪ್ಪ 15 ರೀತ್ಯಾ ಪ್ರಮಾಣದ ಪ್ಯಾಕ್‌ನಲ್ಲಿ
- 6 ತಿಂಗಳು ಬಾಳಿಕೆಬರುವ  14 ಉತ್ಪನ್ನಗಳು
- ಇದರಲ್ಲಿ ಹಾಲಿನ ಪುಡಿ, ಡೈರಿ ವೈಟ್ನರ್, ಬಾದಾಮ್ ಮಿಕ್ಸ್, ಜಾಮೂನ್ ಮಿಕ್ಸ್, ಪಾಯಸ ಮಿಕ್ಸ್, ಸಿರಿಧಾನ್ಯ ಮಿಕ್ಸ್.
- ರೆಫ್ರಿಜೆರೇಟ್‌ರ್‌ನಲ್ಲಿ ಇಡಬೇಕಾದ 5 ಉತ್ಪನ್ನಗಳು–ಯೋಗರ್ಟ್, ಪನ್ನೀರ್, ಪ್ರೊಸೆಸ್ಡ್ ಚೀಸ್, ಕೋವಾ, ಶ್ರೀಖಂಡ್
- ಪ್ರೊಜನ್ ಉತ್ಪನ್ನಗಳು –2 ಬೆಣ್ಣೆ ಹಾಗೂ ಮೊಜಾರೆಲಾ ಚೀಸ್
- 14 ರಿಂದ 30 ದಿವಸ ಬಾಳಿಕೆ ಬರುವ ಸಿಹಿ ಉತ್ಪನ್ನಗಳು–20
- ದೀರ್ಘಾವದಿ ಬಾಳಿಕೆ ಬರುವ ಗುಲಾಬ್ ಜಾಮೂನ್ ಮಿಕ್ಸ್, ಕುಂದಾ, ತಿನ್ನಲು ಸಿದ್ಧವಿರುವ ರಸಗುಲ್ಲಾ ಹಾಗೂ ಗುಲಾಬ್ ಜಾಮೂನ್
- ಬೇಕರಿ ಉತ್ಪನ್ನಗಳು, ಕುಕೀಸ್, ಕೊಕೆನಟ್ ಕುಕ್ಕೀಸ್– ಸಿಹಿ ಮತ್ತು ಉಪ್ಪು, ಜೀರಾ ಮತ್ತು ಚಿಲ್ಲಿ, ಸ್ವಾದಗಳಲ್ಲಿ ರಸ್ಕ್.
- 4 ತರಹದ ಖಾರ: ಬಾಂಬೆ ಮಿಕ್ಸ್ಚರ್, ಖಾರಾಬೂಂದಿ, ಕೊಡುಬಳೆ, ಬೆಣ್ಣೆ ಮುರುಕು.
- 8 ತರಹದ ಚಾಕೋಲೆಟ್–ಚಿಟ್‌ಚಾಟ್, ಗುಡ್‌ಲೈಫ್, ಕ್ರೀಮಿಬೈಟ್,ಕಾರ್ಮೇಲ್‌ಬೈಟ್, ಟ್ರೀಟೋ, ಚಾಕೊಕ್ರಿಸ್ಪ, ಚಾಕೋಲಿಸಿಯುಸ್, ಎಕ್ಲೇರ್ಸ್
- 4 ತರಹದ ತಕ್ಷಣ ತಿನ್ನುವ ತಿನಿಸುಗಳು– ಸಿಹಿಪೊಂಗಲ್, ಖಾರಾಪೊಂಗಲ್, ಸಿರಿಧಾನ್ಯಪಾಯಸ ಹಾಗೂ ಬಾದಾಮ್‌ಹಲ್ವಾ

ಕರ್ನಾಟಕ ಸಹಕಾರ ಹಾಲು ಮಹಾಮಂಡಳಿರಾಜ್ಯದಾದ್ಯಂತ ಹಾಗೂ ನೆರೆ ರಾಜ್ಯಗಳಲ್ಲಿ ಉತ್ಪನ್ನಗಳನ್ನು ಮಾರಾಟ ಮಾಡಲು ವ್ಯವಸ್ಥಿತ ಮಾರಾಟ ಜಾಲವನ್ನು ಸೃಷ್ಟಿಸುವ ನಿಟ್ಟಿನಲ್ಲಿ, ರಾಜ್ಯದಲ್ಲಿ 10 ಮಾರಾಟ ಡಿಪೋಗಳು ಅಂದರೆ– ಬೆಂಗಳೂರು, ಮೈಸೂರು, ಹುಬ್ಬಳ್ಳಿ, ತುಮಕೂರು, ಹಾಸನ, ಮಂಗಳೂರು, ದಾವಣಗೆರೆ,ಶಿವಮೊಗ್ಗ, ಬಳ್ಳಾರಿ, ಕಲಬುರ್ಗಿ, ಯಾದಗಿರಿ ಮತ್ತು  ಹೊರ ರಾಜ್ಯವಾದ ಆಂದ್ರ ಪ್ರದೇಶದಲ್ಲಿ ವಿಜಯವಾಡ ಮತ್ತು ತಿರುಪತಿಯಲ್ಲಿ ತೆಲಂಗಾಣ ರಾಜ್ಯದ ಹೈದರಬಾದ್‌ನಲ್ಲಿ, ತಮಿಳುನಾಡಿನ ಚೆನ್ನೈ ಹಾಗೂ ತ್ರಿಚಿಯಲ್ಲಿ ಮತ್ತು ಕೇರಳ ರಾಜ್ಯದ ಕಣ್ಣೂರು ಹಾಗೂ ಕೊಟ್ಟಾಯಂನಲ್ಲಿ ಹೀಗೆ ಒಟ್ಟು 16 ಸ್ಥಳಗಳಲ್ಲಿ ಮಾರಾಟ ಮಳಿಗೆಗಳನ್ನು  ಸ್ಥಾಪಿಸಲಾಗಿದೆ, ಸೂಪರ್ ಸ್ಟಾಕಿಸ್ಟಾಗಿ 10 ವಿವಿಧ ರಾಜ್ಯಗಳಲ್ಲಿ ಮಾರಾಟ ಜಾಲವನ್ನು ರಚಿಸಲಾಗಿದೆ. ವಿತರಕರು ಹಾಗೂ ವಿತರಣಾ ಜಾಲದ ವಿವರವನ್ನು ಕೆಳಕಂಡ ನಕ್ಷೆಯಲ್ಲಿ ನಮೂದಿಸಲಾಗಿದೆ.

ಬಹಳಷ್ಟು ಜಿಲ್ಲಾ ಹಾಲು ಒಕ್ಕೂಟಗಳಲ್ಲಿ ವರ್ಷದಾದ್ಯಂತ ಹೆಚ್ಚು ಪ್ರಮಾಣ ಹಾಲು ಶೇಖರಣೆಯಾಗುತ್ತಿದ್ದು ಶೇ.25 ರಿಂದ 30 ರಷ್ಟು ಪ್ರಮಾಣದ ಹಾಲನ್ನು ಪುಡಿಯಾಗಿ ಪರಿವರ್ತಿಸಲಾಗುತ್ತಿದೆ. ಇದೆ ಪರಿಸ್ಥಿತಿ ಮುಂಬರುವ ವರ್ಷಗಳಲ್ಲಿ ಮುಂದುವರೆಯುವ ಸಾಧ್ಯತೆಯಿದೆ, ಆದ್ದರಿಂದ ಕರ್ನಾಟಕ ರಾಜ್ಯದಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟ ಪ್ರಮಾಣದಲ್ಲಿ ಹಾಲಿನ ಶೇಖರಣೆಗೆ ಅನುಗುಣವಾಗಿ ಏರಿಕೆ ಆಗದಿರುವುದರಿಂದ ಹೊರ ರಾಜ್ಯಗಳಲ್ಲಿ ಮಾರಾಟ ಜಾಲ ರೂಪಿಸುವ ಅವಶ್ಯಕತೆಯಿದೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳಿ ಹಾಗೂ ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳು ಕಳೆದ 4 ದಶಕಗಳಲ್ಲಿ ಹಾಲು ಸಂಸ್ಕರಣೆ ಹಾಗೂ ಹಾಲಿನ ಉತ್ಪನ್ನಗಳ ತಯಾರಿಕೆಗೆ ಅವಶ್ಯಕ ಉತ್ಪಾದನಾ ಘಟಕಗಳನ್ನು ಸ್ಥಾಪಿಸಿವೆ ಇದರಿಂದ ಮೌಲ್ಯವರ್ಧಿತ ಉತ್ಪನ್ನಗಳನ್ನು ಉತ್ಪಾದಿಸಿ ಇವುಗಳ ವಿಲೇವಾರಿಗೆ ಅವಶ್ಯಕ ಜಾಲತಾಣಗಳ ಸೃಷ್ಟಿಸುವ ಅಗತ್ಯವಿದೆ. ನಮ್ಮ ದೇಶದ ಪಶ್ಚಿಮ, ಪೂರ್ವ ಮತ್ತು ಉತ್ತರ ಭಾರತದ ಪ್ರದೇಶಗಳಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ಬೇಡಿಕೆಯಿದೆ. ಆದ್ದರಿಂದ ಹೆಚ್ಚು ಹಾಲು ಬಳಕೆ ಮಾಡುವ ಯು.ಹೆಚ್.ಟಿ ಹಾಲು, ತುಪ್ಪ, ಎಸ್.ಎಂ.ಪಿ, ಡೈರಿವೈಟ್ನರ್, ಚೀಸ್, ಸುವಾಸಿತ ಹಾಲು, ಚಾಕೋಲೇಟ್, ಬಿಸ್ಕೆಟ್, ತಿನ್ನಲು ಸಿದ್ದವಾದ ಸಿಹಿ, ಖಾರಾ ಮುಂತಾದ ಉತ್ಪನ್ನಗಳನ್ನು ದೇಶದಾದ್ಯಂತ ಮಾರಾಟ ಮಾಡಲು ಯೋಜಿಸಿದೆ.

ಇದಕ್ಕಾಗಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಹೊಸದಾಗಿ ಹತ್ತು ಡಿಪೋಗಳನ್ನು ತೆರೆಯಲು ಹಾಗೂ ವಿವಿಧ ರಾಜ್ಯಗಳಲ್ಲಿ 40 ಮಾರಾಟ ಡಿಪೋಗಳನ್ನು ತೆರೆದು ಮಾರಾಟ ಜಾಲ ರೂಪಿಸಲು ಯೋಜಿಸಿಲಾಗಿದೆ.

ನಂದಿನಿ ಗುಡ್ ಲೈಫ್ ಯು.ಹೆಚ್.ಟಿ ಹಾಲನ್ನು ಕಳೆದ ಹತ್ತು ವರ್ಷಗಳಿಂದ ಭಾರತೀಯ ಯೋದರಿಗೆ ಸರಬರಾಜು ಮಾಡಲಾಗುತ್ತಿದೆ. ಕಳೆದ ಕೆಲವು ವರ್ಷಗಳಿಂದ ನಂದಿನಿ ಹಾಲಿನ ಪುಡಿ, ಬೆಣ್ಣೆ ಹಾಗೂ ತುಪ್ಪವನ್ನು ರಕ್ಷಣಾ ಇಲಾಖೆಗೆ ಸರಬರಾಜು ಮಾಡಲಾಗಿದೆ. ಕರ್ನಾಟಕ ಸಹಕಾರ ಹಾಲು ಮಹಾಮಂಡಳುಮುಂಬರುವ ದಿನಗಳಲ್ಲಿ ಚೀಸ್, ಪನ್ನೀರ್ ಉತ್ಪನ್ನಗಳನ್ನು ರಾಷ್ಟ್ರೀಯ ಸಹಕಾರಿ ಡೇರಿ ಮಹಾಮಂಡಳದ ಮೂಲಕ ಮಾರಾಟ ಮಾಡಲು ಚಿಂತಿಸಲಾಗಿದೆ. ಕಳೆದ ಐದು ವರ್ಷಗಳಲ್ಲಿ ಮಾರಾಟ ಮಾಡಿದ ಹಾಲಿನ ಉತ್ಪನ್ನಗಳ ಪಟ್ಟಿ ಅನುಭಂದ- ರಲ್ಲಿದೆ. 2020-21 ನೇ ಸಾಲಿನ ವ್ಯವಹಾರವನ್ನು ಪರಿಗಣಿಸಿ 2026-27 ನೇ ಸಾಲಿನ ದೂರಗಾಮಿ ಯೋಜನೆಯನ್ನು ರೂಪಿಸಲಾಗಿದೆ. ಪ್ರಮಾಣದ ವಿವರ (ಅನುಭಂದ) ರಲ್ಲಿದೆ.

ಪ್ರತಿಯೊಂದು ಹಾಲಿನ ಉತ್ಪನ್ನಗಳ ಮಾರಾಟದ ವಿವರವಿಲ್ಲಿದೆ.

## 4.1 ರಿಟೇಲ್ ಪ್ಯಾಕ್‌ನಲ್ಲಿ ತುಪ್ಪ.

ರಾಷ್ಟ್ರದಲ್ಲಿ ಮಾರಾಟವಾಗುವ ಹಾಲಿನ ಉತ್ಪನ್ನಗಳಲ್ಲಿ ಹಾಲಿನ ನಂತರ ತುಪ್ಪ ಸಿಂಹಪಾಲು ಪಡೆದಿದೆ. ರಾಷ್ಟ್ರದ ಆಹಾರ ತಯಾರಿಕೆಯಲ್ಲಿ ತುಪ್ಪದ ಬಾಳಕೆ ಹೆಚ್ಚಾಗಿರುತ್ತದೆ. ದೇಶದ ತುಪ್ಪದ ಮಾರಾಟದಲ್ಲಿ ಕಳೆದ 10 ವರ್ಷಗಳಲ್ಲಿ ಶೇ.11 ರಷ್ಟು ವೃದ್ಧಿಯಾಗಿದ್ದು. ಮಾರಾಟದ ಪ್ರಮಾಣ ದಿನನಿತ್ಯ 2500 ಮೆ.ಟನ್‌ಗಳಾಷ್ಟಾಗಿದೆ. ಇತರೇ ಉತ್ಪನ್ನಗಳಂತೆ ತುಪ್ಪದ ಮಾರಾಟವು ಖಾಸಗಿ ಮಾರಾಟಗಾರರಿಂದಲೇ ಆಗುತ್ತಿದೆ. ಭಾರತದಲ್ಲಿನ ತುಪ್ಪದ ಮಾರಾಟ ಶೇ. 70 ರಷ್ಟು ಖಾಸಗೀ ವ್ಯಕ್ತಿಗಳಿಂದಲೇ ನಿರ್ವಹಿಸಲಾಗುತ್ತಿದೆ. ತುಪ್ಪದ ಸೇವನಾ ಪ್ರಮಾಣ ಉತ್ತರಪ್ರದೇಶ ಶೇ.14, ರಾಜಸ್ಥಾನ ಶೇ.9.6, ಮಧ್ಯಪ್ರದೇಶ ಶೇ.9.3, ಮಹಾರಾಷ್ಟ್ರ ಶೇ.9.1, ಗುಜರಾತ್ ಶೇ.7.6, ಆಂದ್ರಪ್ರದೇಶ ಮತ್ತು ಹರಿಯಾಣ ಶೇ.4.6 ರಷ್ಟಾಗಿದೆ.

ನಂದಿನಿಯ ಉತ್ಪನ್ನಗಳಲ್ಲಿ ತುಪ್ಪ ಪ್ರಮುಖವಾಗಿದ್ದು 2020-21 ರ ಸಾಲಿನಲ್ಲಿ ಪ್ರತಿತಿಂಗಳು 1473.2 ಮೆ.ಟನ್ ಮಾರಾಟವಾಗಿದೆ. ಇದರ ಪ್ರಮಾಣ 2026-27 ನೇ ಸಾಲಿನಲ್ಲಿ ಪ್ರತಿತಿಂಗಳು 5460 ಮೆ.ಟನ್ ಗೆ ಏರಿಕೆಯಾಗುವುದೆಂದು ಆಶಿಸಲಾಗಿದೆ.

ನಂದಿನಿ ತುಪ್ಪವನ್ನು 18 ವಿವಿಧ ಪ್ರಮಾಣದಲ್ಲಿ ಪ್ಯಾಕ್(SKU) ಮಾಡುತ್ತಿದ್ದು, ಮುಂಬರುವ ದಿನಗಳಲ್ಲಿ ಇನ್ನೂ ಹಲವಾರು ಪ್ರಮಾಣಗಳಲ್ಲಿ ಪ್ಯಾಕ್‌ಮಾಡುವ ಯೋಜನೆಯಿದ್ದು ಆರ್ಥಿಕವಾಗಿ ಹಿಂದುಳಿದ ವರ್ಗದ ಸಮುದಾಯಗಳಿಗೆ ರೂ.10 ಪ್ಯಾಕ್ ಮಾಡಲು ಹಾಗೂ ಶೀತ ಪ್ರದೇಶವಾದ ಜಮ್ಮು ಕಾಶ್ಮೀರ, ಹಿಮಾಚಲ ಪ್ರದೇಶ ಮತ್ತು ಅರುಣಾಚಲ ಪ್ರದೇಶದವರಿಗಾಗಿ ಟಿನ್ ಗಳಲ್ಲಿ ಪ್ಯಾಕ್ ಮಾಡುವ ಯೋಜನೆಯಿದೆ.

ತಿರುಮಲ ಶ್ರೀ ತಿರುಪತಿ ದೇವಸ್ಥಾನದಲ್ಲಿ ಭಕ್ತರಿಗೆ ನೀಡುವ ಲಡ್ಡು ತಯಾರಿಸಲು ಗುಣಮಟ್ಟವುಳ್ಳ ನಂದಿನಿ ತುಪ್ಪವನ್ನು ಬಳಸಲಾಗುತ್ತಿರುವುದು ನಮಗೆ ಹೆಮ್ಮೆಯ ಸಂಗತಿ ನಂದಿನಿ ಗುಣಮಟ್ಟದ ಉತ್ಕೃಷ್ಟತೆಯಿಂದಾಗಿ ಮೈಸೂರ್ ಪಾಕ್ ಹಾಗೂ ಇತರೆ ಸಿಹಿ ಉತ್ಪನ್ನಗಳ ತಯಾರಕರು ನಂದಿನಿ ತುಪ್ಪವನ್ನು ಮಾತ್ರ ಬಳಸುತ್ತಿದ್ದಾರೆ.
ವಿವಿಧ ರೀತಿಯ ತುಪ್ಪದ ತಯಾರಿಕೆಗೆ ಯೋಜಿಸಲಾಗುತ್ತಿದ್ದು, ಆಯುರ್ವೇದ/ಖಾರದ ವಿಶೇಷ ತುಪ್ಪವನ್ನು ತಯಾರಿಸಲು ಸಂಸ್ಕರಣಾ ಪದ್ಧತಿಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ.

## 4.2 ಹಾಲಿನ ಪುಡಿ ಮತ್ತು ದೀಡಿರ್ ಮಿಶ್ರಣಗಳು

4.2.1 ಕೆನೆರಹಿತ ಹಾಲಿನ ಪುಡಿ ಮತ್ತು ಡೈರಿ ವೈಟ್ನರ್ ಗ್ರಾಹಕರ ಪೊಟ್ಟಣಗಳಿಗೆ ಉತ್ತರಭಾರತ ಹಾಗೂ ಈಶಾನ್ಯ ರಾಜ್ಯಗಳಲ್ಲಿ ಬೇಡಿಕೆ ಇರುತ್ತದೆ. ನಂದಿನಿ ಹಾಲಿನಪುಡಿ ರಕ್ಷಣ ಇಲಾಖೆಗೆ ಸರಬರಾಜಾಗುತ್ತಿದೆ. ಪ್ರಸ್ತುತ 6 ವಿವಿಧ ಪ್ರಮಾಣದ ಪ್ಯಾಕ್ ನಲ್ಲಿ ಕೆನೆರಹಿತ ಹಾಲಿನ ಪುಡಿ ಹಾಗೂ ಡೈರಿ ವೈಟ್ನರ್ ಲಭ್ಯವಿದ್ದು ಪ್ರತಿತಿಂಗಳು ಸರಾಸರಿ 250 ಮೆ.ಟನ್ ಹಾಗೂ 100 ಮೆ.ಟನ್ ಅನುಕ್ರಮವಾಗಿ ಮಾರಾಟವಾಗುತ್ತಿದೆ.
ಈ ಉತ್ಪನ್ನಗಳ ಬಾಳಿಕೆ ಅವಧಿಯನ್ನು ಹೆಚ್ಚಿಸಲು, ಪ್ಯಾಕ್ ಮಾಡುವ ಟಿನ್‌ಗಳಲ್ಲಿ ನೈಟ್ರೋಜನ್ ಗ್ಯಾಸ್ ಬಳಸುವ ಅವಶ್ಯಕತೆಯಿದೆ. ಇದರಿಂದಾಗಿ ಉತ್ಪನ್ನವು ದೀರ್ಘಕಾಲ ಕೆಡದೆಯಿರುವುದರಿಂದ ದೇಶದ ಮೂಲೆ ಮೂಲೆಗಳಿಗೂ ತಲುಪಿಸಬಹುದು. ಇದರಿಂದಾಗಿ 2026-27 ರ ಅಂತ್ಯದ ವೇಳೆಗೆ ಪ್ರತಿತಿಂಗಳಿಗೆ 927.4 ಮೆ.ಟನ್ ಕೆನೆರಹಿತ ಹಾಲಿನಪುಡಿ ಮತ್ತು 377.5 ಮೆ.ಟನ್ ಡೈರಿ ವೈಟ್ನರ್‌ನ್ನು ಅನುಕ್ರಮವಾಗಿ ಮಾರಾಟ ಮಾಡಿ ಮಾರುಕಟ್ಟೆಯ ಪ್ರಮಾಣ ಹಾಗೂ ವ್ಯಾಪ್ತಿಯನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ.

**4.2.2 ನಂದಿನಿ ದೀಡಿರ್ ಮಿಶ್ರಣ:** ನಂದಿನಿ ಬಾದಾಮ್ ಪುಡಿ ಮತ್ತು ಮಿಲೆಟ್ ಮಿಕ್ಸ್ ಪಾನೀಯಗಳ ಬಳಕೆ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದ್ದು, ನಂದಿನಿ ಬಾದಾಮ್ ಪುಡಿ ಮಾರುಕಟ್ಟೆಯಲ್ಲಿ ಭದ್ರವಾದ/ದೃಢವಾದ ಸ್ಥಾನಗಳಿಸುವುದರಲ್ಲಿ ಯಶಸ್ವಿಯಾಗಿದೆ. ಈ ಉತ್ಪನ್ನದ ಮಾರಾಟದ ಪ್ರಮಾಣವು 2020-21 ರ ಸಾಲಿನಲ್ಲಿ ಪ್ರತಿತಿಂಗಳಿಗೆ ಸರಾಸರಿ 7.7 ಮೆ.ಟನ್ ಗಳಷ್ಟಾಗಿದೆ. ಈ ಉತ್ಪನ್ನಗಳನ್ನು ವಿವಿಧ ಪ್ರಮಾಣಗಳಲ್ಲಿ ಪ್ಯಾಕ್ ಮಾಡಿ ಭಾರತದ ಇತರ ಪ್ರದೇಶಗಳಲ್ಲಿಯೂ ವಿಸ್ತರಿಸುವ ಯೋಜನೆಯಿದ್ದು 2026-27 ರ ಅಂತ್ಯದ ವೇಳೆಗೆ ಪ್ರತಿತಿಂಗಳಿಗೆ ಸರಾಸರಿ 26 ಮೆ.ಟನ್ ಮಾರಾಟ ಸಾದಿಸಿವ ಗುರಿಯಿದೆ. ಆರೋಗ್ಯಕರ ಪೇಯಗಳನ್ನು ಗ್ರಾಹಕರಿಗೆ ತಲಪಿಸುವ ಯೋಚನೆಯಿಂದ ಈ ವರ್ಷ ಮಿಲೆಟ್ ಮಿಕ್ಸ್‌ನ್ನು ಮಾರುಕಟ್ಟೆಗೆ ಪರಿಚಯಿಸಲಾಗಿದ್ದು 2026-27 ರ ಅಂತ್ಯದ ವೇಳೆಗೆ ಪ್ರತಿತಿಂಗಳಿಗೆ ಸರಾಸರಿ 3.1 ಮೆ.ಟನ್ ಮಾರಾಟ ಮಾಡುವ ಗುರಿ ಹೊಂದಲಾಗಿದೆ.

4.2.3 ನಂದಿನಿ **ದೀಡಿರ್** ಮಿಶ್ರಣ: ಜಾಮೂನ್ ಮಿಕ್ಸ್ ಮತ್ತು ಪಾಯಸ ಮಿಕ್ಸ್‌ಗಳು ಉತ್ತಮ ಗುಣಮಟ್ಟದಿಂದಾಗಿ ನಂದಿನಿ ಜಾಮೂನ್ ಮಿಕ್ಸ್ ಗ್ರಾಹಕರ ಮೆಚ್ಚುಗೆಗಳಿಸಿದ್ದು, ಬೇಡಿಕೆ ಏರಿಕೆಯಾಗುತ್ತಿದೆ. ರಾಜ್ಯ ಹಾಗೂ ನೆರೆ ರಾಜ್ಯಗಳಲ್ಲಿ ಈ ಉತ್ಪನ್ನದ ಮಾರಾಟವನ್ನು ಅಧಿಕಗೊಳಿಸಲು ಯೋಜಿಸಲಾಗಿದೆ. 2020-21 ರ ಸಾಲಿನಲ್ಲಿ ಜಾಮೂನ್ ಮಿಕ್ಸ್ ಪ್ರತಿತಿಂಗಳಿಗೆ ಸರಾಸರಿ 7.4 ಮೆ.ಟನ್ ಮಾರಾಟವಾಗಿದ್ದು, 2026-27 ರ ಅಂತ್ಯದ ವೇಳೆಗೆ ಈ ಪ್ರಮಾಣವನ್ನು ಪ್ರತಿತಿಂಗಳು ಸರಾಸರಿ 26 ಮೆ.ಟನ್‌ಗಳಿಗೆ ಏರಿಸುವ ಗುರಿ ಹೊಂದಲಾಗಿದೆ.

ಪಾಯಸ ಮಿಕ್ಸ್ ಉತ್ಪನ್ನವೂ ಸಹ ಗ್ರಾಹಕರ ಮೆಚ್ಚುಗೆಗಳಿಸುವಲ್ಲಿ ಯಶಸ್ವಿಯಾಗಿದ್ದು ಪಾಯಸ ತಯಾರಿಸಲು ಹೆಚ್ಚುವರಿಯಾಗಿ ಹಾಲನ್ನು ಸೇರಿಸುವ ಅಗತ್ಯತೆ ಇಲ್ಲವಾದರಿಂದ ಇದರ ಬಳಕೆ ಹೆಚ್ಚಾಗಲು ಸಹಕಾರಿಯಾಗಿದೆ. 2020-21 ರ ಸಾಲಿನಲ್ಲಿ ಪ್ರತಿತಿಂಗಳಿಗೆ ಸರಾಸರಿ 7.4 ? ಮೆ.ಟನ್ ಮಾರಾಟವಾಗಿದ್ದು ಮುಂಬರುವ ದಿನಗಳಲ್ಲಿ ಹೆಚ್ಚಿನ ಪ್ರಗತಿ ಸಾಧಿಸಲು ಯೋಜಿಸಿದಂತೆ ಕ್ರಮವಿಟ್ಟಾಗ 2026-27 ರ ಅಂತ್ಯದ ವೇಳೆಗೆ ಪ್ರತಿತಿಂಗಳಿಗೆ ಸರಾಸರಿ 26 ? ಮೆ.ಟನ್ ಮಾರಾಟವಾಗುವ ಸಾಧ್ಯತೆಯಿದೆ.

**4.4 ಹಾಲಿನ ಪಾನೀಯಗಳು:** ಸುವಾಸಿತ ಹಾಲು, ಮಿಲ್ಕಶೇಕ್, ಆಯುರ್ವೇದದ ಹಾಲು, ಲಸ್ಸಿ ಮತ್ತು ಮಜ್ಜಿಗೆ.

ಕಳೆದ 10 ವರ್ಷಗಳ ಅಂಕಿಅಂಶಗಳನ್ನು ಗಮನಿಸಿದಾಗ ಗ್ರಾಹಕರು ಕಾರ್ಬೋನೇಟೆಡ್ ಸಾಫ್ಟ್ ಡ್ರಿಂಕ್ಸ್‌ಗಳನ್ನು ಬಳಸುವುದನ್ನು ಕಡಿಮೆ ಮಾಡಿ ಆರೋಗ್ಯಕರ ಪಾನೀಯಗಳನ್ನು ಸೇವಿಸುವತ್ತ ಒಲವು ಹೊಂದಿದಾರೆ ಎಂದು ತಿಳಿಯುತ್ತದೆ. ಹೀಗಾಗಿ ಹಾಲಿನ ಪಾನೀಯಗಳ ಮಾರಾಟದಲ್ಲಿ ವಾರ್ಷಿಕವಾಗಿ ಶೇ.20 ಕ್ಕಿಂತ ಹೆಚ್ಚು ವೃದ್ಧಿ ಸಾಧಿಸಲಾಗಿದೆ. ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯ(ಎನ್.ಡಿ.ಡಿ.ಬಿಯ) ಅಧ್ಯಯದ ಪ್ರಕಾರ 2019–20 ರ ಸಾಲಿನಲ್ಲಿ ದಿನ ನಿತ್ಯ ಸರಾಸರಿ 7.2 ಲಕ್ಷ ಲೀಟರ್ ಸುವಾಸಿತ ಹಾಲು ಮಾರಾಟವಾಗುವ ಅಂದಾಜಿತ್ತು ಅನೇಕ ಖಾಸಗಿ ಕಂಪನಿಗಳು ಹಾಗೂ ಸಹಕಾರಿ ಸಂಸ್ಥೆಗಳು ತಮ್ಮ ಬ್ರಾಂಡ್ನಲ್ಲಿ ವಿವಿಧ ರೀತಿಯ ಸುವಾಸಿತ ಹಾಲನ್ನು ವಿವಿಧ ಪ್ಯಾಕ್ ಗಳಲ್ಲಿ ವಿವಿಧ ಪ್ರಮಾಣಗಳಲ್ಲಿ ಮಾರಾಟ ಮಾಡಲು

ಮಾರುಕಟ್ಟೆಗೆ ಲಗ್ಗೆಯಿಟ್ಟಿವೆ. ಟೆಟ್ರಾ ಪ್ಯಾಕ್, ಪೆಟ್ ಬಾಟಲ್, ಟೆಟ್ರಾಬ್ರಿಕ್ ಪೌಚ್ ಗಳಲ್ಲಿ ಆಕರ್ಷಕವಾಗಿ ಗ್ರಾಹಕರನ್ನು ಆಕರ್ಷಿಸಲು ಪ್ರಯತ್ನಿಸುತ್ತಿವೆ.

ಸುವಾಸಿತ ಹಾಲಿನ ಸೇವನೆಯ ಪ್ರಮಾಣವನ್ನು ಅವಲೋಕಿಸಿದಾಗ ನಮ್ಮ ರಾಷ್ಟ್ರದ, ಮಹಾರಾಷ್ಟ್ರ ರಾಜ್ಯದಲ್ಲಿ ಅತ್ಯದಿಕವಾಗಿದ್ದು ಶೇ.18.9 ರಷ್ಟು ದಾಖಲಿಸಿರುತ್ತದೆ. ನಂತರದಲ್ಲಿ ತಮಿಳುನಾಡು ಶೇ.15.6, ಉತ್ತರ ಪ್ರದೇಶ ಶೇ.12.2, ದೆಹಲಿ ಶೇ.9.1 ಗುಜರಾತ್ ಶೇ.7.7, ಕರ್ನಾಟಕ ಶೇ,5.9 ಮತ್ತು ಆಂದ್ರ ಪ್ರದೇಶ ಶೇ.5.4 ರಷ್ಟಾಗಿದೆ.

ನಮ್ಮ ರಾಷ್ಟ್ರದಲ್ಲಿ ಸುವಾಸಿತ ಹಾಲಿನ ಮಾರಾಟದಲ್ಲಿ ಸಹಕಾರಿ ಸಂಸ್ಥೆಗಳು ಪ್ರಮುಖ ಪಾಲು ಹೊಂದಿರುತ್ತದೆ. ಸಹಕಾರಿ ಸಂಸ್ಥೆಗಳು ದೇಶದಾದ್ಯಂತ ಹೊಂದಿರುವ ಬಲಿಷ್ಠ ವಿತರಣಾ ಜಾಲದ ವ್ಯವಸ್ಥೆಯ ಪ್ರಮುಖ ಕಾರಣದಿಂದ ಈ ಸಾಧನೆ ಸಾಧ್ಯವಾಗಿರುತ್ತದೆ. ದೇಶದ ಸುವಾಸಿತ ಹಾಲಿನ ಮಾರುಕಟ್ಟೆಯಲ್ಲಿ ಶೇ.30 ರಷ್ಟು ಪಾಲು ಪಡೆದಿರುವ ಅಮುಲ್ ಸಿಂಹಪಾಲು ಹೊಂದಿರುತ್ತದೆ. ಇದರೊಂದಿಗೆ ಮದರ್ ಡೇರಿ, ನಂದಿನಿ, ಗೋಪಾಲ್ ಜಿ, ಕ್ಯಾವಿನ್ ಕೇರ್, ಪರಾಗ್ ಮಿಲ್ಕ್ ಫುಡ್ಸ್, ಆವಿನ್ ಮುಂತಾದ ಬ್ರಾಂಡ್‌ಗಳಿವೆ.

ನಂದಿನಿ ಸುವಾಸಿತ ಹಾಲು ಹಾಗೂ ಪೇಯಗಳು ಆರೋಗ್ಯಕರವೆಂದು ಗ್ರಾಹಕರು ಮೆಚ್ಚಿದ್ದು ಕಾಲದಿಂದ ಕಾಲಕ್ಕೆ ಮಾರಾಟದ ಪ್ರಮಾಣದಲ್ಲಿ ಅಭಿವೃದ್ಧಿ ಆಗುತ್ತಿದೆ. ವಿವಿಧ ಪ್ರಮಾಣದಲ್ಲಿ ಲಭ್ಯವಿರುವ ವಿವರಗಳು ಈ ಕೆಳಂಡಂತಿದೆ.

- ನಂದಿನಿ ಸುವಾಸಿತ ಹಾಲು ಬಾಟಲ್, ಟೆಟ್ರಾಪ್ಯಾಕ್ ಹಾಗೂ ಪೆಟ್‌ಬಾಟಲ್‌ನಲ್ಲಿ ಮಾರಾಟವಾಗುತ್ತಿದ್ದು ಬಾದಾಮ್, ಸ್ಟ್ರಾಬೆರ್ರಿ ಹಾಗೂ ಪಿಸ್ತಾ ಸ್ವಾದದಲ್ಲಿ ಲಭ್ಯವಿದೆ.
- ನಂದಿನಿ ಮಿಲ್ಕ್ ಶೇಕ್ ನಾಲ್ಕು ವಿಧದಲ್ಲಿ ಲಭ್ಯವಿದ್ದು- ಚಾಕೋಲೇಟ್, ವೆನಿಲ್ಲಾ, ಮ್ಯಾಂಗೋ ಹಾಗೂ ಬಟರ್ ಸ್ಕಾಚ್ ಸ್ವಾದದಲ್ಲಿ.
- ನಂದಿನಿ ಲಸ್ಸಿ ಉತ್ಪನ್ನ- ಪ್ಲೇನ್ ಮತ್ತು ಮ್ಯಾಂಗೋ ಸ್ವಾದದಲ್ಲಿ ಲಭ್ಯವಿದೆ.
- ನಂದಿನಿ ಆಯುರ್ವೇದಿಕ್ ಹಾಲು ಆರು ವಿಧದಲ್ಲಿದ್ದು- ಅರಿಶಿಣ, ಅಶ್ವಗಂಧ, ತುಳಸಿ, ಶುಂಠಿ,ಲವಂಗ ಹಾಗೂ ಕರಿಮೆಣಸು ಸ್ವಾದದಲ್ಲಿ ಲಭ್ಯ.

ಬೆಂಗಳೂರಿನ ಮದರ್ ಡೇರಿಯಲ್ಲಿ ನಂದಿನಿ ಸುವಾಸಿತ ಹಾಲನ್ನು ಟೆಟ್ರಾಪ್ಯಾಕ್ ಹಾಗೂ ಸ್ಯಾಚೆ ಬಾಟಲ್ ನಲ್ಲಿ ಪ್ಯಾಕ್ ಮಾಡಲಾಗುತ್ತಿದೆ. ಸುವಾಸಿತ ಹಾಲನ್ನು ಬಾಟೆಲ್‌ನಲ್ಲಿ ಡೆಂಪೋ ಡೇರಿ ಮತ್ತು ದಕ್ಷಿಣ ಕನ್ನಡ ಹಾಲು ಒಕ್ಕೂಟದಲ್ಲಿ ಬಾಟಲಿಯಲ್ಲಿ ಸುವಾಸಿತ ಹಾಲನ್ನು ಕೈನಲ್ಲಿ ತುಂಬಿ ಮಾರಾಟ ಮಾಡಲಾಗುತ್ತಿದೆ. ಪ್ರಸ್ತುತ ಪ್ರತಿತಿಂಗಳಿಗೆ ಸರಾಸರಿ 3.0 ಲಕ್ಷ ಲೀಟರ್ ಸುವಾಸಿತ ಹಾಲು, ಮಜ್ಜಿಗೆ ಮತ್ತು ಲಸ್ಸಿಯನ್ನು ಮರಾಟ ಮಾಡಲಾಗುತ್ತಿದ್ದು, 2026-27 ರ ಸಾಲಿನ ಅಂತ್ಯಕ್ಕೆ ಪ್ರತಿತಿಂಗಳಿಗೆ ಸರಾಸರಿ 13.0 ಲಕ್ಷ ಲೀಟರ್ ಮಾರಾಟ ಮಾಡುವ ಗುರಿ ಹೊಂದಲಾಗಿದೆ. ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ ಹಾಗೂ ಒಕ್ಕೂಟಗಳು ಈಗಾಗಲೇ ಹಾಲಿನ ಪಾನೀಯಗಳ ಪ್ಯಾಕಿಂಗ್‌ಗೆ ನವೀನ ತಾಂತ್ರಿಕತೆಯನ್ನು ಅಳವಡಿಸಿಕೊಂಡಿರುವುದರಿಂದ ಗ್ರಾಹಕರು ಇಚ್ಚಿಸುವ ಪೆಟ್‌ಬಾಟೆಲ್‌ಗಳಲ್ಲಿ ಮಾಡಲು ಯೋಜಿಸಿದ್ದು ಹಾಸನ ಹಾಲು ಒಕ್ಕೂಟದಲ್ಲಿ ದಿನನಿತ್ಯ 3.0 ಲಕ್ಷ? ಲೀಟರ್ ಅನ್ನು ಉತ್ಪಾದಿಸುವ ಸಾಮರ್ಥ್ಯವಿದ್ದು ಜನವರಿ 2023 ರ ವೇಳೆಗೆ ಕಾರ್ಯರಂಭ ಮಾಡಲಿದೆ. ಇದರಿಂದ ಪೆಟ್‌ಬಾಟಲ್‌ಗಳನ್ನು ದೇಶದಾದ್ಯಂತ ವಿತರಿಸಲು ಅನುಕೂಲವಾಗಲಿದೆ.

**4.5 ಮಿಲ್ಕ್ ಕ್ರೀಮ್**

ಮದರ್ ಡೇರಿಯಲ್ಲಿ 200 ಮಿ.ಲಿ ಮಿಲ್ಕ್ ಕ್ರೀಮ್‌ಅನ್ನು ಟೆಟ್ರಾ ಪ್ಯಾಕ್‌ನಲ್ಲಿ ಮತ್ತು ಚಾಮರಾಜನಗರ ಹಾಲು ಒಕ್ಕೂಟದಲ್ಲಿ ಟೆಟ್ರಾ ಪ್ಯಾಕ್‌ನಲ್ಲಿ 1 ಲೀಟರ್ ಮಿಲ್ಕ್ ಕ್ರೀಮ್ ಪ್ಯಾಕ್ ಮಾಡಲಾಗುತ್ತಿದ್ದು, ಮದರ್ ಡೇರಿಯಲ್ಲಿ ಪ್ರತಿದಿನ 1,000 ಲೀಟರ್ ಮತ್ತು ಚಾಮರಾಜನಗರದಲ್ಲಿ ಪ್ರತಿದಿನ 300 ಲೀಟರ್ ಉತ್ಪಾದಿಸಲಾಗುತ್ತದೆ. 2026–27 ರ ಅಂತ್ಯದ ವೇಳೆಗೆ ಪ್ರತಿದಿನ ಸರಾಸರಿ 2,000 ಲೀಟರ್ ಕ್ರೀಮ್‌ನ್ನು ಟೆಟ್ರಾಪ್ಯಾಕ್‌ನಲ್ಲಿ ಉತ್ಪಾದಿಸುವ ಗುರಿ ಹೊಂದಲಾಗಿದೆ.

**4.6 ನಂದಿನಿ ಚಾಕೋಲೇಟ್:** ನಂದಿನಿ ಬ್ರಾಂಡ್ ಹೆಸರು ಗಳಿಸಿದಂತೆ ನಂದಿನಿ ಚಾಕೋಲೇಟ್ ಗ್ರಾಹಕರ ಮನದಲ್ಲಿ ಆಳವಾಗಿ ಬೇರೂರಿದ್ದು ಇದರಲ್ಲಿ ನಂದಿನಿ ಬೈಟ್, ನಂದಿನಿ ಗುಡ್ ಲೈಫ್, ನಂದಿನಿ ಮಿಲ್ಕ್ ಕ್ರೀಮೀ ಬೈಟ್, ಮತ್ತು

ನಂದಿನಿ ಎಕ್ಲೇರ್ಸ್, ಎಕ್ಲೇರ್ಸ್ಟ್ರೀಟೋ, ಕಾರ್ಮೆಲ್‌ಬೈಟ್ ಚಾಕೋಲಿಷಿಯಸ್ ಮತ್ತು ಚಾಕೋಕ್ರಿಸ್ಪಿ ಎನ್ನುವ ಚಾಕೋಲೇಟ್ ಶ್ರೇಣಿಗಳಿದ್ದು. 2020-21 ನೇ ಸಾಲಿನಲ್ಲಿ ಪ್ರತಿತಿಂಗಳಿಗೆ ಸರಾಸರಿ 8.0 ಮೆ.ಟನ್ ಉತ್ಪನ್ನ ಮಾರಾಟವಾಗಿದೆ. ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿಯು 33 ಹೊಸ ಚಾಕೋಲೇಟ್ ವಿಧಗಳನ್ನು ಬಿಡುಗಡೆ ಮಾಡಲು ಯೋಜಿಸಿದ್ದು ರಿಯಲ್ ಮಿಲ್ಕ್ ಚಾಕೋಲೇಟ್, ಕಾಂಪೌಂಡ್ ಮಿಲ್ಕ್ ಚಾಕೋಲೇಟ್ ಮತ್ತು ಬಾರ್ ಚಾಕೋಲೇಟ್ ವಿಧಗಳಿವೆ. ಈ ಶ್ರೇಣಿಯ ಚಾಕೋಲೇಟ್‌ಗಳನ್ನು ಮೆ.ರಾಜಹಂಸ ನ್ಯೂಟ್ರಿಮೆಂಟ್ಸ್ ಸಂಸ್ಥೆಯ ಸೂರತ್‌ನಲ್ಲಿರುವ ಘಟಕದಲ್ಲಿ ತಯಾರಿಸಲಿದೆ. ಇದರಿಂದಾಗಿ ನಂದಿನಿ ಚಾಕೋಲೇಟ್ ಭಾರತದಾದ್ಯಂತ ವಿತರಿಸಲು ಅನುಕೂಲವಾಗಲಿದೆ. ಮೊದಲ ವರ್ಷದಲ್ಲಿ ತಿಂಗಳಿಗೆ 34 ಮೆ.ಟನ್ ಉತ್ಪಾದಿಸಲಿದ್ದು, 2026-27 ರ ಅಂತ್ಯದ ವೇಳೆಗೆ ಇದರ ಪ್ರಮಾಣ ಪ್ರತಿತಿಂಗಳಿಗೆ ಸರಾಸರಿ 104.6 ಮೆ.ಟನ್ ಆಗಲಿದೆಯೆಂದು ಅಂದಾಜಿಸಲಾಗಿದೆ.

**4.7 ನಂದಿನಿ ಸಿಹಿ ಉತ್ಪನ್ನಗಳು** : ತಿನ್ನಲು ಸಿದ್ಧವಾದ ಜಾಮೂನ್, ರಸಗೂಲ್ಲಾ ಮತ್ತು ಕುಂದಾ

ಸಿಹಿ ಉತ್ಪನ್ನಗಳನ್ನು ಪ್ಯಾಕ್ ಮಾಡಲಾದ ಹಾಗೂ ಹಾಗೆಯೇ ಮಾರಾಟ ಮಾಡುವ ಎರಡು ವಿಧಗಳೆಂದು ವಿಂಗಡಿಸಬಹುದಾಗಿದೆ. ವ್ಯವಸ್ಥಿತವಲ್ಲದ ವಲಯದಲ್ಲಿ ಆಗತಾನೇ ತಯಾರಿಸಿದ ಸಿಹಿಯನ್ನು ಮಾರಾಟ ಮಾಡಲಾಗುತ್ತಿದೆ. ವ್ಯವಸ್ಥಿತ ವಲಯದಲ್ಲಿ ಸಿಹಿ ಉತ್ಪನ್ನಗಳನ್ನು ಪ್ಯಾಕ್‌ಗಳಲ್ಲಿ ಮಾರಾಟ ಮಾಡುವಂತೆ ತಯಾರಿಸಿ ಒಂದು ವಾರದಿಂದ ಆರು ತಿಂಗಳವರೆಗೆ ಬಾಳಿಕೆ ಬರುವಂತೆ ತಾಂತ್ರಿಕತೆ ಅಳವಡಿಸಲಾಗುತ್ತದೆ. ಮಾರುಕಟ್ಟೆಯಲ್ಲಿ ಸೋನಾಪಾಪ್ಡಿ, ಮೈಸೂರುಪಾಕ್, ಜಾಮೂನ್, ರಸಗೂಲ್ಲಾ ಪ್ಯಾಕೇಜ್‌ಗಳಲ್ಲಿ ದೊರೆಯುತ್ತಿದೆ. ಈ ಉತ್ಪನ್ನಗಳ ಅವಧಿಯು ದೀರ್ಘಕಾಲ ಬಾಳುವಂತೆ ಸಂಶೋದನೆಗಳು ನಡೆಯುತ್ತಿದ್ದು, ಮುಂಬರುವ ದಿನಗಳಲ್ಲಿ ಸಂಶೋದನೆಗಳು ಯಶಸ್ವಿಯಾಗಬಹುದು. ವ್ಯವಸ್ಥಿತ ಮಾರಾಟ ಜಾಲದಲ್ಲಿ ಸಿಹಿ ಉತ್ಪನ್ನಗಳು ಶೇ.35 ರಷ್ಟು ಮಾರಾಟವಾಗುತ್ತಿದ್ದರೆ. ಉತ್ಪನ್ನ ವ್ಯವಸ್ಥಿತವಲ್ಲದ ವಲಯದಲ್ಲಿ ಶೇ.65 ರಷ್ಟು ಮಾರಾಟವಾಗುತ್ತಿದೆ. ವ್ಯವಸ್ಥಿತ ವಲಯದ ಮಾರಾಟದ ಪ್ರಮಾಣ ಏರಿಕೆಯ ಹಂತದಲ್ಲಿದೆ.

ನಂದಿನಿ ಸಿಹಿ ಉತ್ಪನ್ನಗಳಲ್ಲಿ ಹಲವಾರು ವಿಧವಿದ್ದು ಅದರಲ್ಲಿ ಕೆಲವು ಕಡಿಮೆ ಕಾಲ ಬಾಳಿಕೆ ಬಂದರೆ ಮತ್ತು ಕೆಲವು ದೀರ್ಘಕಾಲ ಬಾಳಿಕೆ ಬರುವ ಸಿಹಿ ಉತ್ಪನ್ನಗಳಾಗಿದೆ. ಪ್ರಸ್ತುತ ಪ್ರತಿತಿಂಗಳಿಗೆ ಸರಾಸರಿ 150 ಮೆ.ಟನ್ ಸಿಹಿ ಉತ್ಪನ್ನ ಮಾರಾಟವಾಗುತ್ತಿದ್ದು, 2026 27 ರ ಅಂತ್ಯದ ವೇಳೆಗೆ ಪ್ರತಿತಿಂಗಳಿಗೆ ಸರಾಸರಿ 438 ಮೆ.ಟನ್ ಎಂದು ಅಂದಾಜಿಸಲಾಗಿದೆ.

- 15 ರಿಂದ 30 ದಿನ ಬಾಳಿಕೆ ಬರುವ 16 ಉತ್ಪನ್ನಗಳು 45 ಪ್ರಮಾಣಗಳ ಪ್ಯಾಕ್‌ಗಳಲ್ಲಿ ಲಭ್ಯವಿದೆ.(SKU)
- 90 ದಿನ ಬಾಳಿಕೆ ಬರುವ 3 ಉತ್ಪನ್ನಗಳು 4 ವಿವಿಧ ಪ್ರಮಾಣದ ಪ್ಯಾಕ್‌ಗಳಲ್ಲಿ ಲಭ್ಯವಿದೆ.(SKU)

ತಿನ್ನಲು ಸಿದ್ಧವಾಗಿರುವ ನಂದಿನಿ ಸಿಹಿ ಉತ್ಪನ್ನಗಳಲ್ಲಿ ಜಾಮೂನ್ ಮತ್ತು ಕುಂದಾ, ರಸಗೂಲ್ಲಾ ಟಿನ್ ಪ್ಯಾಕ್ ನಲ್ಲಿ ಲಭ್ಯವಿದ್ದು, ಕುಂದಾ ಕೆಟಾರ್ಟ್ ಪ್ಯಾಕಿಂಗ್ ನಲ್ಲೂ ಲಭ್ಯವಿದ್ದು ಗ್ರಾಹಕರ ನೀಡುವ ಬೆಲೆಗೆ ಉತ್ತಮವೆಂದು ಮನವರಿಕೆಯಾಗಿರುತ್ತದೆ. ನಂದಿನಿ ಸಿಹಿ ಉತ್ಪನ್ನಗಳನ್ನು ಹೊರ ರಾಜ್ಯಗಳಗೆ ಮಾರಾಟ ಮಾಡುವ ಯೋಜನೆಯಿದೆ. 2020-21 ರ ಸಾಲಿನಲ್ಲಿ ಪ್ರತಿತಿಂಗಳಿಗೆ ಸರಾಸರಿ 6.2 ಮೆ.ಟನ್ ಜಾಮೂನ್, 5.2 ಮೆ.ಟನ್ ರಸಗೂಲ್ಲಾ ಹಾಗೂ 3.8 ಮೆ.ಟನ್ ಕುಂದಾ ಉತ್ಪನ್ನ ಮಾರಾಟವಾಗಿದ್ದು. ಇದನ್ನು ಅನುಕ್ರಮವಾಗಿ ಪ್ರತಿತಿಂಗಳಿಗೆ ಸರಾಸರಿ 22-1 ಮೆ.ಟನ್, 18.3 ಮೆ.ಟನ್ ಹಾಗೂ 13.4 ಮೆ.ಟನ್‌ಗಳಷ್ಟು ಮಾರಾಟದ ವೃದ್ಧಿಸಾಧಿಸಲು ಯೋಜಿಸಲಾಗಿದೆ. ಹಾಗೆಯೇ ಹೆಚ್ಚುದಿನ ಬಾಳಿಕೆ ಬರುವಂತಹ ಸಿಹಿ ಉತ್ಪನ್ನಗಳನ್ನು ತಯಾರಿಸಲು ನೂತನ ತಂತ್ರಜ್ಞಾನ ಅಳವಡಿಕೆಗೆ ಚಿಂತನೆ ನಡೆಸಲಾಗಿದೆ.

**4.8 ನಂದಿನಿ ಬೇಕರಿ ಉತ್ಪನ್ನ : ಕುಕ್ಕೀಸ್, ರಸ್ಕ್ ಮತ್ತು ಖಾರಗಳು**

ನಂದಿನಿ ಕುಕ್ಕೀಸ್ ಮತ್ತು ಬಿಸ್ಕೆಟ್ ಮಾರುಕಟ್ಟೆಯಲ್ಲಿ ಉತ್ತಮವಾಗಿ ಮಾರಾಟವಾಗುತ್ತಿದ್ದು ಪ್ರತಿದಿನಕ್ಕೆ 1,000 ಕೆ.ಜಿ ಗ್ರಾಹಕರ ಕೈ ಸೇರುತ್ತಿದೆ. ಪ್ರಸ್ತುತ ನಂದಿನಿ ಕುಕ್ಕೀಸ್, ಕೊಕನೆಟ್, ಸಿಹಿ ಮತ್ತು ಉಪ್ಪು ಜೀರಿಗೆ, ಮೆಣಸು ಮತ್ತು ಕೆಂಪುಮೆಣಸಿನ ನಾಲ್ಕು ವಿಧಗಳು ಜನಪ್ರಿಯವಾಗಿದೆ. ರಾಜ್ಯದಾದ್ಯಂತವಿರುವ 1000 ನಂದಿನಿ ಪಾರ್ಲರ್ ಮೂಲಕ ಹಾಲು ಹಾಗೂ ಹಾಲಿನ ಉತ್ಪನ್ನ ಸಿಹಿ ತಿಂಡಿಗಳ ಜೊತೆಗೆ ಬಿಸ್ಕೆಟ್ ವಿತರಣೆಯಾಗುತ್ತಿದ್ದು, ನಂದಿನಿ ಕುಕ್ಕೀಸ್ ಪ್ರತಿತಿಂಗಳಿಗೆ ಸರಾಸರಿ 27.4 ಮೆ.ಟನ್, ನಂದಿನಿ ರಸ್ಕ್ ಪ್ರತಿತಿಂಗಳಿಗೆ ಸರಾಸರಿ 1.8 ಮೆ.ಟನ್ ಮಾರಾಟವಾಗುತ್ತಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಪ್ರಮಾಣದ ಉತ್ಪನ್ನ

ಸರಬರಾಜು ಮಾಡಲಾಗುವುದು. 2026-27 ರಅಂತ್ಯದ ವೇಳೆಗೆ ಪ್ರತಿತಿಂಗಳಿಗೆ ಸರಾಸರಿ 106.3 ಮೆ.ಟನ್ ಕುಕ್ಕೀಸ್ ಹಾಗೂ 6.7 ಮೆ.ಟನ್ ರಸ್ಕ್ ಮಾರಾಟವನ್ನು ಅಂದಾಜಿಸಲಾಗಿದೆ.

ನಂದಿನಿ ಖಾರದ ವಸ್ತುಗಳಲ್ಲಿ ಬೆಣ್ಣೆ ಮುರುಕು, ಕೋಡುಬಳೆ, ಬಾಂಬೆ ಮಿಕ್ಸ್ಚರ್ ಮತ್ತು ಖಾರಾಬೂಂದಿ ಉತ್ಪನ್ನಗಳು ಕಳೆದ ಎರಡು ವರ್ಷಗಳಲ್ಲಿ ಪ್ರತಿತಿಂಗಳು ಸರಾಸರಿ 18.9 ಮೆ.ಟನ್ ಮಾರಾಟವಾಗಿದೆ. 2026-27 ರ ಅಂತ್ಯದ ವೇಳೆಗೆ ಪ್ರತಿತಿಂಗಳು ಸರಾಸರಿ 77.8 ಮೆ.ಟನ್ ಮಾರಾಟ ಮಾಡುವ ಗುರಿ ಹೊಂದಿದೆ. ಭಾರತದಾದ್ಯಂತ ನಂದಿನಿ ಬಿಸ್ಕೆಟ್, ಖಾರಾ ತಿಂಡಿಗಳನ್ನು ಮಾರಾಟ ಮಾಡಲು ಮತ್ತು ಇದರೊಂದಿಗೆ ಇತರೆ ಕೆಲವು ತಿನಿಸುಗಳನ್ನು ಸೇರಿಸುವ ಗುರಿಯಿದೆ.

## 5.0 ರೆಫ್ರಿಜೆರೇಟೆಡ್ ಮತ್ತು ಪ್ರೋಜನ್ ಉತ್ಪನ್ನಗಳು

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಮತ್ತು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳು ಶೀಥಲ ಸರಪಳಿಯನ್ನು (ಕೋಲ್ಡ್ ಚೈನ್) ಯಶಸ್ವಿಯಾಗಿ ರಚಿಸಕೊಂಡಿದ್ದು, ಶೀಥಲ ಸರಪಳಿ ಅವಶ್ಯವಿರುವ ಹಾಲಿನ ಉತ್ಪನ್ನಗಳನ್ನು ಹೆಚ್ಚುದಿನ ಬಾಳಿಕೆ ಬರುವಂತೆ ಯಶ್ವಸಿಯಾಗಿ ಗ್ರಾಹಕರಿಗೆ ತಲುಪಿಸುವ ನಿಟ್ಟಿನಲ್ಲಿ ಕ್ರಮವಿಡಲಾಗಿದೆ.

### 5.1 ಚಿಲ್ಲರೆ ಪ್ಯಾಕ್ ನಲ್ಲಿ ಬೆಣ್ಣೆ:

ರಾಷ್ಟ್ರದಲ್ಲಿ ಬೆಣ್ಣೆಯ ಮಾರುಕಟ್ಟೆ 2012-20 ರ ಅವಧಿಯಲ್ಲಿ ಶೇ.16 ರಷ್ಟು ಬೆಳವಣಿಗೆ ಹೊಂದಿರುವುದರಿಂದ, ದಿನನಿತ್ಯ ಸರಾಸರಿ 276 ಮೆ.ಟನ್ ಮಾರಾಟ ಮಾಡಲಾಗಿದೆ. ಇದರಲ್ಲಿ ಅಮುಲ್ ಬೆಣ್ಣೆ ಶೇ.70 ರಷ್ಟು ಪಾಲು ಹೊಂದಿದ್ದು, ನಂತರದ ಸ್ಥಾನದಲ್ಲಿ ಕರ್ನಾಟಕ ಸಹಕಾರ ಹಾಲು ಮಹಾಮಂಡಳವು 5 ರಷ್ಟು, ತಮಿಳುನಾಡು ಸಹಕಾರಿ ಸಂಸ್ಥೆಗಳು ಶೇ.4.6 ಹಾಗೂ ಮದರ್ ಡೇರಿ ಶೇ.3.8 ರಷ್ಟು ಪಾಲುಗಳಿಸಿದೆ. ನಂದಿನಿ ಬೆಣ್ಣೆಗೆ ಕರ್ನಾಟಕದಲ್ಲಿ ಅಪಾರ ಬೇಡಿಕೆಯಿದ್ದು ಕರ್ನಾಟಕ ಸಹಕಾರ ಹಾಲು ಮಹಾಮಂಡಳವು ಉತ್ಪನ್ನಗಳನ್ನು ಹೊರ ರಾಜ್ಯಗಳಲ್ಲಿ ಮಾರಾಟ ಮಾಡಲು ಅವಶ್ಯಕ ಶೀಥಲ ಸರಪಳಿ ವ್ಯವಸ್ಥೆ ರೂಪಿಸುವುದರ ಜೊತೆಗೆ ಚಿಲ್ಲರ್‌ಗಳನ್ನು ನೇಮಕ ಮಾಡುವ ಆಲೋಚನೆಯಿದೆ. ನಂದಿನಿ ಬೆಣ್ಣೆಯು 10,100,200,500 ಗ್ರಾಂ ಹಾಗೂ 1 ಕೆ.ಜಿ ಪ್ಯಾಕ್ ನಲ್ಲಿ ಉಪ್ಪುಸಹಿತ ಹಾಗೂ ಉಪ್ಪುರಹಿತ ಮಾದರಿಯಲ್ಲಿ ಲಭ್ಯವಿದೆ.
ಗಾರ್ಲಿಕ್ ಬೆಣ್ಣೆಯಂತಹ ಮತ್ತಷ್ಟು ರೀತಿಯ ಬೆಣ್ಣೆಯನ್ನು ಮಾರಾಟಕ್ಕೆ ತರುವ ಆಲೋಚನೆಯಿದೆ. ಪ್ರಸ್ತುತ ಡಿಪೋಗಳ ಮೂಲಕ ಪ್ರತಿ ತಿಂಗಳು ಸರಾಸರಿ 221.3 ಮೆ.ಟನ್ ಬೆಣ್ಣೆ ಮಾರಾಟವಾಗುತ್ತಿದ್ದು 2026-27 ರ ಅಂತ್ಯದ ವೇಳೆಗೆ ಪ್ರತಿತಿಂಗಳಿಗೆ ಸರಾಸರಿ 106.6? ಮೆ.ಟನ್ ಮಾರಾಟ ಮಾಡುವ ಗುರಿಯಿದೆ.

### 5.2 ನಂದಿನಿ ಪನ್ನೀರ್.

ಬಾರತೀಯ ಸಸ್ಯಹಾರಿ ಆಹಾರಗಳಲ್ಲಿ ಪನ್ನೀರ್ ಬಳಕೆ ಅಧಿಕವಾಗಿದ್ದು, ಉತ್ತರ ಭಾರತದ ರಾಜ್ಯಗಳಲ್ಲಿ ತಿನಿಸುಗಳಿಗೆ ಹೆಚ್ಚಾಗಿ ಬಳಸಲಾಗುತ್ತದೆ. ಈ ಉತ್ಪನ್ನವನ್ನು ಕಾಟೇಜ್ ಚೀಸ್ ಎಂದು ಕರೆಯಲಾಗುತ್ತಿದ್ದು, ಬಹುತೇಕ ಈ ಉತ್ಪನ್ನವನ್ನು ವ್ಯವಸ್ಥಿತವಲ್ಲದ ಮಾರಾಟಗಾರರು ಮಾರಾಟ ಮಾಡುತ್ತಿರುವುದು ಕಂಡು ಬರುತ್ತದೆ. ಹೊಸ ತಾಂತ್ರಿಕತೆಯನ್ನು ಬಳಸಿ ಉತ್ಪಾದಿಸಿ ಮಾರಾಟ ಮಾಡುವ ವ್ಯವಸ್ಥಿತ ಉತ್ಪಾದಕರ ಪಾಲು ದಿನದಿಂದ ದಿನಕ್ಕೆ ಅಧಿಕವಾಗುತ್ತಿದೆ. ರಾಷ್ಟ್ರದ ಪನ್ನೀರ್ ಮಾರಾಟದ ಪ್ರಮಾಣದಲ್ಲಿ ಅಮುಲ್ ಪಾಲು ಶೇ.26.5 ರಷ್ಟಿದ್ದು, ನಂತರದಲ್ಲಿ ಪರಾಗ್ ಮಿಲ್ಕ್ ಫುಡ್ಸ್ ಶೇ.6.6, ಮದರ್ ಡೇರಿ ಶೇ.6.1 ಸಾರಸ್ ಶೇ.3.9 ಹಾಗೂ ವಿ.ಆರ್.ಎಸ್ ಫುಡ್ಸ್ ಶೇ.3.5 ರಷ್ಟು ಪಾಲು ಹೊಂದಿವೆ.

ನಂದಿನಿ ಪನ್ನೀರ್ ತನ್ನ ಉತ್ತಮ ಗುಣಮಟ್ಟದಿಂದಾಗಿ ಗ್ರಾಹಕರ ಮನಗೆದ್ದಿದೆ. ಬ್ಲಾಕ್ ಹಾಗೂ ಡೈಸ್ಡ್ ವಿಧದಲ್ಲಿ ದೊರೆಯುತ್ತದೆ. ಯಲಹಂಕದ ಮದರ್ ಡೇರಿಯಲ್ಲಿ ಉತ್ಪಾದನೆಯಾಗುವುದರ ಜೊತೆಗೆ 6 ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳು ಪನ್ನೀರ್‌ನ್ನು ಉತ್ಪಾದಿಸುತ್ತಿದ್ದು, ಪ್ರತಿನಿತ್ಯ ಸರಾಸರಿ 22.1 ಮೆ.ಟನ್ ಮಾರಾಟ ಮಾಡುವ ಗುರಿ ಹೊಂದಿದೆ. ಈಗ ಉತ್ಪಾದನೆಯಾಗುತ್ತಿರುವ ಪನ್ನೀರ್ ಬಾಳಿಕೆ 30 ದಿವಸವಾಗಿದೆ. ಕೋಲಾರ ಹಾಲು ಒಕ್ಕೂಟದ ಚಿಕ್ಕಬಳಾಪುರ ಘಟಕದಲ್ಲಿರುವ ಸ್ವಯಂಚಾಲಿತ ಪನ್ನೀರ್ ಉತ್ಪಾದನ ಘಟಕದಲ್ಲಿ ತಯಾರಾಗುವ ಪನ್ನೀರ್ 6 ತಿಂಗಳುಗಳ ಕಾಲ ಬಾಳಿಕೆ ಬರುವಂತಿದೆ. ಹೀಗಾಗಿ ಈ ಉತ್ಪನ್ನವನ್ನು ಭಾರತದಾದ್ಯಂತ ವಿತರಿಸಲು ಯೋಜಿಸಲಾಗಿದೆ. ಈ ಘಟಕದಿಂದ ತಯಾರಾಗುವ ಪನ್ನೀರ್ ಉತ್ಪನ್ನವನ್ನು 2026-27 ರ ಅಂತ್ಯದ ವೇಳೆಗೆ ದಿನನಿತ್ಯ ಸರಾಸರಿ 22.1 ಮೆ.ಟನ್ ಮಾರಾಟ ಮಾಡುವ ಯೋಜನೆಯಿದೆ.

### 5.3 ನಂದಿನಿ ಪ್ರೊಸೆಸ್ಡ್ ಹಾಗೂ ಮೊಜೊರೆಲ್ಲಾ ಚೀಸ್

ವಿದೇಶಗಳಲ್ಲಿ ಪ್ರಚಲಿತವಿದ್ದ ಚೀಸ್ ಉತ್ಪನ್ನವನ್ನು ನಮ್ಮ ದೇಶದಲ್ಲಿ ಸಮುದಾಯ ಆಹಾರದ ಸೇವನೆಯಲ್ಲಿ ಬದಲಾವಣೆ ಬಂದಿರುವ ಫಲವಾಗಿ ಚೀಸ್ ಉತ್ಪನ್ನಕ್ಕೆ ಬೇಡಿಕೆ ಬಂದಿದೆ.

ಪ್ರೊಸೆಸ್ಡ್ ಚೀಸ್ ಹಾಗೂ ಮೊಜೊರೆಲ್ಲಾ ಚೀಸ್ ಮಾರಾಟಕ್ಕೆ ಬೇಡಿಕೆಯಿದ್ದು, ಪ್ರೊಸೆಸ್ಡ್ ಚೀಸ್ ಬಹುತೇಕ ಗ್ರಾಹಕರ ಮಾರುಕಟ್ಟೆಯಾಗಿದ್ದು, ಶೇ.50 ರಿಂದ 55 ರಷ್ಟು ಮಾರಾಟ ಈ ವಲಯದಲ್ಲಿ ಆಗುತ್ತಿದೆ. ಮೊಜೊರೆಲ್ಲಾ ಚೀಸ್ ಸಾಂಸ್ಥಿಕ ಮಾರಾಟ ಹೊಂದಿದ್ದು, ವಿಶೇಷವಾಗಿ ಪಿಜ್ಜಾ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುತ್ತಿರುವ ಡಾಮಿನೋಸ್, ಪಿಜಾಹಟ್ ಮುಂತಾದ ಮಳಿಗೆಗಳಿಗೆ ಮತ್ತು ಸ್ಟ್ರೀಟ್ ಫುಡ್ ಮಾರಾಟಗಾರರಾರು ಉಪಯೋಗಿಸುತ್ತಿದ್ದಾರೆ.

ರಾಷ್ಟ್ರದಲ್ಲಿ ಚೀಸ್ ಮಾರಾಟದ ಪ್ರಮಾಣ ವಾರ್ಷಿಕವಾಗಿ 100 ಮಿಲಿಯನ್ ಕೆ.ಜಿಗಳಾಗಿದ್ದು, 2012 ರಿಂದ 2020 ರವರೆಗಿನ ಅವಧಿಯಲ್ಲಿ ಶೇ.22.3 ರಷ್ಟು ಏರಿಕೆಯಾಗಿದೆ. ಅಮುಲ್ ಚೀಸ್ ರಿಟೇಲ್ ಮಾರುಕಟ್ಟೆಯಲ್ಲಿ ಸಿಂಹ ಪಾಲು ಹೊಂದಿದ್ದು ಪರಾಗ್ ಫುಡ್ಸ್ ಸಾಂಸ್ಥಿಕ ಮಾರಾಟದಲ್ಲಿ ಹೆಚ್ಚಿನ ಪಾಲು ಹೊಂದಿದೆ. ಚೀಸ್ ಮಾರಾಟದಲ್ಲಿ ಬ್ರಿಟಾನಿಯಾ, ಮಿಲ್ಕಿ ಮಿಸ್ಟ್, ಡೆಲೆಕ್ಸಾ ಮತ್ತಿತರರು ಭಾಗಿಯಾಗಿದ್ದಾರೆ. ಹಾಲಿನ ಉತ್ಪನ್ನಗಳ ಮಾರಾಟದಲ್ಲಿ ಚೀಸ್ ಮಾರಾಟ ಸಹ ಗಣನೀಯ ಏರಿಕೆ ಕಾಣುತ್ತಿದ್ದು ಗ್ರಾಹಕರ ಸೇವನಾ ಪದ್ಧತಿ ಹಾಗೂ ಈ ರೀತಿಯ ಆಹಾರ ಒದಗಿಸುವ ಮಳಿಗೆಗಳೂ ಕಾರಣವಾಗಿವೆ. ಇದಕ್ಕೆ ಮುಖ್ಯ ಕಾರಣ ದೇಶದಲ್ಲಿ 276 ನಗರಗಳಲ್ಲಿ 1195 ಡಾಮಿನೋ ಪಿಜ್ಜಾ ಮಳಿಗೆಗಳಿದ್ದು ಇದರಲ್ಲಿ 100 ಪ್ರಮುಖ ನಗರಗಳಲ್ಲಿ 400–500 ಮಳಿಗೆಗಳು ಮುಖ್ಯವಾಗಿವೆ.

ಚೀಸ್ ಸೇವನೆಯು ಮಹಾರಾಷ್ಟ್ರದಲ್ಲಿ ಶೇ.28.6, ಗುಜರಾತ್‌ನಲ್ಲಿ ಶೇ.12.8, ದೆಹಲಿಯಲ್ಲಿ ಶೇ.7.4, ತಮಿಳುನಾಡಿನಲ್ಲಿ ಶೇ.6.7, ಕರ್ನಾಟಕದಲ್ಲಿ ಶೇ.6.0, ಉತ್ತರಪ್ರದೇಶದಲ್ಲಿ ಶೇ.5.8 ಹಾಗೂ ಪಶ್ಚಿಮ ಬಂಗಾಳದಲ್ಲಿ ಶೇ.4.9 ರಷ್ಟಿದೆ. ಚೀಸ್‌ನಲ್ಲಿ ಚೆಡ್ಡಾರ್ ಚೀಸ್, ಪ್ರೊಸೆಸ್ಡ್ ಚೀಸ್ ಮತ್ತು ಮೊಜೊರೆಲ್ಲಾ ಚೀಸ್ ಇದ್ದು ಚೆಡ್ಡಾರ್ ಚೀಸ್‌ನ್ನು ಕೋಲಾರ ಹಾಲು ಒಕ್ಕೂಟ ರಿಟೇಲ್ ಪ್ಯಾಕ್ ಗಳಲ್ಲಿ ತಯಾರಿಸಲಾಗುತ್ತಿದೆ. ಪ್ರೊಸೆಸ್ಡ್ ಚೀಸ್ ಬೆಂಗಳೂರು ಮತ್ತು ಕೋಲಾರ ಹಾಲು ಒಕ್ಕೂಟದಲ್ಲಿ ಪ್ರತಿದಿನ 20.0 ಮೆ.ಟನ್ ಹಾಗೂ 5.0 ಮೆ.ಟನ್ ಉತ್ಪಾದಿಸುತ್ತಿವೆ. ಬೆಂಗಳೂರು ಹಾಲು ಒಕ್ಕೂಟದಲ್ಲಿ ಪ್ರತಿದಿನ 15.0 ಮೆ.ಟನ್ ಮೊಜೊರೆಲ್ಲಾ ಚೀಸ್ ಉತ್ಪಾದನೆ ಮಾಡುವ ಸಾಮರ್ಥ್ಯವಿರುತ್ತದೆ.

2019–20 ರ ಸಾಲಿನಲ್ಲಿ ಪ್ರತಿ ತಿಂಗಳು 20 ಮೆ.ಟನ್ ಮೊಜಾರೆಲ್ಲಾ ಚೀಸ್ ಮಾರಾಟವಾದರೆ, ಪ್ರೊಸೆಸ್ಡ್ ಚೀಸ್ 33 ಮೆ.ಟನ್ ಮಾರಾಟವಾಗಿದೆ. 2026–27 ರ ಅಂತ್ಯದ ವೇಳೆಗೆ ಇವುಗಳ ಮಾರಾಟದ ಪ್ರಮಾಣವನ್ನು ಅನುಕ್ರಮವಾಗಿ 250 ಹಾಗೂ 233 ಮೆ.ಟನ್ ಗಳಿಗೆ ಹೆಚ್ಚಿಸುವ ಗುರಿ ಹೊಂದಿದೆ. ಸಾಂಸ್ಥಿಕ ಮಾರುಕಟ್ಟೆಗೆ ಉಪಯೋಗವಾಗುವ ರೀತಿಯಲ್ಲಿ ಮೊಜೊರೆಲ್ಲಾ ಚೀಸ್ ತಯಾರಿಸಿ ವಿತರಿಸಲು ಏರ್ಪಾಡು ಮಾಡಲಾಗುವುದು. ಮಾರುಕಟ್ಟೆಯ ಅವಶ್ಯಕತೆನುಗುಣವಾಗಿ ಚೀಸ್ ಉತ್ಪನ್ನವನ್ನು ತಯಾರಿಸಿ ರಾಷ್ಟ್ರದ ತುಂಬೆಲ್ಲಾ ಮಾರಾಟ ಮಾಡಲು ಯೋಜಿಸಲಾಗುತ್ತಿದೆ. ಬೆಂಗಳೂರಿನಲ್ಲಿ ಈ ಉತ್ಪನ್ನಕ್ಕೆ ಬೇಡಿಕೆಯಿದ್ದು ಮುಂಬೈ ಹಾಗೂ ಉತ್ತರ ಭಾರತದ ಪ್ರದೇಶಗಳಲ್ಲಿ ನಂದಿನಿ ಚೆಡ್ಡಾರ್, ಪ್ರೊಸೆಸ್ಡ್ ಹಾಗೂ ಮೊಜೊರೆಲ್ಲಾ ಚೀಸ್ ಮಾರಾಟವಾಗುವಂತೆ ಯೋಜಿಸಲಾಗಿದೆ.

### 5.4 ಯೋಗರ್ಟ್

2019 ರಲ್ಲಿ ಮ್ಯಾಂಗೋ ಮತ್ತು ಸ್ಟ್ರಾಬೆರ್ರಿ ಸ್ವಾದದಲ್ಲಿ ಯೋಗರ್ಟ್ ಉತ್ಪನ್ನ ಮಾರುಕಟ್ಟೆಗೆ ಬಿಡುಗಡೆಯಾಗಿದ್ದು, ಇದರ ಜೊತೆಗೆ ಈ ಸಾಲಿನಲ್ಲಿ ಬ್ಲೂಬೆರ್ರಿ, ಬನಾನ, ಹನಿ ಮತ್ತು ಮ್ಯಾಂಗೋ ಸ್ವಾದಗಳಲ್ಲಿ ಬಿಡುಗಡೆಯಾದ ಗ್ರೀಕ್ ಯೋಗರ್ಟ್ ಪ್ರತಿತಿಂಗಳಿಗೆ ಸರಾಸರಿ 300 ಕೆ.ಜಿ ಮಾರಾಟವಾಗುತ್ತಿದ್ದು 2026–27 ರ ಅಂತ್ಯದ ವೇಳೆಗೆ ಪ್ರತಿತಿಂಗಳಿಗೆ ಸರಾಸರಿ 4,500 ಕೆ.ಜಿ ಮಾರಾಟ ಮಾಡಲು ಯೋಜಿಸಲಾಗಿದೆ.(ಪ್ರತಿದಿನ 150 ಕೆ.ಜಿ)

### 5.5 ರಿಯಲ್ ಥಿಕ್ ಮೊಸರು

200 ಮತ್ತು 400 ಗ್ರಾಂಗಳಲ್ಲಿ ರಿಯಲ್ ಥಿಕ್ ಮೊಸರು ಬಿಡುಗಡೆಯಾಗಿದ್ದು ಮಾರುಕಟ್ಟೆಯಲ್ಲಿ ಗ್ರಾಹಕರ ಮೆಚ್ಚುಗೆ ಗಳಿಸಿದೆ. ಈ ಉತ್ಪನ್ನವನ್ನು ಗ್ರಾಹಕರಿಗೆ ತಲುಪಿಸುವುದು ಒಂದು ಸವಾಲಾಗಿದೆ. ಆದ್ದರಿಂದ ಶೀಥಲ ಸರಪಳಿ ವ್ಯವಸ್ಥೆಯನ್ನು ಬಲಪಡಿಸಿ ಶೀಥಲ ಸರಪಳಿ ಅವಶ್ಯವಾದ ಉತ್ಪನ್ನಗಳ ಮಾರಾಟ ಅಭಿವೃದ್ಧಿಪಡಿಸಲು ಯೋಜಿಸಿದೆ. ಪ್ರಸ್ತುತ ಪ್ರತಿತಿಂಗಳಿಗೆ ಸರಾಸರಿ 3200 ಕೆ.ಜಿ ಮಾರಾಟವಾಗುತ್ತಿರುವ ಈ ಉತ್ಪನ್ನದ ಪ್ರಮಾಣವನ್ನು 2026-27 ರ ಅಂತ್ಯದ ವೇಳೆಗೆ ಪ್ರತಿತಿಂಗಳಿಗೆ ಸರಾಸರಿ 28800 ಕೆ.ಜಿ ಗಳಿಗೆ ಹೆಚ್ಚಿಸುವ ಯೋಜಿನೆಯಿದೆ.

**6.0 ರಾಜ್ಯ ಹಾಗೂ ಇತರೆ ರಾಜ್ಯಗಳಲ್ಲಿ ವಿತರಣಾ ಜಾಲವನ್ನು ಅಭಿವೃದ್ಧಿಗೊಳಿಸುವ ಬಗ್ಗೆ.**

ಪ್ರಸ್ತುತ ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿಯ 16 ಮಾರಾಟ ಮಳಿಗೆಗಳಿದ್ದು ಅದರಲ್ಲಿ ರಾಜ್ಯದಲ್ಲಿ 10 ಮತ್ತು ಹೊರರಾಜ್ಯಗಳಲ್ಲಿ 6 ಮಾರಾಟ ಮಳಿಗೆಗಳು ಕಾರ್ಯಚರಣೆಯಾಲಿವೆ. 585 ಸಗಟು ಮಾರಾಟಗಾರರು ಮತ್ತು ವಿತರಕರ (ಅನುಭಂದ- ರಲ್ಲಿದೆ) ಜಾಲವಿದ್ದು ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಅಮೂಲ್ ನಂತರ ದೇಶದಲ್ಲಿ ಎರಡನೆ ಸ್ಥಾನದಲ್ಲಿದ್ದು ಮುಂಬರುವ ದಿನಗಳಲ್ಲಿ ಮತ್ತಷ್ಟು ಮಾರಾಟ ಮಳಿಗೆಗಳನ್ನು ತೆರೆದು ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ದೇಶದಾದ್ಯಂತ ಪೂರೈಸಲು ಯೋಜಿಸಲಾಗಿದೆ.

**6.1 ಹೊಸ ಡಿಪೋಗಳ ಸ್ಥಾಪನೆ**

ರಾಷ್ಟ್ರದ ಹೈನುಗಾರಿಕೆಯಲ್ಲಿ ಅಮುಲ್ ಪ್ರಮುಖ ಸ್ಥಾನದಲ್ಲಿದ್ದು 48 ಮಾರಾಟ ಮಳಿಗೆ ಹೊಂದಿದ್ದು 5000 ಸಗಟು ಮಾರಾಟಗಾರರು 10 ಲಕ್ಷ ರೀಟೈಲ್ ಮಾರಾಟಗಾರರ ವ್ಯವಸ್ಥಿತ ಬೃಹತ್ ಜಾಲ ಹೊಂದಿದೆ. ಅಮುಲ್ ಹಾಲು ಹಾಲಿನ ಪುಡಿ, ಆರೋಗ್ಯಕರ ಪೇಯಗಳು, ತುಪ್ಪ, ಬೆಣ್ಣೆ, ಚೀಸ್, ಐಸ್ ಕ್ರೀಂ, ಪನ್ನೀರ್, ಚಾಕೋಲೆಟ್ ಜೊತೆಗೆ ಸಾಂಪ್ರದಾಯಿಕ ಸಿಹಿ ಉತ್ಪನ್ನಗಳ ಶ್ರೇಣಿಯನ್ನು ಹೊಂದಿದೆ.

ನಂದಿನಿ ಮಾರಾಟ ಮಳಿಗೆಗಳು ಲಾಭದಾಯಕವಾಗಿ ಕಾರ್ಯನಿರ್ವಹಿಸಲು ಮಾಹೆಯಾನ ಕನಿಷ್ಠ ರೂ.75 ರಿಂದ 100 ಲಕ್ಷ ಗಳಷ್ಟು ಮೌಲ್ಯದ ಉತ್ಪನ್ನಗಳು ಮಾರಾಟವಾಗಬೇಕು. ನಂದಿನಿ ಗುಡೆಲೈಫ್ ಮಾರಾಟದ ಜಾಲದಲ್ಲಿ ವಿತರಕರೆಂಬ ಹೆಸರಿದೆ. ಆದರೆ ಮಾರಾಟ ಮತ್ತು ವಿತರಣಾ ವಿಭಾಗದ ಹೊರರಾಜ್ಯದಲ್ಲಿ ವಿತರಕರನ್ನು ಸೂಪರ್ ಸ್ಟಾಕಿಸ್ಟ್ ಎಂದು ಕರೆಯಲಾಗುತ್ತದೆ. ಆದ್ದರಿಂದ ಇನ್ನುಮುಂದೆ ವಿತರಕರು ಎಂದು ಸಮನಾದ ಹೆಸರಿನಲ್ಲಿ ನಂದಿನಿ ಉತ್ಪನ್ನಗಳನ್ನು ಮಾರಾಟ ಜಾಲವನ್ನು ನಿರ್ಮಾಣ ಮಾಡುವ ಆಲೋಚನೆಯನ್ನು ಹೊಂದಲಾಗಿದೆ. ಇದರ ಬಗ್ಗೆ (ಅನುಭಂದ VI ರಲ್ಲಿ) ವಿವರಿಸಲಾಗಿದೆ. ಇದಕ್ಕೆ ಸಂಬಂದಿಸಿದಂತೆ ವಿತರಕರನ್ನು ನೇಮಿಸುವ ವಿಧಾನದ ಬಗ್ಗೆ ಅನುಭಂದ VIII ರಲ್ಲಿ ವಿವರಿಸಲಾಗಿದೆ. ಸಗಟು ಮಾರಾಟಗಾರರು ಹಾಗೂ ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿಯ ಮಾರಾಟ ಮಳಿಗೆ (ಡಿಪೋ) ಮತ್ತು ನಿರ್ವಹಿಸುವ ವಿತರಣೆಯನ್ನು ಅನುಭಂದ VIII ರಲ್ಲಿ ವಿವರಿಸಲಾಗಿದೆ. ವಿತರಣಾ ಜಾಲದಲ್ಲಿ ಸಿಗುವ ನಿರ್ವಹಣಾ ವೆಚ್ಚ ಹಾಗೂ ಉತ್ಪನ್ನವಾರು ಆದಾಯವನ್ನು ಅನುಭಂದ IX ರಲ್ಲಿ ಮಂಡಿಸಲಾಗಿದೆ.

**6.2 ರೆಫ್ರಿಜೆರೇಟೆಡ್ ಹಾಗೂ ಫ್ರೋಜನ್ ಉತ್ಪನ್ನಗಳ ವಿತರಣೆ**

ಪ್ರಸ್ತುತ ಮಾರುಕಟ್ಟೆಯಲ್ಲಿ ಲಭ್ಯವಿರುವ ಇತರೆ ಉತ್ಪನ್ನಗಳಿಗಿಂತ ನಂದಿನಿ ಉತ್ಪನ್ನಗಳ ಗುಣಮಟ್ಟ ಉತ್ಕೃಷ್ಟವಾಗಿರುವುದರಿಂದ ಗ್ರಾಹಕರ ಮನ ಮುಟ್ಟುವಂತೆ ಮಾಡಲು ವ್ಯಾಪಕವಾದ ಜಾಹೀರಾತು ಆಂದೋಲನದ ಮೂಲಕ ಗುಣಮಟ್ಟ ಉತ್ಕೃಷ್ಟತೆಯನ್ನು ಮನವರಿಕೆ ಮಾಡಿಕೊಳ್ಳಲು ಉದ್ದೇಶಿಸಲಾಗಿದೆ. ಗ್ರಾಹಕರಿಗೆ ಅವಶ್ಯವಾದ ನಂದಿನಿ ಉತ್ಪನ್ನಗಳ ರುಚಿ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು.

ರೆಫ್ರಿಜೆರೇಟೆಡ್ ಹಾಗೂ ಫ್ರೋಜನ್ ಉತ್ಪನ್ನಗಳ ಮಾರಾಟಕ್ಕೆ ಶೀಥಲೀಕರಣದ ಕೊಠಡಿ ಅತ್ಯವಶ್ಯಕವಾಗಿ ಇರಬೇಕಾಗುತ್ತದೆ. ಜೊತೆಗೆ ಡಿಪೋದಿಂದ ಸಗಟು ವಿತರಕರ ಮೂಲಕ ರೀಟೇಲ್ ಅಂಗಡಿಗಳಿಗೆ ವಿತರಿಸಲು ವ್ಯವಸ್ಥೆ ರೂಪಿಸಬೇಕು. ಇದಕ್ಕಾಗಿ ಶೀಥಲೀಕರಣ ವ್ಯವಸ್ಥೆ ಅಚ್ಚುಕಟ್ಟಾಗಿದ್ದರೆ ಉತ್ಪನ್ನಗಳನ್ನು ಶೇಖರಿಸಲು ಸಾಧ್ಯವಾಗಲಿದೆ. ಇದಕ್ಕಾಗಿ ಮಾರುಕಟ್ಟೆಯಲ್ಲಿ ಲಭ್ಯವಿರುವ

ರೆಫ್ರಿಜೆರೇಟೆಡ್ ಮತ್ತು ಫ್ರೋಜನ್ ಫುಡ್ ವಿತರಕರುಗಳ ಹಾಗೂ ಬಹುರಾಷ್ಟ್ರೀಯ ಸಂಸ್ಥೆಗಳ ಸೌಲಭ್ಯಗಳನ್ನು ಬಳಸಿಕೊಳ್ಳಲು ಯೋಜಿಸಬೇಕಾಗಿದೆ.

## 6.3 ರಾಜ್ಯ ಹಾಗೂ ಹೊರರಾಜ್ಯಗಳಲ್ಲಿ ವಿನೂತನ ರೀತಿಯಲ್ಲಿ ವಿತರಣೆ

ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟ ವ್ಯವಸ್ಥೆಯಲ್ಲಿ ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿಯು, ಬೃಹತ್‌ಆಗಿರುವ ಸೂಪರ್ ಮಾರ್ಕೆಟ್‌ಗಳಾದ– ರಿಲೆಯನ್ಸ್ ಫ್ರೆಶ್, ಸ್ಟಾರ್ ಹೈಪರ್ ಮಾರ್ಕೆಟ್, ಮೆಟ್ರೋ ಕ್ಯಾಶ್ ಅಂಡ್ ಕ್ಯಾರಿ, ಮೋರ್ ಮುಂತಾದ ಮಳಿಗೆಗಳನ್ನು ಸಗಟು ಮಾರಾಟಗಾರರನ್ನಾಗಿ ನಿಯೋಜಿಸಿ ನಂದಿನಿ ಉತ್ಪನ್ನಗಳು ಮಾರಾಟಕ್ಕೆ ಲಭ್ಯವಿರುವಂತೆ ಯೋಜಿಸಲಾಗಿದೆ. ಪ್ರಸ್ತುತ ಉತ್ಪನ್ನಗಳನ್ನು ಸಗಟು ಮಾರಾಟಗಾರರ ಮೂಲಕ ಅವುಗಳಿಗೆ ತಲುಪಿಸಲಾಗುತ್ತಿದೆ.

ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರುಕಟ್ಟೆಯು ಅತ್ಯಂತ ಸ್ಪರ್ಧಾತ್ಮಕವಾಗಿದ್ದು, ನೂತನವಾದ ರೀಟೇಲ್ ಮಾರಾಟಗಾರರು ಹೆಚ್ಚು ಸೇವೆ ಹಾಗೂ ಮಾರ್ಜಿನ್ ನಿರೀಕ್ಷಿಸುತ್ತಾರೆ. ಆದ್ದರಿಂದ ದೊಡ್ಡದಾದ ಅಂಗಡಿಗಳಿಗೆ ಡಿಪೋಗಳಿಲ್ಲಿದ ಕಡೆಗಳಲ್ಲಿ ನೇರವಾಗಿ ಸರಬರಾಜು ಮಾಡಬೇಕಾಗುತ್ತದೆ.

ಹೊರರಾಜ್ಯದ ಮಾರುಕಟ್ಟೆಗೆ, ವಿತರಕರುಗಳು ಕನಿಷ್ಠ ಬೇಡಿಕೆ ಪ್ರಮಾಣ ಅಂದರೆ, ಒಂದು ಪೂರ್ಣ ಟ್ರಕ್ ಲೋಡ್ ಅಂದರೆ 9 ಮೆ.ಟನ್ ಉತ್ಪನ್ನಗಳನ್ನು ಹಾಗೂ 6 ಮೆ.ಟನ್ ಶೀಥಲ ಸರಪಳಿ ಅವಶ್ಯವಾದ ಉತ್ಪನ್ನಗಳನ್ನು ಖರೀದಿಸಬೇಕಾಗಿರುತ್ತದೆ. ಪ್ರಸ್ತುತ ಹೊರರಾಜ್ಯಗಳಲ್ಲಿ ತುಪ್ಪ, ಕೆನೆರಹಿತ ಹಾಲಿನಪುಡಿ, ಡೈರಿ ವೈಟ್ನರ್ ಹಾಗೂ ಶೀಥಲ ಸರಪಳಿ ಅವಶ್ಯವಾದ ಬೆಣ್ಣೆ, ಚೀಸ್ ಮುಂತಾದ ಉತ್ಪನ್ನಗಳು ವಿತರಣೆಯಾಗುತ್ತದೆ. ಡಿಪೋಗಳ ಮೂಲಕವಲ್ಲದೇ ನಿಯೋಜಿಸಿದ ಸಗಟು ಮಾರಾಟಗಾರರ ಮೂಲಕ ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತಿದೆ.

### 6.4 ಇ. ಕಾಮರ್ಸ್ ಮುಖಾಂತರ ಪೂರೈಕೆ

ಮಾರುಕಟ್ಟೆಯಲ್ಲಿರುವ ಚಿಕ್ಕ ಪ್ರಮಾಣದ ಉತ್ಪನ್ನಗಳನ್ನು ಹಾಗೂ ಡೇರಿ ಉತ್ಪನ್ನಗಳನ್ನು ಮಾರಾಟ ಮಾಡಲು ಡಿಜಿಟಲ್ ಮಾರಾಟ ವ್ಯವಸ್ಥೆ ಅಳವಡಿಸಿಕೊಳ್ಳಲು ಮಾರಾಟಗಾರರು ಉತ್ಸುಕರಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಯುವ ಸಮುದಾಯ ಬಳಸುತ್ತಿರುವ ಇ ಕಾಮರ್ಸ್ ವ್ಯವಸ್ಥೆಯಿಂದಾಗಿ ಆಹಾರ ವಸ್ತುಗಳನ್ನು ಮನೆಬಾಗಿಲಿಗೆ ತರಿಸಿಕೊಳ್ಳಲು ಸಹಾಯವಾಯಿತು. ಜೊತೆ ಜೊತೆಗೆ ದಿನನಿತ್ಯದ ಅವಶ್ಯಕತೆಯಾದ ಸ್ಯಾಚೆ ಹಾಲಿನ ಸರಬರಾಜನ್ನು ಅನೇಕ ಸಂಸ್ಥೆಗಳು ಆರಂಭಿಸಿವೆ ಜೊತೆಗೆ ದಿನನಿತ್ಯದ ಅವಶ್ಯಕ ವಸ್ತುಗಳನ್ನು ಗ್ರಾಹಕರು ತರಿಸಿಕೊಳ್ಳಲು ಆರಂಭಿಸಿದ್ದಾರೆ.

ಜಿಲ್ಲಾ ಹಾಲು ಒಕ್ಕೂಟಗಳು ತಮ್ಮ ಉತ್ಪನ್ನಗಳಾದ ಹಾಲು ಮತ್ತು ತುಪ್ಪವನ್ನು ಆನ್‌ಲೈನ್ ಮಾರಾಟ ಸಂಸ್ಥೆಗಳಾದ– ಸ್ವಿಗ್ಗಿ, ಮಿಲ್ಕ್ ಬ್ಯಾಸ್ಕೆಟ್, ಫಾರ್ಮ್ ಫ್ರೆಶ್ ಮುಂತಾದವುಗಳ ಮೂಲಕ ಗ್ರಾಹಕರ ಬೇಡಿಕೆ ಅನುಸಾರ ಪೂರೈಸುತ್ತಿವೆ. ಕರ್ನಾಟಕ ಕರ್ನಾಟಕ ಸಹಕಾರ ಹಾಲು ಮಹಾಮಂಡಳದ ಸಹ ಇ ಕಾಮರ್ಸ್ ನಲ್ಲಿ ಮುಂಚೂಣಿ ಸ್ಥಾನದಲ್ಲಿರುವ ಬಿಗ್‌ಬ್ಯಾಸ್ಕೆಟ್, ಅಮೆಝಾನ್ ಹಾಗೂ ಬೆಂಗಳೂರಿನಲ್ಲಿ ಫ್ಲಿಪ್‌ಕಾರ್ಟ್ ಮೂಲಕ ನಂದಿನಿ ಉತ್ಪನ್ನಗಳ ಮಾರಾಟ ವ್ಯವಸ್ಥೆ ರೂಪಿಸಲಾಗಿದೆ. ಮುಂಬರುವ ದಿನಗಳಲ್ಲಿ ಇತರ ನಗರಗಳಲ್ಲಿಯೂ ಈ ವ್ಯವಸ್ಥೆ ಬಳಸಿಕೊಂಡು ನಂದಿನಿ ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡಲಾಗುವುದು.

## 7.0 ಮಾರಾಟದ ಚಟುವಟಿಕೆಗಳ ಗಣಕೀಕರಣ

ಉತ್ಪನ್ನಗಳನ್ನು ವ್ಯವಸ್ಥಿತವಾಗಿ ಹಾಗೂ ಶೀಘ್ರವಾಗಿ ವಿಲೇವಾರಿ ಮಾಡಲು ಗಣಕೀಕರಣ ವ್ಯವಸ್ಥೆಯು ಹೆಚ್ಚು ಪರಿಣಾಮಕಾರಿಯಾಗಿದೆ, ಎಂಬುವುದನ್ನು ಅರಿತಿದ್ದು ಅದಕ್ಕಾಗಿ ಅವಶ್ಯಕ ಮಾಹಿತಿಗಳನ್ನು ಉತ್ಪಾದನಾ ಘಟಕ, ಡಿಪೋಗಳು ಹಾಗೂ ವಿತರಣಾ ವ್ಯವಸ್ಥೆಗಳೊಂದಿಗೆ ಸಮನ್ವಯಗೊಳಿಸಿ ನೂತನ ತಂತ್ರಜ್ಞಾನವನ್ನು ಬಳಿಸಿಕೊಳ್ಳುವ ಯೋಜನೆ ರೂಪಿಸಲಾಗಿದೆ. ಈ ತಾಂತ್ರಿಕತೆಯಿಂದ, ಮಾರಾಟ ಜಾಲದಲ್ಲಿ ತೊಡಗಿಸಿಕೊಡಿರುವ ಅಧಿಕಾರಿಗಳ ಮೊಬೈಲ್ ಗಳಲ್ಲಿ ನಿಖರ ಮಾಹಿತಿ ದೊರೆತು ಸೂಕ್ತ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಜಾಲಕ್ಕೆ ವಿತರಿಸಲು

ಅನುಕೂಲವಾಗುವುದರ ಜೊತೆಗೆ ಮಾರುಕಟ್ಟೆ ಪ್ರದೇಶದಲ್ಲಿ ಕಾರ್ಯನಿರತರಾಗಿರುವ ಕ್ಷೇತ್ರ ಸಿಬ್ಬಂದಿ/ಅಧಿಕಾರಿಗಳಿಗೆ ಉತ್ತಮವಾದ ನಿಖರವಾದ ಮಾಹಿತಿ ದೊರೆತು ಸೂಕ್ತ ವ್ಯವಸ್ಥೆ ಮಾಡಲು ಸಹಕಾರಿ ಆಗಲಿದೆ. ಈ ವ್ಯವಸ್ಥೆಯಿಂದ ಕರ್ನಾಟಕ ಸಹಕಾರ ಹಾಲು ಮಹಾಮಂಡಳದ ಜಿಲ್ಲಾ ಸಹಕಾರ ಹಾಲು ಒಕ್ಕೂಟಗಳೊಂದಿಗೆ ಉತ್ಪನ್ನಗಳ ಉತ್ಪಾದನೆ ಹಾಗೂ ವಿತರಣೆಗೆ ಸೂಕ್ತ ಸಮನ್ವಯ ಸಾಧಿಸಬಹುದಾಗಿದೆ.

## 8.0 ಮಾನವ ಶಕ್ತಿ ಅವಶ್ಯಕತೆ, ನೈಪುಣ್ಯತೆ ಅಭಿವೃದ್ದಿ ಹಾಗೂ ಮಾರಾಟ ವ್ಯವಸ್ಥೆ ನೌಕರರು

ಅಮುಲ್ ಸಂಸ್ಥೆಯು ರೂಪಿಸಿರುವಂತೆ ದೇಶದಾದ್ಯಂತದ ಮಾರಾಟ ಜಾಲಕ್ಕೆ ಅವಶ್ಯವಾದ ಸಿಬ್ಬಂದಿಗಳನ್ನು ನೇಮಿಸುವುದು ಹಾಗೂ ಅದರಲ್ಲಿ ಅತ್ಯುತ್ತಮವಾದವರನ್ನು ಉಳಿಸಿಕೊಳ್ಳವುದನ್ನು ನಾವು ಅಳವಡಿಸಿಕೊಳ್ಳಬೇಕಾಗಿದೆ. ಇದಕ್ಕಾಗಿ ಪ್ರಸ್ತುತವಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಬೇಕಾದ ಅವಶ್ಯಕತೆಯಿದೆ. ಇದಕ್ಕಾಗಿ ಡಿಪೋಗಳನ್ನು ನಿರ್ವಹಿಸಲು ನುರಿತ ಸಿಬ್ಬಂದಿ ವರ್ಗ ಹಾಗೂ ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡಲು ವಿಶೇಷವಾದ ನೌಕರರು/ಸಿಬ್ಬಂದಿಗಳ ಅವಶ್ಯಕತೆಯಿದೆ. ಪ್ರಸ್ತುತವಿರುವ ಅಧಿಕಾರಿಗಳು, ನೌಕರರು ಮತ್ತು ಸಹಾಯಕರ ಪಟ್ಟಿಯನ್ನು ಅನುಭಂದ ರಲ್ಲಿಡಲಾಗಿದೆ. ಹಾಲಿನ ಉತ್ಪನ್ನಗಳು ಮಾರಾಟವಾಗುವ ಪ್ರಮಾಣ ಹಾಗೂ ವಹಿವಾಟಿನ ಪ್ರಮಾಣವನ್ನಾಧರಿಸಿ ಡಿಪೋಗಳನ್ನು ವಿವಿಧ ಶ್ರೇಣಿಗಳಲ್ಲಿ ಗುರುತಿಸಿ ಡಿಪೋಗಳಿಗೆ ಮಾನವ ಸಂಪನ್ಮೂಲವನ್ನು ನಿರ್ಧರಿಸಬಹುದಾಗಿದೆ.

ಮುಂದಿನ ಐದು ವರ್ಷಗಳ ಮಾರಾಟದ ಪ್ರಮಾಣವನ್ನು ಆಧರಿಸಿ ಡಿಪೋಗಳನ್ನು ನಿರ್ವಹಿಸಲು ಅವಶ್ಯವಾದ ಮಾನವ ಸಂಪನ್ಮೂಲವನ್ನು ನಿರ್ಧರಿಸಿದ್ದು, ಸುಮಾರು 700 ಸಂಖ್ಯೆಯ ಮಾನವ ಸಂಪನ್ಮೂಲದ ಅವಶ್ಯಕತೆಯಿದ್ದು (ಅನುಭಂದ- ನೋಡಿ) ಈ ಕಾರ್ಯಕ್ಕೆ ನಿಯೋಜಿಸುವ ಅಧಿಕಾರಿ/ಸಿಬ್ಬಂದಿಗಳಿಗೆ ಸ್ಥಳೀಯ ಭಾಷೆಯ ಅರಿವಿರಬೇಕಾಗುತ್ತದೆ. ದೇಶದ ಯಾವ ಭಾಗದಲ್ಲಾದರೂ ಕಾರ್ಯ ನಿರ್ವಹಿಸುವಂತೆ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿ ನೀಡಬೇಕಾಗಿರುತ್ತದೆ.

ಮಾರಾಟ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿ/ಸಿಬ್ಬಂದಿಗಳಿಗೆ ಡಿಪೋ ಹಾಗೂ ಕಾರ್ಯ ಮಾಡುವ ತಂಡಗಳಿಗೆ ಹಾಗೂ ಆರ್ಥಿಕ ಗುರಿಗಳನ್ನು ನಿಗದಿಪಡಿಸಿ ಅವರ ಪ್ರಗತಿಯನ್ನು ಪರಿವೀಕ್ಷಿಸಬೇಕಾಗುತ್ತದೆ. ಹಾಲಿ ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿಯಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಅಧಿಕಾರಿ/ನೌಕರ ವರ್ಗಗಳನ್ನು ಹಾಗೂ ವಿಭಾಗದಲ್ಲಿರುವ ಎಲ್ಲರಿಗೂ ಒಂದೇ ರೀತಿಯ ಸಮಾನ ಭಾದ್ಯತೆಯಿದೆ. ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಮಾರಾಟದಲ್ಲಿ ಉತ್ಕೃಷ್ಟತೆ ಸಾದಿಸಬಲ್ಲ ವ್ಯಕ್ತಿಗಳಿಗೆ ಸೂಕ್ತ ಸಂಭಾವನೆಯ ಮೊತ್ತ ನೀಡಿ ನೇಮಕ ಮಾಡುವುದರ ಜೊತೆಗೆ ಅಧಿಕ ಮಾರಾಟ ಸಾಧಿಸುವವರಿಗೆ ಸೂಕ್ತ ಬಹುಮಾನ ನೀಡಿ ಗೌರವಿಸಿದಾಗ ಅವರುಗಳು ಮತ್ತಷ್ಟು ಸಾಧನೆಮಾಡಲು ಸಹಕಾರಿಯಾಗುತ್ತದೆ. ಹೀಗಾಗಿ ಅವರುಗಳಿಗೆ ಸಾಧಿಸಬೇಕಾದ ಮಾರಾಟದ ಗುರಿ ನಿಗದಿಪಡಿಸುವುದು ಅವಶ್ಯಕತೆಯಿದೆ.

ರಾಷ್ಟ್ರದಾದ್ಯಂತ ನಂದಿನಿ ಉತ್ಪನ್ನಗಳ ಮಾರಾಟಕ್ಕೆ ಅವಶ್ಯವಾದ ಜಾಹೀರಾತು ಪ್ರಚಾರವನ್ನು ಮುಂಬರುವ ದಿನಗಳಲ್ಲಿ ಹಮ್ಮಿಕೊಳ್ಳಲಾಗುವುದು. ಉತ್ತರ ಭಾರತದ ಪ್ರದೇಶಗಳಲ್ಲಿ ನಂದಿನಿ ಉತ್ಪನ್ನಗಳ ಲಭ್ಯತೆ ಕಡಿಮೆ ಇರುವುದರಿಂದ ಆ ಭಾಗಗಳಲ್ಲಿ ಅವಶ್ಯಕವಾದ ಜಾಹೀರಾತು ಪ್ರಚಾರ ನಡೆಸುವುದು ಇಂದಿನ ಅಗತ್ಯತೆ ಆಗಿರುತ್ತದೆ

ರಾಷ್ಟ್ರದಾದ್ಯಂತ ವಿವಿಧ ಭಾಗಗಳಿಗೆ ಅವಶ್ಯವಿರುವ ಆಕರ್ಷಕ ಜಾಹೀರಾತು ಪ್ರಚಾರ ಆಯೋಜಿಸಲು ಹೆಸರಾಂತ ಜಾಹೀರಾತು ಸಂಸ್ಥೆ/ಬ್ರಾಂಡ್ ಸಲಹೆಗಾರರ ಸೇವೆಯನ್ನು ಬಳಸಿಕೊಂಡು ವಿನೂತನವಾದ ಜಾಹೀರಾತು ಪ್ರಚಾರವನ್ನು ನಿರ್ವಹಿಸಲು ಯೋಜಿಸಲಾಗಿದೆ. ಜಾಹೀರಾತು ಕ್ರಿಯಾತ್ಮಕ ಹಾಗೂ ವೃತಿಪರ ಕಾರ್ಯವಾದ್ದರಿಂದ ಕಡಿಮೆ ಹಣ ಸೂಚಿಸುವುದೊಂದೇ ಮಾನದಂಡವಾಗಿರದೇ ಆ ಸಂಸ್ಥೆಯ ಕ್ರಿಯಾತ್ಮಕ ಹಾಗೂ ಯೋಗತ್ಯೆಯನ್ನಾಧರಿಸಿದೇ ಇತರೆ ಮಾನದಂಡವನ್ನು ಗಮನಿಸಿ ಕಾರ್ಯವನ್ನು ನಿರ್ವಹಿಸಲು ಯೋಜಿಸಬೇಕಾಗುತ್ತದೆ. ಉತ್ಪನ್ನಗಳು ಮಾರಾಟವಾಗುವ ಸ್ಥಳಗಳಲ್ಲಿ ಪ್ರದರ್ಶಿಸಲು ಅವಶ್ಯವಾದ ಪ್ರಚಾರ ಸಾಮಾಗ್ರಿಗಳ ಜೊತೆಗೆ ದೂರದರ್ಶನ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಪ್ರದರ್ಶಿಸಲು ಅವಶ್ಯವಾದ ಜಾಹೀರಾತು ಸಾಮಾಗ್ರಿಗಳನ್ನು ತಯಾರಿಸಿ ವಿತರಿಸಬೇಕಾದ ಅವಶ್ಯಕತೆಯಿದೆ. ಇದರಿಂದಾಗಿ ಎಲ್ಲಾ ರೀತಿಯ ಗ್ರಾಹಕರನ್ನು ವಿವಿಧ ಮಾದ್ಯಮಗಳ ಮೂಲಕ ತಲುಪಬಹುದಾದ ಸಾಧ್ಯತೆಯಿದೆ.

## 10.0 ಹೊಸ ಉತ್ಪನ್ನಗಳ ಅಭಿವೃದ್ಧಿ

ಪ್ರಸ್ತುತ ನಂದಿನಿ ಬ್ರ್ಯಾಂಡ್ ಅಡಿ 75 ಕ್ಕೂ ಹೆಚ್ಚು ಉತ್ಪನ್ನಗಳಿದ್ದು 350 ವಿವಿಧ ಪ್ರಮಾಣಗಳಲ್ಲಿ ಮಾರಾಟವಾಗುತ್ತಿದ್ದು ಗ್ರಾಹಕರ ಬೇಡಿಕೆ ಮತ್ತಷ್ಟು ಹೆಚ್ಚಾಗುತ್ತಿದೆ. ಮಾರಾಟ ವ್ಯವಸ್ಥೆಯಲ್ಲಿ ಕಾರ್ಯ ನಿರ್ವಹಿಸುವವರಿಗೆ ಕಾಲದಿಂದ ಕಾಲಕ್ಕೆ ಅವಶ್ಯಕ ತರಬೇತಿ ಹಾಗೂ ಕೌಶಲ್ಯದ ಅಭಿವೃದ್ಧಿ ಮತ್ತು ಉತ್ತಮ ವ್ಯವಹಾರಗಳ ಜ್ಞಾನವನ್ನು ಗಳಿಸಿಕೊಳ್ಳುವುದು ಅವಶ್ಯಕ. ಡಿಜಿಟಲ್ ಮಾರುಕಟ್ಟೆ ವ್ಯವಹಾರದ ಚಾಕಚಕ್ಯತೆ ಮಾತುಗಾರಿಕೆ, ಸಾಮಾಜಿಕ ಜಾಲತಾಣದಲ್ಲಿ ವ್ಯವಹರಿಸಲು ಅವಶ್ಯವಾದ ತರಬೇತಿ ಅಗತ್ಯವಾಗಿದ್ದು ಇದನ್ನು ಒದಗಿಸುವುದರಿಂದ ಮಹತ್ವಾಕಾಂಕ್ಷಿ ದೂರಗಾಮಿ ಯೋಜನೆ 2026–27 ರ ಹೆಚ್ಚಿನ ಮಾರಾಟ ಮಾಡುವ ಗುರಿಗಳನ್ನು ಸಾಧಿಸಬಹುದಾಗಿದೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳದ ಉದ್ಯೋಗಿಗಳಿಗೆ ತರಬೇತಿ ನೀಡುವುದರ ಜೊತೆಗೆ ಸಗಟು ಮಾರಾಟ ಜಾಲದ ಹಾಗೂ ರೀಟೇಲ್ ಮಾರಾಟದಲ್ಲಿ ಪಾಲ್ಗೊಂಡಿರುವವರಿಗೆ ತರಬೇತಿ ನೀಡಬೇಕಾಗಿದೆ. ಈ ಜಾಲದಲ್ಲಿರುವರಿಗೆ ಹಳ್ಳಿಯ ಹಾಲು ಸಂಘಗಳು, ಉತ್ಪಾದನಾ ಘಟಕಗಳು ಮುಂತಾದವುಗಳನ್ನು ನೇರವಾಗಿ ನೋಡುವ ಅವಕಾಶ ಕಲ್ಪಿಸಿ ತಮ್ಮ ಕಾರ್ಯದ ಬಗ್ಗೆ ಹೆಮ್ಮೆಪಡುವಂತೆ ಮಾಡುವ ಅವಶ್ಯಕತೆಯಿದೆ. ಹಾಲು ಉತ್ಪನ್ನಗಳನ್ನು ಗ್ರಾಹಕರಿಗೆ ತಲಪಿಸುವಲ್ಲಿ ಡೀಲರ್‌ಗಳು ಪ್ರಮುಖ ಪಾತ್ರ ವಹಿಸುವುದರಿಂದ ಅದರಲ್ಲಿ ಅತ್ಯುತ್ತಮವಾದವರನ್ನು ಗುರುತಿಸಿ ವಾರ್ಷಿಕವಾಗಿ ಪ್ರೋತ್ಸಾಹಿಸುವ ಪರಿಪಾಠ ಆರಂಭಿಸಬೇಕಾಗಿದೆ.

ಮಾರುಕಟ್ಟೆ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುವ ಕ್ಷೇತ್ರ ಸಿಬ್ಬಂದಿಗಳ ಕಾರ್ಯವೈಖರಿಯನ್ನು Sales force Automation & Distribution Mangement segments ನ ಸಾಫ್ಟ್‌ವೇರ್ ಮೂಲಕ ಗುರುತಿಸಬಹುದಾಗಿದೆ.

ಮಾರಾಟ ಅಭಿವೃದ್ಧಿ ದೃಷ್ಟಿಯಿಂದ ಅಧಿಕ ಕಾಲ ಬಾಳಿಕೆ ಬರುವ ಉತ್ಪನ್ನಗಳು ಸೂಕ್ತವಾಗಿದ್ದು ಇದಕ್ಕಾಗಿ ಸ್ವಯಂಚಾಲಿತ ಯಂತ್ರಗಳ ಮೂಲಕ ಪ್ಯಾಕ್ ಮಾಡಲು ಯೋಜಿಸಲಾಗಿದೆ ಹಾಗೂ ISO-22000 ಪ್ರಕಾರ ಉತ್ಪಾದಕತೆಯನ್ನು ಸಾಧಿಸಲು ಘಟಕಗಳನ್ನು ಸಿದ್ಧಪಡಿಸಲಾಗಿದೆ.

ಹೊಸದಾಗಿ ರೆಫ್ರಿಜೆರೇಟೆಡ್, ಫ್ರೋಜನ್ ಹಾಗೂ ತಕ್ಷಣ ಸೇವಿಸುವ ಆಹಾರಗಳ ಹೊಸ ಉತ್ಪನ್ನಗಳನ್ನು ಬಿಡುಗಡೆ ಮಾಡುವ ಉದ್ದೇಶ ಹೊಂದಿದೆ.

### 10.1 ನಿರ್ದಿಷ್ಟವಾದ ಉತ್ಪನ್ನಗಳು ನೇರವಾಗಿ ಸೇವಿಸಬಹುದಾದವು

- ಬಿಸ್ಕಟ್ ಮತ್ತು ಬೇಕರಿ ಉತ್ಪನ್ನಗಳ ಶ್ರೇಣಿಯಲ್ಲಿ ನೂತನವಾದ ಉತ್ಪನ್ನಗಳು
- ಸಿಹಿ ತಿಂಡಿಗಳಲ್ಲಿ ಹೊಸದಾದ ಕಾಜು ಕಟ್ಲಿ, ಕಲಾಕಂದ್ ಮತ್ತು ರಸಮಲೈ
- ಸಕ್ಕರೆ ರಹಿತ ಉತ್ಪನ್ನಗಳ ಶ್ರೇಣಿ
- ಬಹುಕಾಲ ಬಾಳಿಕೆ ಬರುವಂತಹ ಹಲ್ವಾ ರೀತಿಯ ಉತ್ಪನ್ನಗಳು
- ಹೊಸದಾದ ಚಾಕೋಲೆಟ್‌ಗಳು
- ಹಾಲಿನ ಪೇಯಗಳು,ಸ್ಮೂತಿಗಳು, ಸೇವಿಸುವ ಯೊಗರ್ಟ್, ಮಿಲ್ಕ್ ಶೇಕ್ ಶ್ರೇಣಿಗಳು, ರಾಗಿ ಮಿಲ್ಕ್ ಪಾನೀಯ, ವೇಡ್ರಿಂಕ್ಸ್,ಜೀರಾ ಮಜ್ಜಿಗೆ.
- ಸಿಹಿಯಾದ ಕಂಡೆನ್ಸಡ್ ಹಾಲು

**ದಿಢೀರ್ ಮಿಶ್ರಣಗಳು**

- ಕೊಕೊ/ಬ್ರೌನ್ ಪೇಯದ ಮಿಶ್ರಣ, (ಬೋರ್ನವೀಟಾ, ಬೂಸ್ಟ್ ತರಹದ ಉತ್ಪನ್ನ)
- ಹಾರ್ಲಿಕ್ಸ್ ರೀತಿಯ ಬಿಳಿಯ ಮಾಲ್ಟೆಡ್ ಪಾನೀಯ
- ಮಕ್ಕಳಿಗೆ ಹಾಲು ಆಹಾರ, ಎದೆಹಾಲಿಗೆ ಪರ್ಯಾಯಾವಾದ ಆಹಾರ, ಹಾಲೂಡಿಕೆ ಹೆಚ್ಚಿಸುವ ಆಹಾರ
- ಮಿಲ್ಕ್ ಶೇಕ್ ಮಿಶ್ರಣ, ಐಸ್ ಕ್ರೀಂ ಮಿಶ್ರಣ,ಪ್ರೋಟೀನ್ ಶೇಕ್, ದಿಡೀರ್ ಕಾಫಿ ಮಿಶ್ರಣ

**10.2 ರೆಫ್ರಿಜಿರೇಟೆಡ್ ಹಾಗೂ ಪ್ರೋಜನ್ ಉತ್ಪನ್ನಗಳು**

ರೆಫ್ರಿಜೆರೇಟೆಡ್ ಹಾಗೂ ಪ್ರೋಜನ್ ಆಹಾರದ ವಿಭಾಗದಲ್ಲಿ ನಂದಿನಿ ಕರ್ನಾಟಕದಲ್ಲಿ ಹೆಸರುಗಳಿಸಿದ್ದು, ಇಂದಿನ ಮಾರುಕಟ್ಟೆಯಲ್ಲಿ ವಿಶೇಷವಾದ ಮೆಚ್ಚುಗೆ ಗಳಿಸಿರುವುದರಿಂದ ರಾಷ್ಟ್ರದ ವಿವಿಧ ಭಾಗದಲ್ಲಿ ಹೊಸ ಮಾರುಕಟ್ಟೆಯನ್ನು ಸೃಷ್ಟಿ ಗೊಳಿಸಬಹುದಾಗಿದೆ.

## ರೆಫ್ರಿಜೆರೇಟೆಡ್ ಮತ್ತು ಪ್ರೋಜನ್ ವಿವಿಧ ಪ್ಯಾಕ್ ಗಳಲ್ಲಿ ಉತ್ಪನ್ನಗಳು

- ಚೀಸ್ ಶ್ರೆಡ್ಸ್
- ಚೀಸ್ ಡಿಪ್ಸ್
- ಚೀಸ್ ಸಾಸಸ್
- ಬಟರ್ ಸ್ಪ್ರೆಡ್ಸ್ : ಗಾರ್ಲಿಕ್, ಚಾಕೊಲೇಟ್,ಬಟರ್ ಸ್ಕಾಚ್,ಪ್ರೋಬಯೊಟಿಕ್, ಬಟರ್ ಸ್ಪ್ರೆಡ್ಸ್

## ತಕ್ಷಣ ಸೇವಿಸುವ ಆಹಾರದ ವಿಧಗಳು

- ಪನ್ನೀರ್ ತಿನಿಸುಗಳಾದ ಪನ್ನೀರ್ ಸಮೋಸ ಪನ್ನೀರ್ ಸ್ಟ್ರಿಂಗ್ ರೋಲ್,ಪನ್ನೀರ್ ಮೋಮೋಸ್, ಮಸಾಲ ಪನ್ನೀರ್ ನಗ್ಗೆಟ್ಸ್, ಪನ್ನೀರ್ ಕಬಾಬ್,ಪನೀರ್ ಕಟ್ಲೆಟ್, ಪನೀರ್ ಫಿಂಗರ್ಸ್, ಪನ್ನೀರ್ ಮಖನಿ ಪಿಜ್ಜಾ, ಪನ್ನೀರ್ ರೈಸ್, ಪನೀರ್ ಬುರ್ಜಿ ಇತ್ಯಾದಿ.
- ಚೀಸ್ ಬಳಸಿದ ಖಾದ್ಯಗಳಾದ: ಚೀಸ್ ಪಿಜ್ಜಾ, ಚೀಸ್ ಬಾಲ್ಸ್, ಚೀಸ್ ಕಾರ್ನ್ ಸಮೋಸ, ಚೀಸ್ ಆನಿಯನ್ ಪಾಕೆಟ್ಸ್,ಸಿನಾಕ್ ಚೀಸ್ ಪಾಕೆಟ್ಸ್, ಚೀಸ್ ರೈಸ್, ಪೊಟಾಟೋ ಚೀಸ್ ಬೈಟ್ಸ್, ಚೀಸ್ ಸೂಪ್, ಚೀಸ್ ಬಾಕ್ಸ್, ಚೀಸ್ ಕೇಕ್ ಇತ್ಯಾದಿ.

## ನಂದಿನಿ ಐಸ್‌ಕ್ರೀಂ ಉತ್ಪಾದನೆ ಮತ್ತು ಮಾರಾಟ

ಪ್ರಸ್ತುತ ಕರ್ನಾಟಕ ಸಹಕಾರ ಹಾಲು ಮಹಾಮಂಡಳದ 03 ಘಟಕಗಳಲ್ಲಿ ನಂದಿನಿ ಐಸ್‌ಕ್ರೀಂ ಉತ್ಪಾದನೆಯನ್ನು ಕೈಗೊಳ್ಳುತ್ತಿದ್ದು, ಐಸ್‌ಕ್ರೀಂ ಉತ್ಪಾದನಾ ಸ್ಥಾವರಗಳನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳುವ ನಿಟ್ಟಿನಲ್ಲಿ ಅಮುಲ್‌ಗೆ ಕೋ-ಪ್ಯಾಕ್ ಮಾಡಿಕೊಡಲಾಗುತ್ತಿದೆ. ಕರ್ನಾಟಕ ಸಹಕಾರ ಹಾಲು ಮಹಾಮಂಡಳದ ಮದರ್‌ಡೇರಿ, ಯಲಹಂಕ, ಬೆಂಗಳೂರು (15000 ಲೀ) ಹಾಗೂ ನಂದಿನಿ ಐಸ್‌ಕ್ರೀಂ ಘಟಕ, ಬಳ್ಳಾರಿ (10000 ಲೀ) ಎರಡು ಘಟಕಗಳನ್ನು ಹಾಗೂ ಹಾಸನ ಹಾಲು ಒಕ್ಕೂಟ-10000 ಲೀ ನಂತೆ ಐಸ್‌ಕ್ರೀಂ ಉತ್ಪಾದನಾ ಸ್ಥಾವರಗಳನ್ನು ಹೊಂದಿದ್ದು, ಒಟ್ಟಾರೆ ದಿನವಹಿ 35000 ಲೀಟರ್ ಐಸ್‌ಕ್ರೀಂ ಉತ್ಪಾದನಾ ಸಾಮರ್ಥ್ಯವನ್ನು ಹೊಂದಿದೆ.

2020-21 ನೇ ಸಾಲಿನಲ್ಲಿ ನಂದಿನಿ ಐಸ್‌ಕ್ರೀಂ ಉತ್ಪಾದನೆಯು ದಿನವಹಿ ಸರಾಸರಿ 7417 ಲೀಟರುಗಳಿದ್ದು, ಮಾರಾಟ ದಿನವಹಿ ಸರಾಸರಿ 7451 ಲೀಟರುಗಳಿರುತ್ತದೆ. ಸದರಿ ಸಾಲಿನಲ್ಲಿ ಕೋವಿಡ್-19 ರ ಸಾಂಕ್ರಾಮಿಕ ರೋಗದ ಮೊದಲ ಅಲೆ ಪ್ರಾರಂಭವಾಗಿರುತ್ತದೆ. ಹಾಗೂ ಅಮೂಲ್ ಐಸ್‌ಕ್ರೀಂಗಾಗಿ ದಿನವಹಿ ಸರಾಸರಿ 8389 ಲೀಟರು ಗಳಷ್ಟು ಕೋಪ್ಯಾಕಿಂಗ್ ಮಾಡಿ ಮಾರಾಟಕ್ಕೆ ನೀಡಲಾಗಿರುತ್ತದೆ. ಹೀಗೆ 2020-21 ನೇ ಸಾಲಿನಲ್ಲಿ ಪ್ರತಿದಿನ ಸರಾಸರಿ 15840 ಲೀಟರು ಗಳಷ್ಟು

ಉತ್ಪಾದನೆ ಮಾಡಲಾಗಿರುತ್ತದೆ. ಐಸ್ ಕ್ರೀಂ ಉತ್ಪಾದನೆಯಲ್ಲಿ ಶೇ.45.16 ರಷ್ಟು ಸಾಮರ್ಥ್ಯದ ಬಳಕೆಯಾಗಿರುತ್ತದೆ. 2019-20 ನೇ ಸಾಲಿನ ಮಾರಾಟ ದಿನವಹಿ ಸರಾಸರಿ 8825 ಲೀಟರುಗಳಿಗೆ 2020-21 ನೇ ಸಾಲಿನ ಮಾರಾಟವನ್ನು ಹೋಲಿಸಿದಾಗ ಕೋವಿಡ್-19 ರ ಮೊದಲ ಅಲೆಯ ಪರಿಣಾಮದಿಂದಾಗಿ ಶೇ.**16** ರಷ್ಟು ಮಾರಾಟ ಕುಂಠಿತವಾಗಿರುತ್ತದೆ.

ನಂದಿನಿ ಐಸ್‌ಕ್ರೀಂ -* ಸ್ವಾದಗಳು - 52 ಸಂಖ್ಯೆ, * ಪ್ಯಾಕ್‌ಗಳು - 146 ಸಂಖ್ಯೆ

**ಪ್ರಸ್ತುತ ಮಾರಾಟ ಸರಪಳಿ:-**

| ಕ್ರ ಸಂ | ಮಾರುಕಟ್ಟೆ ಸರಪಳಿಯ ವಿವರ | ಒಟ್ಟು ಸಂಖ್ಯೆ |
|---|---|---|
| 1 | ಸೂಪರ್ ಸ್ಟಾಕಿಸ್ಟ್ | 03 |
| 2 | ಸಗಟು ಮಾರಾಟಗಾರರು | 79 |
| 3 | ಚಿಲ್ಲರೆ ಮಾರಾಟಗಾರರು | 4049 |

## ಐಸ್‌ಕ್ರೀಂ ದೂರಗಾಮಿ ಯೋಜನೆ-2021-2027

| ವರ್ಷ | ಸರಾಸರಿ ದಿನವಹಿ ಮಾರಾಟ(ಲೀ.) ಮೂಲ 2020-21 | ಶೇ.15 ಮಾರಾಟ ಗುರಿ (ಲೀ) | ಸರಾಸರಿ ದಿನವಹಿ ಮಾರಾಟಗುರಿ (ಲೀ) |
|---|---|---|---|
| 2021-22 | 15000 | 2250 | 17250 |
| 2022-23 | 17250 | 2588 | 19838 |
| 2023-24 | 19838 | 2976 | 22814 |
| 2024-25 | 22814 | 3422 | 26236 |
| 2025-26 | 26236 | 3925 | 30161 |
| 2026-27 | | | |

**ಮುಂದಿನ 5 ವರ್ಷಗಳಲ್ಲಿ ಐಸ್‌ಕ್ರೀಂ ಮಾರಾಟ ಅಭಿವೃದ್ಧಿಪಡಿಸಲು ಈ ಕೆಳಕಂಡಂತೆ ಯೋಜಿಸಲಾಗಿದೆ:**

- ❖ ಕರ್ನಾಟಕ ಸಹಕಾರ ಹಾಲು ಮಹಾಮಂಡಳದ ಘಟಕಗಳಲ್ಲಿ ಹಾಗೂ ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳಲ್ಲಿ ಸುಗುಮವಾಗಿ ನಂದಿನಿ ಐಸ್‌ಕ್ರೀಂ ವಿತರಣೆ ಮಾಡಲು ಅನುಕೂಲವಾಗುವಂತೆ ಕಹಾಮ ವತಿಯಿಂದ 10 ರಿಂದ 15 ಸಾವಿರ ಲೀಟರ್ ಸಾಮರ್ಥ್ಯದ ಡೀಪ್ ಫ್ರೀಜರ್‌ಗಳನ್ನು ಅಳವಡಿಸಿ ಎಲ್ಲಾ ಮಾದರಿಯ ನಂದಿನಿ ಐಸ್‌ಕ್ರೀಂ ಅನ್ನು ದಾಸ್ತಾನು ಮಾಡಲು ಅನುಕೂಲ ಕಲ್ಪಿಸಲು ಯೋಜಿಸಿದ್ದು, ಇದರಿಂದ ಜಿಲ್ಲಾದ್ಯಾಂತ ಎಲ್ಲಾ ಸಗಟು ಮಾರಾಟಗಾರರಿಗೆ ಬೇಡಿಕೆ ನೀಡಿದ 1 ದಿನದಲ್ಲಿ ಸರಬರಾಜಿಗೆ ಅನುಕೂಲವಾಗುವುದಲ್ಲದೆ ಮಾರಾಟ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ. ಇದರ ನಿರ್ವಹಣೆ ಮಾಡಲು 1 ಸಂಖ್ಯೆ ಖಾಯಂ ಸಿಬ್ಬಂದಿ ಮತ್ತು ಲೆಕ್ಕ ಸಂಬಂಧಿಸಿದ ಕಾರ್ಯನಿರ್ವಹಣೆಗೆ ಸಹಾಯಕರನ್ನು ನೇಮಿಸುವುದು

ಅಥವಾ

- ❖ ಕರ್ನಾಟಕ ಸಹಕಾರ ಹಾಲು ಮಹಾಮಂಡಳವು ಐಸ್‌ಕ್ರೀಂ ಉತ್ಪಾದನಾ ಘಟಕ/ಒಕ್ಕೂಟಗಳಿಂದ ಐಸ್‌ಕ್ರೀಂ ಉತ್ಪನ್ನಗಳನ್ನು ನೇರವಾಗಿ ಪಡೆದು, ಕೇಂದ್ರೀಕೃತ ಪ್ರಾಂತ್ಯವಾರು ಐಸ್‌ಕ್ರೀಂ ದಾಸ್ತಾನು ಮಳಿಗೆಗಳಲ್ಲಿ ಸಂಗ್ರಹಿಸಿ,

ಸೂಪರ್ ಸ್ಟಾಕಿಸ್ಟ್/ಸಗಟು ಮಾರಾಟಗಾರರಿಗೆ ವಿತರಣೆ ಮಾಡಲು ಅಗತ್ಯವಿರುವ ವ್ಯವಸ್ಥೆಗಳನ್ನು (ಮಳಿಗೆ, ಸಿಬ್ಬಂದಿ, ಸಾಗಾಣಿಕಾ ವ್ಯವಸ್ಥೆ ಮುಂತಾದವು) ಕಲ್ಪಿಸುವುದು.

❖ ಐಸ್‌ಕ್ರೀಂ ಲಭ್ಯವಿಲ್ಲದ ಸ್ಥಳಗಳಲ್ಲಿ ಚಿಲ್ಲರೆ ಮಾರಾಟಗಾರರನ್ನು ಗುರುತಿಸಿ ಮಾರಾಟ ಪ್ರಾರಂಭಿಸಲು, ವರ್ಷಪೂರ್ತಿ ನಂದಿನಿ ಐಸ್‌ಕ್ರೀಂ ಲಭ್ಯತೆ ಇರುವಂತೆ ನಿರ್ವಹಣೆ ಮಾಡಲು, ಸ್ಪರ್ಧಾತ್ಮಕ ಬ್ರ್ಯಾಂಡ್‌ಗಳ ಮಾರ್ಜಿನ್, ಹೊಸ ಉತ್ಪನ್ನ ಹಾಗೂ ಸ್ಕೀಂನ ಬಗ್ಗೆ ಕಾಲಕಾಲಕ್ಕೆ ಮಾಹಿತಿ ನೀಡಲು, ಗುಣಮಟ್ಟ ಸಂಬಂಧಿಸಿದ ಹಾಗು ಇತರೆ ದೂರುಗಳಿದ್ದಲ್ಲಿ ತ್ವರಿತವಾಗಿ ಪರಿಹರಿಸಲು, ಕ್ಷೇತ್ರವ್ಯಾಪ್ತಿಯಲ್ಲಿ ಮಾರಾಟ ಅಭಿವೃದ್ಧಿಪಡಿಸಲು ಹಾಗು ಮೇಲಾಧಿಕಾರಿಗಳು ನೀಡುವ ಮಾರ್ಗದರ್ಶನದಂತೆ ಕಾರ್ಯನಿರ್ವಹಿಸಲು ಪ್ರತಿ ಜಿಲ್ಲೆಗಳಲ್ಲಿ 2–3 ತಾಲ್ಲೂಕುಗಳಿಗೆ ಒಬ್ಬರಂತೆ ಕ್ಷೇತ್ರ ಸಿಬ್ಬಂದಿಯನ್ನು ನೇಮಿಸುವುದು.

❖ ಪ್ರತಿ ವರ್ಷಯೋಜಿತ ಮಾರಾಟ ಅಭಿವೃದ್ಧಿಗೆ ಅನುಕೂಲವಾಗಲು ಮತ್ತು ಮಾರಾಟ ಜಾಲ ಬಲಪಡಿಸಲು, ಇತರೆ ಬ್ರ್ಯಾಂಡ್‌ಗಳ ಸ್ಪರ್ಧಾತ್ಮಕ ಯೋಜನೆಗಳನ್ನು ಅವಲೋಕಿಸಿ, ಸೂಕ್ತ ಪ್ರತಿಯೋಜನೆಗಳೊಂದಿಗೆ ಮಾರುಕಟ್ಟೆಯಲ್ಲಿ ಮುಂದುವರೆಯಲು ಬೇಕಾದ ಅಗತ್ಯತೆಗಳನ್ನು (ಅನುಕೂಲಗಳು, ಸ್ಕೀಂಗಳು, ಕೊಡುಗೆಗಳು, ಪ್ರೋತ್ಸಾಹಧನ, ಉತ್ತೇಜನ ಇತ್ಯಾದಿ) ಒದಗಿಸಿ ಸೂಪರ್ ಸ್ಟಾಕಿಸ್ಟ್‌ಗಳನ್ನು ಮತ್ತು ಸಗಟು ಮಾರಾಟಗಾರರನ್ನು ನೇಮಕ ಮಾಡುವುದು.

❖ ಟ್ರೈಸೈಕಲ್ ಪರಿಕಲ್ಪನೆಯೊಂದಿಗೆ ಟ್ರೈಸೈಕಲ್/ಮೊಬೈಲ್ ವ್ಯಾನ್‌ಗಳ ಮೂಲಕ ನಂದಿನಿ ಐಸ್‌ಕ್ರೀಂ ಉತ್ಪನ್ನಗಳನ್ನು ಮಾರಾಟ ಮಾಡಲು ಪ್ರತ್ಯೇಕವಾಗಿ ಟ್ರೈಸೈಕಲ್/ಮೊಬೈಲ್ ಸಗಟು ಮಾರಾಟಗಾರರನ್ನು ನೇಮಕ ಮಾಡುವ ಮೂಲಕ ಬೆಂಗಳೂರಿನ ಜನನಿಬಿಡ ಸ್ಥಳಗಳಾದ – ಪಾರ್ಕ್‌ಗಳು, ಸರ್ಕಾರಿ ಕಚೇರಿ, ನೋಂದಣಾಕಾರಿಗಳ ಕಚೇರಿ, ಆರ್ ಟಿ ಓ ಕಛೇರಿ ರೈತರ ಸಂತೆ, ಮಾರುಕಟ್ಟೆ ಪ್ರದೇಶಗಳಲ್ಲಿ ನಂದಿನಿ ಐಸ್‌ಕ್ರೀಂ ಉತ್ಪನ್ನಗಳನ್ನು ಮಾರಾಟ ಮಾಡಲು ಕ್ರಮವಿಡುವುದು.

❖ ಹೋಟೆಲ್‌ಗಳು, ಮದುವೆ ಸಮಾರಂಭಗಳು, ಸರ್ಕಾರೇತರ ಸಮಾರಂಭಗಳಿಗೆ ಪ್ರಸ್ತುತಇರುವ ಮಾರ್ಜಿನ್‌ಗಿಂತ ಹೆಚ್ಚುವರಿ ಮಾರ್ಜಿನ್ ನೀಡಿ ಮಾರಾಟಕ್ಕೆ ಅನುಕೂಲವಾಗುವಂತೆ ಪ್ರತ್ಯೇಕ 3–4 ನಂದಿನಿ ಐಸ್‌ಕ್ರೀಂ ಸಗಟು ಮಾರಾಟಗಾರರನ್ನು ನೇಮಿಸಿ, ಶೇ.50 ರಿಯಾಯಿತಿ ದರದಲ್ಲಿ ಐಸ್‌ಕ್ರೀಂ ದಾಸ್ತಾನು ಮಾಡಲು ಡೀಪ್–ಫ್ರೀಜರ್ ಅಳವಡಿಸಲು ಕ್ರಮವಿಡುವುದು.

❖ ಬೆಂಗಳೂರು ನಗರ ಸೇರಿದಂತೆ ಕರ್ನಾಟಕ ರಾಜ್ಯಾದ್ಯಂತ ವರ್ಷಪೂರ್ತಿ ನಡೆಯುವ ವಸ್ತು ಪ್ರದರ್ಶನ ಹಾಗೂ ಮೇಳಗಳಲ್ಲಿ ಭಾಗವಹಿಸಿ, ನಂದಿನಿ ಐಸ್‌ಕ್ರೀಂ ಹಾಗೂ ಇತರೇ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟಕ್ಕೆ ಪ್ರತ್ಯೇಕವಾಗಿ ಸಗಟು ಮಾರಾಟಗಾರರನ್ನು ನೇಮಕ ಮಾಡುವುದು ಹಾಗೂ ಅದಕ್ಕೆ ತಗಲುವ ವೆಚ್ಚಗಳನ್ನು ಕಹಾಮದ ವತಿಯಿಂದ ಮರುಪಾವತಿಸುವುದು.

❖ ಖಾಸಗಿ ಬ್ರ್ಯಾಂಡ್ ಸಂಸ್ಥೆಗಳು ಮಾರುಕಟ್ಟೆಯಲ್ಲಿ ವಿಭಿನ್ನ ಮಾದರಿಯಲ್ಲಿ ಮಾರುಕಟ್ಟೆಯನ್ನು ಆವರಿಸಿಕೊಳ್ಳುತ್ತಿದ್ದು, ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿಯು ಕೂಡ ಆರ್ಥಿಕವಾಗಿ ಕೆಳಮಟ್ಟದಲ್ಲಿರುವ ಗ್ರಾಹಕರ ಮಾರುಕಟ್ಟೆಯನ್ನು ಗಮನದಲ್ಲಿರಿಸಿಕೊಂಡು ಕಡಿಮೆ ಬೆಲೆಗೆ ದೊರೆಯುವಂತಹ ಸಣ್ಣ ಪ್ರಮಾಣದ ಮಾದರಿಗಳಾದ ಕಪ್ಸ್, ಕೋನ್, ಕ್ಯಾಂಡಿ, ಸ್ಟಿಕ್ ಐಸ್‌ಕ್ರೀಂ ಉತ್ಪನ್ನಗಳಿಗೆ ಬಹಳ ಬೇಡಿಕೆ ಇರುವುದರಿಂದ ಈ ಮಾದರಿಗಳನ್ನು ಐಸ್‌ಕ್ರೀಂ ಉತ್ಪಾದನಾ ಘಟಕ/ಒಕ್ಕೂಟಗಳು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸಿ, ದಾಸ್ತಾನು ಮಾಡಲು ಕ್ರಮವಿಡುವುದು.

❖ ನಗರ ಪ್ರದೇಶಗಳಲ್ಲಿ ಸೂಪರ್ ಮಾರ್ಕೆಟ್, ಜ್ಯೂಸ್ ಶಾಪ್ ಮತ್ತು ಬೇಕರಿ ಮಾಲೀಕರ ಸಂಘಗಳ ಸಭೆಗಳನ್ನು ಏರ್ಪಡಿಸಿ, ನಂದಿನಿ ಐಸ್‌ಕ್ರೀಂನ ಗುಣಮಟ್ಟ ಹಾಗೂ ದರದ ಬಗ್ಗೆ ಅರಿವು ಮೂಡಿಸುವುದರೊಂದಿಗೆ ಐಸ್‌ಕ್ರೀಂ

ಉತ್ಪನ್ನಗಳ ಮಾರಾಟಕ್ಕೆ ಅವಶ್ಯಕ ಡೀಪ್-ಫ್ರೀಜರುಗಳನ್ನು ಉಚಿತವಾಗಿ ನೀಡಿ, ಸದರಿ ಸ್ಥಳಗಳಲ್ಲಿ ಮಾರಾಟ ಮಾಡುವಂತೆ ಮನವೊಲಿಸುವ ಕಾರ್ಯವನ್ನು ಕೈಗೊಳ್ಳುವುದು.

- ಸಗಟು ಮಾರಾಟಗಾರರಿಗೆ ಮತ್ತು ಚಿಲ್ಲರೇ ಮಾರಾಟಗಾರರಿಗೆ ಮಾರಾಟದ ಗುರಿ ಆಧಾರದ ಮೇಲೆ ಪ್ರೋತ್ಸಾಹಧನವನ್ನು ನೀಡುವುದು. ಸುಗ್ಗಿಕಾಲಕ್ಕೆ (Seasonal) ಮತ್ತು ಸುಗ್ಗಿಕಾಲವಿಲ್ಲದ (Unseasonal) ಕಾಲಕ್ಕೇ ಎಂದು ಎರಡು ಪದ್ಧತಿಯ ಮಾರ್ಜಿನ್‌ಗಳನ್ನು ಐಸ್‌ಕ್ರೀಂ ಸಗಟು ಮಾರಾಗಾರರಿಗೆ ಮತ್ತು ಚಿಲ್ಲರೇ ಮಾರಾಟಗಾರರಿಗೆ ನಿಗದಿಪಡಿಸಿ ಪ್ರೋತ್ಸಾಹಿಸುವ ಉದ್ದೇಶವನ್ನು ಹೊಂದಲಾಗಿದೆ.
- ರಿಯಲ್‌ಟೈಮ್ ಡೇಟಾ ಮತ್ತು ಅನಲಿಟಿಕಲ್ ವರದಿಯನ್ನು ಪಡೆಯಲು ಡಿಜಿಟಲ್ ಮಾರ್ಕೇಟಿಂಗ್ ತಂತ್ರಾಂಶವನ್ನು ಅಳವಡಿಸಲಾಗುವುದು.

- ಸಗಟು ಮಾರಾಟಗಾರರಿಗೆ ನೈಸರ್ಗಿಕ ವಿಪತ್ತು/ ಸಾಂಕ್ರಾಮಿಕ (Natural calamity/ Pandemic) ಗಳಿಂದ ವ್ಯಾಪಾರ ಸ್ಥಗಿತಗೊಂಡಲ್ಲಿ/ನಷ್ಟವಾದಲ್ಲಿಆದ ನಷ್ಟವನ್ನು ಭರಿಸಲು ಆಡಳಿತ್ಮಾತಕ ಅನುಮೋದನೆ ಅವಶ್ಯವಿರುತ್ತದೆ ಹಾಗೂ ಈಗಾಗಲೇ ಕಳೆದ ಸಾಲಿನಿಂದ ಕೋವಿಡ್-19 ರಿಂದಾಗಿರುವ/ಆಗುವ ಪರಿಣಾಮವನ್ನು ಎದುರಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಕರ್ನಾಟಕ ಸಹಕಾರ ಹಾಲು ಮಹಾಮಂಡಳಿಯ ಸಗಟು ಮಾರಾಟಗಾರರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಆದ ನಷ್ಟವನ್ನು ಸಹಾಯಧನ ನೀಡುವ ಮೂಲಕ ಭರಿಸಲು ಅವಕಾಶ ಕಲ್ಪಿಸಿಕೊಳ್ಳುವುದು. ಅದರಂತೆ ಅಗತ್ಯ ಕ್ರಮವಿಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಅಧಿಕಾರ ನೀಡುವುದು.
- ನಂದಿನಿ ಐಸ್‌ಕ್ರೀಂ ಸಗಟು ಮಾರಾಟಗಾರರನ್ನು ಐಸ್‌ಕ್ರೀಂ ಉತ್ಪಾದನೆ ಘಟಕಗಳಿಗೆ ತಂಡಗಳಲ್ಲಿ ಭೇಟಿ ನೀಡಲು ಅವಕಾಶ ಮಾಡಿಕೊಡುವುದು, ಸದರಿಯವರಿಗೆ ನಂದಿನಿ ಐಸ್‌ಕ್ರೀಂ ಬಗ್ಗೆ ಅರಿವು ಮೂಡಿಸುವುದು ಹಾಗು ಮಾರುಕಟ್ಟೆ ಅಭಿವೃದ್ಧಿ ಬಗ್ಗೆ ತರಬೇತಿ ಕಾರ್ಯಕ್ರಮ ಏರ್ಪಡಿಸುವುದು. ನಂದಿನಿ ಐಸ್‌ಕ್ರೀಂ ಬಗ್ಗೆ ಹೆಚ್ಚು ಒಲವು ತೋರಿಸಲು ಪ್ರೋತ್ಸಾಹಿಸಲು ಪ್ರವಾಸ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಮಾರುಕಟ್ಟೆಯಲ್ಲಿ ಬೇಡಿಕೆ ಮತ್ತು ಸರಬರಾಜು ಪರಿಶೀಲಿಸುವುದು, ಸ್ಪರ್ಧಾತ್ಮಕ ಬ್ರ್ಯಾಂಡ್‌ಗಳ ಬಗ್ಗೆ ಮಾಹಿತಿ ಪಡೆಯಲು, ಹೊಸ ಉತ್ಪನ್ನಗಳ ಬಿಡುಗಡೆಗೆ ಹಾಗೂ ಇತರೆ ಮಾರಾಟ ಅಭಿವೃದ್ಧಿಗೆ ಸಂಬಂಧಿಸಿದ ಚಟುವಟಿಕೆ ಮತ್ತು ಸಮೀಕ್ಷೆ ಮಾಡಲು ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದ ಸಂದರ್ಭದಲ್ಲಿ, ಗ್ರಾಹಕರುಗಳಿಂದ ಹೊಸ ಉತ್ಪನ್ನಗಳ ಸ್ವೀಕಾರ ಹಾಗೂ ಪ್ರತಿಕ್ರಿಯೆ ಕುರಿತು ಮಾಹಿತಿಯನ್ನು ಸಂಗ್ರಹಿಸಲು ವೃತ್ತಿಪರ ಏಜೆನ್ಸಿಗಳ ಸೇವೆಯನ್ನು ಪಡೆಯಲಾಗುವುದು.

| | Super Stockists | WSD | 2021-22 | 2022-23 | 2023-24 | 2024-25 | 2025-26 |
|---|---|---|---|---|---|---|---|
| Telangana | 2 | 25 | 2000 | 3500 | 4000 | 4500 | 5000 |
| Andhra Pradesh | 2 | 25 | 2000 | 3500 | 4000 | 4500 | 5000 |
| Goa | 1 | 10 | 2000 | 3500 | 4000 | 4500 | 5000 |
| Tamilnadu | 2 | 15 | 2000 | 3500 | 4000 | 4500 | 5000 |
| Kerala | 1 | 10 | 2000 | 3500 | 4000 | 4500 | 5000 |
| Total | | | 10000 | 17500 | 20000 | 22500 | 25000 |

Average Sales per day in Litres

ಹೊರರಾಜ್ಯದಲ್ಲಿ ಡೀಲರ್ ಗಳ ನೇಮಕ ಮತ್ತು ಐಸ್ ಕ್ರೀಂ ಮಾರಾಟ ವರ್ಷವಾರು ಪ್ರಮಾಣ ದಿನನಿತ್ಯ ಲೀಟರ್‌ಗಳಲ್ಲಿ

**ಜಾಹೀರಾತು ಮತ್ತು ಪ್ರಚಾರ ಚಟುವಟಿಕೆಗಳು :**

ಸಾಮರ್ಥ್ಯವುಳ್ಳ ಪ್ರತಿಷ್ಠಿತ ನುರಿತ ಸಂಸ್ಥೆ/ ಏಜೆನ್ಸಿಯನ್ನು ನೇಮಕ ಮಾಡಿಕೊಂಡು ಟಿವಿ, ರೇಡಿಯೋ, ಪತ್ರಿಕೆ, ಹೊರಾಂಗಣ ಮಾಧ್ಯಮಗಳನ್ನು ಸಮರ್ಪಕವಾಗಿ ಬಳಕೆ ಮಾಡಿಕೊಂಡು ನಂದಿನಿ ಶ್ರೇಣಿಯ ಎಲ್ಲಾ ಉತ್ಪನ್ನಗಳ ಜಾಹೀರಾತು ಮತ್ತು ಪ್ರಚಾರವನ್ನು ಕೈಗೊಳ್ಳುವುದು. ಪ್ರಸಕ್ತ ಮಾರುಕಟ್ಟೆ ಬೆಳವಣಿಗೆಗೆ ಅನುಗುಣವಾಗಿ ಡಿಜಿಟಲ್ ಮಾಧ್ಯಮವನ್ನು ಬಳಕೆ ಮಾಡಿಕೊಂಡು ನಂದಿನಿ ಉತ್ಪನ್ನಗಳ ಪ್ರಚಾರಕ್ಕೆ ಹೆಚ್ಚು ಕ್ರಮವಿಡಲಾಗುವುದು.

ಈ ಕಾರ್ಯಗಳಿಗಾಗಿ ಸಾಮರ್ಥ್ಯವುಳ್ಳ ಪ್ರತಿಷ್ಠಿತ ನುರಿತ ಸಂಸ್ಥೆ/ ಏಜೆನ್ಸಿ ಮೂಲಕ ಆಕರ್ಷಕವಾಗಿ ಟಿವಿ ಕಮರ್ಷಿಯಲ್ಸ್‌ಗಳು ಮತ್ತು ಜಿಂಗಲ್‌ಗಳನ್ನು (TVC and Jingles) ಉತ್ಪನ್ನವಾರು ಅಭಿವೃದ್ಧಿಪಡಿಸಿಕೊಂಡು ವರ್ಷಪೂರ್ತಿ ಎಲ್ಲಾ ಪ್ರಮುಖ ದೃಶ್ಯ ಮಾಧ್ಯಮಗಳಲ್ಲಿ ಜಾಹೀರಾತಿಗೆ ಕ್ರಮವಿಡುವುದು.

ನಂದಿನಿ ದೀರ್ಘಾವಧಿ ಉತ್ಪನ್ನಗಳ ಜೊತೆಗೆ ಪ್ರಸ್ತುತ ನಂದಿನಿ ಚಿಲ್ಲರೆ ಹಾಲು, ಮೊಸರು ಮಾರಾಟವನ್ನು ಹೊರರಾಜ್ಯಗಳ ಮಾರುಕಟ್ಟೆಗಳಲ್ಲಿ ಮಾರಾಟ ಪ್ರಾರಂಭಿಸಲಾಗುತ್ತಿರುವುದರಿಂದ ಈ ಎಲ್ಲಾ ಮಾರುಕಟ್ಟೆಗಳಲ್ಲಿ ಹೆಚ್ಚಿನ ಜಾಹೀರಾತು ಮತ್ತು ಪ್ರಚಾರಕ್ಕೆ ಕ್ರಮವಿಡುವುದು.

ಮಾರಾಟ ಸ್ಥಳಗಳಲ್ಲಿ Visibility ಅನ್ನು ಹೆಚ್ಚಿಸಲು ಎಲ್ಲಾ ಉತ್ಪನ್ನಗಳಿಗೆ POS/POP ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು

ಸಂದರ್ಭಗಳಿಗೆ ಅನುಗುಣವಾಗಿ ಗ್ರಾಹಕರ ಯೋಜನೆಗಳನ್ನು ನೀಡುವುದು. ಗ್ರಾಹಕರಅರಿವು/ಸಾರ್ವಜನಿಕ ಸಂಪರ್ಕಕ್ಕೆ ಅವಶ್ಯ ಚಟುವಟಿಕೆಗಳನ್ನು ರೂಪಿಸುವುದು. ಮಹಾಮಂಡಳದ ಒಟ್ಟು ವಾರ್ಷಿಕ ವಹಿವಾಟಿನಲ್ಲಿ ಶೇ.2 ರಷ್ಟು ಮೊತ್ತವನ್ನು ಜಾಹೀರಾತು ಮತ್ತು ಪ್ರಚಾರ ಚಟುವಟಿಕೆಗಳಿಗೆ ಬಳಸಲು ಯೋಜಿಸಲಾಗುವುದು.

## 2. ಹೊರ ದೇಶಗಳಿಗೆ ನಂದಿನಿ ಉತ್ಪನ್ನಗಳ ರಫ್ತು.

ಪ್ರಸ್ತುತ 60,000 ಲೀಟರು ಯು.ಹೆಚ್.ಟಿ ನಂದಿನಿ ಗುಡ್‌ಲೈಫ್ ಹಾಲು ಸಿಂಗಪೂರ್, ಬೂತಾನ್,ಬ್ರುನಿ ಹಾಗೂ ಕತಾರ್ ದೇಶಗಳಿಗೆ ರಫ್ತಾಗುತ್ತಿದೆ.

ಆದರೆ ಅಮುಲ್ ಬ್ರ್ಯಾಂಡ್‌ನ ಹಾಲು ತಿಂಗಳಲ್ಲಿ 27 ದೇಶಗಳಿಗೆ ಪ್ರಮುಖವಾಗಿ ಸಿಂಗಪೂರ್ ಗೆ 20 ಕಂಟೈನರ್‌ಗಳು, ಗಲ್ಫ್ ರಾಷ್ಟ್ರಗಳಿಗೆ 3 ಕಂಟೈನರ್‌ಗಳು ಹಾಂಕಾಂಗ್‌ಗೆ 10 ಕಂಟೈನರ್ ಹಾಗೂ ಗಲ್ಫ್ ರಾಷ್ಟ್ರಗಳಿಗೆ 3 ಕಂಟೈನರ್ ಮಾರಾಟ ಮಾಡುತ್ತಿದೆ. ಏಷಿಯಾದ ಬೂತಾನ್, ಬಾಂಗ್ಲಾದೇಶ, ನೇಪಾಳಕ್ಕೆ ತಿಂಗಳಿಗೆ 10 ಕಂಟೈನರ್ ನಲ್ಲಿ ಉತ್ಪನ್ನ ಸರಬರಾಜು ಮಾಡುತ್ತಿದೆ. ಅಮುಲ್ ಮಾರಾಟ ಮಾಡುತ್ತಿರುವ ಎಲ್ಲಾ ದೇಶಗಳಲ್ಲಿ ನಂದಿನಿ ಉತ್ಪನ್ನಗಳನ್ನು ಮಾರಾಟ ಮಾಡುವ ಗುರಿ ಹೊಂದಿದ್ದು ಅದಕ್ಕಾಗಿ ಈ ಕೆಳಕಂಡ ಕ್ರಿಯಾ ಯೋಜನೆ ರೂಪಿಸಲಾಗಿದೆ.

ರಫ್ತು ಲೈಸನ್ಸ್ ಗಳನ್ನು ಪಡೆಯಲು ಕೋಲಾರ, ಚಾಮರಾಜನಗರ ಹಾಗೂ ಹಾಸನ ಹಾಲು ಒಕ್ಕೂಟದವರು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದಾರೆ.ಈ ದಿಕ್ಕಿನಲ್ಲಿ ರಫ್ತು ಮಾಡಲು ಅವಶ್ಯವಾದ ಅಫ್ಲಾಟಾಕ್ಸಿನ್ ಅಂಶವಿಲ್ಲದ ಹಾಲು ಹಾಗೂ ಕಡಿಮೆ ಬ್ಯಾಕ್ಟೀರಿಯಾ ಇರುವ ಉತ್ತಮ ಹಾಲನ್ನು ಉತ್ಪಾದಕರು ಉತ್ಪಾದಿಸಲು ಹಾಗೂ ಸಂಸ್ಥೆಗಳು ಶೇಖರಿಸಲು ಪ್ರಯತ್ನಗಳು ನಡೆದಿದ್ದು, ಈ ದಿಶೆಯಲ್ಲಿ ಯಶಸ್ವಿ ಆಗಬೇಕಾಗಿರುತ್ತದೆ.

ಮಾರಾಟ ಮಾಡಲು ಉದ್ದೇಶಿಸಿದ ದೇಶಗಳಲ್ಲಿ ನಮ್ಮ ಉತ್ಪನ್ನಗಳನ್ನು ಅಲ್ಲಿರುವ ಮಾರುಕಟ್ಟೆಯಲ್ಲಿರಿಸಲು ಸೂಕ್ತವಾದ ಏಜೆಂಟ್ ಒಬ್ಬರನ್ನು ನೇಮಿಸಬೇಕು ಇದಕ್ಕೆ ವಿಶೇಷ ಪೂರಕವಾದ ಕ್ರಿಯಾಯೋಜನೆಯನ್ನು ಲಗತ್ತಿಸಲಾಗಿದೆ (ಅನುಭಂದ–)

ಆಯಾ ದೇಶದಲ್ಲಿನ ಗ್ರಾಹಕರನ್ನು ಆಕರ್ಷಿಸಲು ಅವಶ್ಯವಾದ ಜಾಹೀರಾತು ಪ್ರಚಾರ ಹಾಗೂ ಮಾರಾಟ ಯೋಜನೆ ರೂಪಿಸಲು ಅವಶ್ಯವಾದ ಹಣವನ್ನು ನಿಗದಿಪಡಿಸಿ ಮಾರಾಟಕ್ರಿಯೆ ಯಶಸ್ವಿಯಾಗಲು ಶ್ರಮಿಸಬೇಕಾಗಿದೆ ಹಾಗೂ ಇದಕ್ಕಾಗಿ ಮಾರುಕಟ್ಟೆ ವಿಭಾಗದಲ್ಲಿ ಯು.ಹೆಚ್.ಟಿ ಹಾಲನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ರೀಟೇಲ್ ಹಾಗೂ ಬಲ್ಕ್ ಆಗಿ ಮಾರಾಟ ಮಾಡಲು ಉದ್ದೇಶಿಸಿರುವ ಉತ್ಪನ್ನಗಳ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಂಡು ಅವಶ್ಯಕ ಅನುಮತಿ ಪಡೆಯಲು ವಿಶೇಷವಾದ ಸಮಿತಿಯನ್ನು ರಚಿಸಬೇಕಾಗಿದೆ.

3. ರಾಷ್ಟ್ರದಾದ್ಯಂತ ನಂದಿನಿ ಉತ್ಪನ್ನಗಳು ಹಾಗೂ ಬ್ರ್ಯಾಂಡ್ ಅನ್ನು ಪರಿಚಯಿಸಲು ವಿವರವಾದ ಜಾಹೀರಾತು ಪ್ರಚಾರ ಆಂದೋಲನ ರೂಪಿಸಬೇಕಾಗಿದೆ. ಇದರಿಂದಾಗಿ ಮಾರಾಟ ಜಾಲದ ಮೂಲಕ ಭಾರತಾದ್ಯಂತ ನಂದಿನಿಯು ಹೆಸರು ವಾಸಿಯಾಗಲಿದೆ.
   ಪ್ರಸ್ತುತ ಕೆಲವು ಉತ್ಪನ್ನಗಳಿಗಷ್ಟೆ ಕೆಲವು ಮಾರುಕಟ್ಟೆ ಪ್ರದೇಶದಲ್ಲಿ ಜಾಹೀರಾತು ಪ್ರಚಾರ ಮಾಡುತ್ತಿದ್ದು ಪ್ರಚಾರ ವೆಚ್ಚ ಕಡಿಮೆ ಇರುತ್ತದೆ. ಆದ್ದರಿಂದ ವಿಸ್ತೃತ ಜಾಹೀರಾತು ಪ್ರಚಾರ ಆಂದೋಲನವನ್ನು ರೂಪಿಸಿ ಮಾರಾಟ ಪ್ರದೇಶದ ಅಗತ್ಯತೆಗೆ ಅನುಗುಣವಾಗಿ ರಾಜ್ಯಮಟ್ಟ ಹಾಗೂ ಜಿಲ್ಲಾಮಟ್ಟದಲ್ಲಿ ಪ್ರಚಾರ ಆಂದೋಲನವನ್ನು ಯಶಸ್ವಿಯಾಗಿ ನಿರ್ವಹಿಸಲು ಯೋಜನೆ ರೂಪಿಸಬೇಕಾಗಿದೆ. ಲಭ್ಯವಿರುವ ಮಾಹಿತಿಯನ್ವಯ ಅಮುಲ್ ಸಂಸ್ಥೆಯು ತನ್ನ ವಹಿವಾಟಿನ ಶೇ. 1.0 ರಷ್ಟು ಹಣವನ್ನು ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಾರುಕಟ್ಟೆಯ ಮಟ್ಟದಲ್ಲಿ ಅವಶ್ಯಕವಾದ ಪ್ರಚಾರ ಹಾಗೂ ಜಾಹೀರಾತಿಗಾಗಿ ಬಳಸುತ್ತಿದ್ದಾರೆ.

ಅದೇ ರೀತಿ ನಂದಿನಿ ಬ್ರ್ಯಾಂಡ್ ಅನ್ನು ಹೆಚ್ಚು ಪ್ರಚಾರ ಪಡಿಸಲು ಮಾರಾಟವಾಗುವ ಪ್ರತಿ ಲೀಟರ್ ಹಾಲಿಗೆ ರೂ. 0.25 ಒಟ್ಟು ರೂ.7.3 ಕೋಟಿ ಹಣವನ್ನು ಜಾಹೀರಾತು ಪ್ರಚಾರ ಆಂದೋಲನಕ್ಕೆ ಮಿಸಲಿರಿಸಿ, ವೃತ್ತಿಪರರಿಂದ ಸಲಹೆ ಪಡೆದು ಮಾರುಕಟ್ಟೆ ಪ್ರಚಾರ ಆಂದೋಲನ ರೂಪಿಸಲು ಯೋಜಿಸಬೇಕಾಗಿದೆ.

4. ಸ್ಪರ್ಧಾತ್ಮಕ ದರ ನೀಡಿ ರೈಲ್ವೆ ನಿಲ್ದಾಣಗಳು ಹಾಗೂ ರೈಲುಗಳಲ್ಲಿ ಹೆಚ್ಚುವರಿ ಸಂಖ್ಯೆ ಮಾರಾಟ ವಿತರಕರನ್ನು ನಿಯೋಜಿಸುವ ಬಗ್ಗೆ.

ರೈಲ್ವೆ ಇಲಾಖೆಯಲ್ಲಿ ನಂದಿನಿ ಉತ್ಪನ್ನಗಳ ವಿತರಣೆಗೆ IRCTC ನಲ್ಲಿ 5.0 ವಿತರಕರು ಅವಶ್ಯ ಪ್ರಮಾಣದಲ್ಲಿ ವಿತರಿಸುತ್ತಿದ್ದಾರೆ. ಕೋವಿಡ್ ಸಾಂಕ್ರಾಮಿಕದ ಕಾರಣದಿಂದಾಗಿ ರೈಲುಗಳ ಚಾಲನೆ/ಓಡಾಟದಲ್ಲಿ ವ್ಯತ್ಯಯವಾಗಿದ್ದು ರೈಲಿನಲ್ಲಿ ಉಪಹಾರದ ಬಳಕೆಯ ಪ್ರಮಾಣದಲ್ಲಿ ಕುಂಠಿತವಾಗಿದೆ. ಕೋವಿಡ್ ಸೊಂಕು ಕಡಿಮೆಯಾದ ನಂತರ ರೈಲ್ವೆ ನಿಲ್ದಾಣ ಮತ್ತು ರೈಲಿನ ಓಡಾಟ ಸಾಮಾನ್ಯವಾದಾಗ ಯು.ಹೆಚ್.ಟಿ ಹಾಲಿನ ಮಾರಾಟದಲ್ಲಿ ನಿಶ್ಚಿತವಾಗಿ ಏರಿಕೆಯಾಗಲಿದೆ. ಆದ್ದರಿಂದ ರೈಲುಗಳಲ್ಲಿ ಯು.ಹೆಚ್.ಟಿ ಹಾಲಿನ ಮಾರಾಟಕ್ಕೆ ಸ್ಪರ್ದಾತ್ಮಕ ದರ ನಿಗದಿಪಡಿಸಿ, ಹೆಚ್ಚಿನ ಮಾರಾಟಗಾರರನ್ನು ನೇಮಿಸಿ ಯು.ಹೆಚ್.ಟಿ ಹಾಲಿನ ಪ್ರಮಾಣವನ್ನು ಹೆಚ್ಚಿಸಲು ಯೋಜಿಸಿದೆ.

ಗ್ರಾಹಕರ ಸಮಸ್ಯೆಗಳನ್ನು ಪರಿಹರಿಸಲು ಸೂಕ್ತ ವ್ಯವಸ್ಥೆಯಿಲ್ಲದಿರುವುದಕ್ಕೆ ಉತ್ಪಾದನಾ ಘಟಕಗಳು ರಾಜ್ಯದಾದ್ಯಂತ ಹಂಚಿ ಹೋಗಿರುವುದು ಪ್ರಮುಖ ಕಾರಣವಾಗಿದೆ. ಇದಕ್ಕಾಗಿ ಗ್ರಾಹಕರ ಸಮಸ್ಯೆ ಹಾಗೂ ದೂರುಗಳಿಗೆ ಪರಿಹಾರ ಒದಗಿಸಲು ವಿಶೇಷವಾದ ವ್ಯವಸ್ಥೆ ರೂಪಿಸಿ ಪರಿಹಾರ ಒದಗಿಸಲು ವ್ಯವಸ್ಥೆ ಮಾಡಲಾಗುವುದು.

ಮಾನವ ಸಂಪನ್ಮೂಲ

ಪ್ರಸ್ತುತ ಯು.ಹೆಚ್.ಟಿ ಹಾಲಿನ ಮಾರಾಟದ ಬಗ್ಗೆ ಕರ್ನಾಟಕ ಸಹಕಾರ ಹಾಲು ಮಹಾಮಂಡಳದಲ್ಲಿ ಸಣ್ಣ ತಂಡ ಕಾರ್ಯನಿರ್ವಹಿಸುತ್ತಿದೆ. ನಂದಿನಿ ಗುಡ್‌ಲೈಫ್ ಹಾಲಿನ ಮರಾಟ ಕ್ಷೇತ್ರದ ಚಟುವಟಿಕೆಗಳನ್ನು ಟೆಟ್ರಾಪ್ಯಾಕ್ ಮೇಲ್ವಿಚಾರಣೆಯಲ್ಲಿ ನಡೆಸಲಾಗುತ್ತಿದೆ. ಯು.ಹೆಚ್.ಟಿ ಹಾಲಿನ ಮಾರಾಟ ಹಾಗೂ ಪ್ರಚಾರ ಕಾರ್ಯಗಳಿಗೆ ಅವಶ್ಯವಾದ ಮಾನವ ಸಂಪನ್ಮೂಲದ ಅವಶ್ಯಕತೆಯಿದೆ. ಮುಂಬರುವ ದಿನಗಳಲ್ಲಿ ಭಾರತದ ವಿವಿಧ ರಾಜ್ಯಗಳಲ್ಲಿ ಹಾಗೂ ಕೇಂದ್ರಾಡಳಿತ ಪಟ್ಟಣ/ ನಗರ ಹಾಗೂ ಜಿಲ್ಲೆಗಳಲ್ಲಿ ಒಬ್ಬರು ಕಾರ್ಯ ನಿರ್ವಹಿಸಬೇಕಾಗುತ್ತದೆ. ಇವರುಗಳ ಅನುಭವದ ಆಧಾರದ ಮೇಲೆ ಹಾಗೂ ಕಾರ್ಯವೈಖರಿಗೆ ಸಂಬಂಧಿಸಿದಂತೆ ಚರ್ಚಿಸಿ ಅವರಿಗೆ ನೀಡಬಹುದಾದ ಹಣವನ್ನು ನಿರ್ಧರಿಸಬೇಕಾಗುವುದು. ಅಮುಲ್ ಸಂಸ್ಥೆಯ ಮಾದರಿಯಲ್ಲಿ ಮಾರಾಟದ ಗುರಿ/ಸಾಧನೆಯಂತೆ ಮಾರಾಟಗಾರರಿಗೆ ಮತ್ತು ಕ್ಷೇತ್ರ ಸಿಬ್ಬಂದಿ/ಅಧಿಕಾರಿಗಳಿಗೆ ಪ್ರೋತ್ಸಾಹದನ ನಿಗದಿಪಡಿಸಲಾಗುವುದು.

**ಸಮಗ್ರ ನಿರ್ವಹಣೆ ಮಾಹಿತಿ ವ್ಯವಸ್ಥೆ.**

ದೂರಗಾಮಿ ಯೋಜನೆಯ ಪ್ರಕಾರ ಸಮಗ್ರ ಮಾಹಿತಿ ವ್ಯವಸ್ಥೆಯನ್ನು ರೂಪಿಸಿದಾಗ ಸಕಾಲದಲ್ಲಿ ತೆಗೆದುಕೊಳ್ಳಬಹುದಾಗ ನಿರ್ಣಯಗಳಿಂದಾಗಿ ವ್ಯವಸ್ಥೆಯ ಬಗ್ಗೆ ನಂಬಿಕೆ ಹುಟ್ಟುತ್ತದೆ. ಇದಕ್ಕಾಗಿ ವಿಶೇಷವಾದ ಮಾಹಿತಿ ನಿರ್ವಹಣೆ ವ್ಯವಸ್ಥೆಯನ್ನು ರೂಪಿಸಿ ವೃತ್ತಿಪರ ಸಂಸ್ಥೆಯ ಸಲಹೆ ಹಾಗೂ ಸಹಕಾರದಿಂದ ನೂತನ ವ್ಯವಸ್ಥೆಯನ್ನು ರೂಪಿಸಿ ತನ್ಮೂಲಕ ಆಡಳಿತ ನಡೆಸುವವರಿಗೆ ಕಾಲದಿಂದ ಕಾಲಕ್ಕೆ ಅಗತ್ಯ ಮಾಹಿತಿ ದೊರಕಿ ಆಧೀನ/ಅಧಿಕಾರಿ/ಸಿಬ್ಬಂದಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಲು ಅನುಕೂಲವಾಗುತ್ತದೆ.

**ಬ್ರೆಡ್ ಮತ್ತು ಬೇಕರಿ ಉತ್ಪನ್ನಗಳು**

ನಂದಿನಿ ಗುಡ್ ಲೈಫ್ ಬ್ರೆಡ್ ಮಾರಾಟವನ್ನು 2021 ರ ಜನವರಿಯಲ್ಲಿ ಮಾರಾಟಕ್ಕೆ ಬಿಡುಗಡೆಗೊಳಿಸಲಾಯಿತು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಮತ್ತು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳ ಮಾರಾಟ ಜಾಲದ ಮೂಲಕ ಬೆಂಗಳೂರಿನ 1000 ಮಳಿಗೆ/ ಕಿಯೋಸ್ಕ್/ ಪಾರ್ಲರ್ ಗಳಲ್ಲಿ ಬ್ರೆಡ್‌ಅನ್ನು ನೇರವಾಗಿ ಮಾರಾಟಕ್ಕೆ ವಿತರಿಸಲಾಗುತ್ತದೆ.

ಪ್ರತಿದಿನ 7000 ಲೋವ್ಸ್ ಬ್ರೆಡ್‌ನ್ನು ಉತ್ಪಾದಿಸಿ ಸರಬರಾಜು ಮಾಡಲಾಗುತ್ತಿದೆ. 2021 ರ ಜುಲೈ ವೇಳೆಗೆ 10,000 ಪೌಂಡ್ ನಂದಿನಿ ಗುಡ್‌ಲೈಫ್ ಬ್ರೆಡ್ ಉತ್ಪಾದಿಸಿ ಮಾರಾಟ ಮಾಡಲು ಹಾಗೂ ಮಾರ್ಚ್ 2022 ರ ವೇಳೆಗೆ 20,000 ಪೌಂಡ್‌ಗಳಿಗೆ ಹೆಚ್ಚಿಸಲು ಗುರಿ ಹೊಂದಲಾಗಿದೆ.
ಬ್ರೆಡ್ ಗುಣಮಟ್ಟದ ಬಗ್ಗೆ ಗ್ರಾಹಕರಿಂದ ಒಳ್ಳೆಯ ಅಭಿಪ್ರಾಯ ದೊರಕುತ್ತಿದ್ದು ಬ್ರೆಡ್ ಉತ್ಪನ್ನಕ್ಕೆ ಬೇಡಿಕೆ ಹೆಚ್ಚಾಗುತ್ತಿದೆ. 2021 ರ ಏಪ್ರಿಲ್ ನಿಂದ ಸ್ವೀಟ್ ಮತ್ತು ಫ್ರೂಟ್ ಬನ್ ಉತ್ಪನ್ನವನ್ನು ಬಿಡುಗಡೆ ಮಾಡಿದ್ದು ಪ್ರತಿದಿನ 5 ಸಾವಿರ ಬನ್ ಮಾರಾಟವಾಗುತ್ತಿದೆ.

ಗ್ರಾಹಕರ ಬೇಡಿಕೆ ಪೂರೈಸಲು ಹೊಸ ಬ್ರೆಡ್ ಉತ್ಪನ್ನ ಘಟಕ ಸ್ಥಾಪಿಸಲು ಸೂಕ್ತವಾದ ಪೂರ್ವಭಾವಿ ಕಾರ್ಯ ಆರಂಭಿಸಲಾಗಿದೆ.
ಸಧ್ಯದಲ್ಲೆ ಇತರೇ ಬೇಕರಿ ಉತ್ಪನ್ನಗಳಾದ ಕ್ರೀಮ್ ಬನ್ ವಿಶೇಷವಾದ ರಸ್ಕ್, ಕೇಕ್ ಮುಂತಾದವುಗಳನ್ನು ಬಿಡುಗಡೆ ಮಾಡಲಾಗುವುದು ಹಾಗೂ ಬ್ರೆಡ್ ಉತ್ಪನ್ನಗಳನ್ನು ಬೆಂಗಳೂರು ನಗರದಿಂದಾಚೆ ಹಾಗೂ ಇತರ ಜಿಲ್ಲೆಗಳ ಕೇಂದ್ರಗಳಲ್ಲಿ ಮಾರಾಟ ಮಾಡುವ ಯೋಜನೆ ಆರಂಭಿಸಲಾಗುವುದು.

ದೊಡ್ಡ ಅಂಗಡಿಗಳಾದ ಮಾಲ್, ಸೂಪರ್ ಮಾರ್ಕೆಟ್,ಹೈಪರ್ ಮಾರ್ಕೆಟ್, ಸ್ಟಾರ್ ಹೋಟೆಲ್ ಗಳಿಗೆ ಬ್ರೆಡ್ ಉತ್ಪನ್ನಗಳನ್ನು ಸರಬರಾಜು ಮಾಡುವ ಹಾಗೂ ಇವರುಗಳಿಗೆ ವಿಶೇಷವಾದ ಯೋಜನೆ ರೂಪಿಸಲು ಚಿಂತನೆ ನಡೆಸಿದು, ನಂದಿನಿ ಬೆಣ್ಣೆ, ಚೀಸ್ ಉತ್ಪನ್ನಗಳ ಜೊತೆಗೆ ಬ್ರೆಡ್/ಬನ್ ಹಾಗೂ ಇತರೇ ಬೇಕರಿ ಉತ್ಪನ್ನಗಳನ್ನು ಮಾರಾಟ ಮಾಡುವುದರಿಂದ ಗ್ರಾಹಕರ ಅವಶ್ಯಕತೆ ಪೂರೈಸಿದಂತಾಗುತ್ತದೆ. ಈ ಉತ್ಪನ್ನಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಗ್ರಾಹಕರ ಬಳಕೆಗೆ ಅನುಕೂಲವಾಗಲಿದೆ. ಮಾರುಕಟ್ಟೆಯಲ್ಲಿರುವ ಇತರೇ ಪ್ರಖ್ಯಾತ ಉತ್ಪನ್ನಗಳ ಜೊತೆಗೆ ಹೊಂದುವಂತಹ ತಿಂಡಿ ಹಾಗೂ ಪಾನೀಯಗಳ ಜೊತೆಗೆ ನಂದಿನಿ ಬೇಕರಿ ಹಾಗೂ ಬ್ರೆಡ್ ಉತ್ಪನ್ನಗಳನ್ನು ಸೇರಿಸುವುದರಿಂದ ದೊಡ್ಡ ಪ್ರಮಾಣಗಳಲ್ಲಿ ಮಾರಾಟವಾಗುವ ಆಹಾರ ಮಾರಾಟ ಕೇಂದ್ರಗಳನ್ನು ತಲುಪಬಹುದಾಗಿದೆ.

ಬ್ರೆಡ್ ಮತ್ತು ಬೇಕರಿ ಉತ್ಪನ್ನಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ವಿಶೇಷವಾದ ಮಾರಾಟ ಪ್ರದರ್ಶನವನ್ನು ಆಯಾ ಅಪಾರ್ಟ್‌ಮೆಂಟ್, ಕಾಂಪ್ಲೆಕ್ಸ್, ಕಾರ್ಖಾನೆಗಳಿರುವ ಪ್ರದೇಶಗಳಲ್ಲಿ ರೂಪಿಸಬೇಕಾಗಿದೆ.

## ಮಾರಾಟ ಹೆಚ್ಚಿಸಲು ಉದ್ದೇಶಿಸಿರುವ ಯೋಜನೆ/ ಕ್ರಮಗಳು

- ಜಿಲ್ಲಾ ಹಾಲು ಒಕ್ಕೂಟಗಳ ವ್ಯಾಪ್ತಿಯಲ್ಲಿರುವ ನಂದಿನಿ ಪಾರ್ಲರ್ ಹಾಗೂ ಮಳಿಗೆಗಳಲ್ಲಿ ನಂದಿನಿ ಗುಡ್‌ಲೈಫ್ ಬ್ರೆಡ್ ಮಾರಾಟ ಮಾಡುವುದು ಅವಶ್ಯಕವಾಗಿದೆ.
- ಬ್ರೆಡ್ ಉತ್ಪನ್ನ ಪ್ರದರ್ಶಿಸಲು ಕರ್ನಾಟಕ ಸಹಕಾರ ಹಾಲು ಮಹಾಮಂಡಳವು ಒದಗಿಸುವ ಬ್ರೆಡ್ ಸ್ಟ್ಯಾಂಡ್ ಅನ್ನು ನಂದಿನಿ ಮಳಿಗೆಗಳಲ್ಲಿ ಪ್ರಮುಖವಾದ ಸ್ಥಳದಲ್ಲಿರಿಸಬೇಕಾಗಿದೆ. ಮತ್ತುಷ್ಟು ಸ್ಟ್ಯಾಂಡ್ ಗಳನ್ನು ಶೀಘ್ರವಾಗಿ ಪೂರೈಸಬೇಕಾಗಿದೆ.
- ವೃತ್ತ ಪತ್ರಿಕೆ ಮತ್ತು ಇತರೆ ಮಾಧ್ಯಮದಲ್ಲಿ ಜಾಹೀರಾತು ನೀಡುವುದು.
- ರೀಟೇಲ್ ಮಾರಾಟಗಾರರಿಗೆ ಹೆಚ್ಚುವರಿ ಮಾರ್ಜಿನ್ ನೀಡುವುದು.
- ಕ್ಷೀರಭಾಗ್ಯ ಯೋಜನೆ ಅಡಿಯಲ್ಲಿ ಹಾಲಿನ ಜೊತೆಗೆ ಹೋಲ್‌ವೀಟ್ ಬ್ರೆಡ್ ಉತ್ಪನ್ನವನ್ನು ಶಾಲೆ ಹಾಗೂ ಅಂಗನವಾಡಿಗಳಿಗೆ ಸರಬರಾಜು ಮಾಡಲು ಪೈಲೆಟ್ ಯೋಜನೆಯಾಗಿ ಮಾಡಬಹುದು.
- ಗುಡ್‌ಲೈಫ್ ಬ್ರೆಡ್ ಉತ್ಪನ್ನದ ಬಗ್ಗೆ ಬೆಂಗಳೂರು ನಗರದ ಜನನಿಬಿಡ ಪ್ರದೇಶದಲ್ಲಿ ಹೋರ್ಡಿಂಗ್ ಮೂಲಕ ಪ್ರಚಾರ ಮಾಡುವುದು.

## ನಂದಿನಿ ಉತ್ಪನ್ನಗಳ ರಫ್ತು

**ಪ್ರಸ್ತುತ ಕರ್ನಾಟಕ ಸಹಕಾರ ಹಾಲು ಮಹಾಮಂಡಳದ ಮಾಡುತ್ತಿರುವ ರಫ್ತು ವ್ಯವಹಾರ.**

ಕರ್ನಾಟಕ ಸಹಕಾರ ಹಾಲು ಮಹಾಮಂಡಳದಿಂದ ಪ್ರಸ್ತುತ 25 ದೇಶಗಳಿಗೆ ನಂದಿನಿ ಉತ್ಪನ್ನಗಳನ್ನು ರಫ್ತು ಮಾಡುತ್ತಿದೆ. ಅದರಲ್ಲಿ ಜಪಾನ್, ಯುಎಇ, ಇಸ್ರೇಲ್, ಸೌದಿಅರೇಬಿಯಾ, ಲೆಬೆನಾನ್. ಎಮೆನ್, ನೇಪಾಳ, ಸಿಂಗಪೂರ್, ರಷ್ಯಾ ಇರಾನ್, ಅಲ್ಜೇರಿಯಾ, ಬಾಂಗ್ಲಾದೇಶ, ಜೊರ್ಡಾನ್, ಸಿರಿಯಾ, ಪಾಕಿಸ್ತಾನ, ಮಾರಿಷಸ್, ಅಫ್ಘಾನಿಸ್ಥಾನ್, ಟರ್ಕಿ, ಸೆನೆಗಲ್, ಲಿಬಿಯಾ ಮುಂತಾದ ದೇಶಗಳಿಗೆ ನೇರವಾಗಿ ಹಾಗೂ ಮರ್ಚೆಂಟ್ ರಫ್ತುದಾರರ ಮೂಲಕ ರವಾನಿಸಲಾಗುತ್ತಿದೆ.

ಕಳೆದ 15 ತಿಂಗಳುಗಳಲ್ಲಿ ಸುಮಾರು ರೂ.5.0 ಕೋಟಿ ಮೌಲ್ಯದ ಉತ್ಪನ್ನಗಳನ್ನು ಸಿಂಗಪೂರ್, ಭೂತಾನ್, ಬ್ರುನೀಯ, ಯುಎಇ, ಆಸ್ಟ್ರೇಲಿಯಾ ಹಾಗೂ ಅಮೇರಿಕಾ ತಲಪಿದೆ. ಸುಮಾರು ರೂ.25.0 ಕೋಟಿ ಮೌಲ್ಯದ (1300 ಟನ್) ಬಲ್ಕ್ ಕೆನೆರಹಿತ ಹಾಲಿನ ಪುಡಿ, ಬೆಣ್ಣೆ ಉತ್ಪನ್ನವನ್ನು ಬಾಂಗ್ಲಾದೇಶ, ಆಫ್ಘಾನಿಸ್ಥಾನ ಮತ್ತು ಜಾರ್ಜಿಯಾ ದೇಶಗಳಿಗೆ ನೇರವಾಗಿ ರಫ್ತು ಮಾಡಲಾಗಿದೆ.

**ಡೇರಿ ಉತ್ಪನ್ನಗಳ ರಪ್ತು ಮಾರುಕಟ್ಟೆ ಗಾತ್ರ ಮತ್ತು ಕರ್ನಾಟಕ ಸಹಕಾರ ಹಾಲು ಮಹಾಮಂಡಳ ರಫ್ತಿನ ಗುರಿ**

- ಗಲ್ಫ್ ಮತ್ತು ಇತರೆ ಏಷಿಯಾ ದೇಶಗಳಲ್ಲಿರುವ ಭಾರತೀಯರ ಜನಸಂಖ್ಯೆಗೆ ಅನುಗುಣವಾಗಿ ಭಾರತದ ಡೇರಿ ಉತ್ಪನ್ನಗಳಿಗೆ ಬೇಡಿಕೆಯಿದ್ದು ರಫ್ತು ಮಾಡಲು ಸುವರ್ಣಾಕಾಶ ಇರುತ್ತದೆ.
- ಗಲ್ಫ್ ದೇಶಗಳಲ್ಲಿ ಹಾಗೂ ಸಿಂಗಪೂರ್, ಬೂತಾನ್ ಹಾಗೂ ಅಮೇರಿಕಾ ದೇಶದಲ್ಲಿ ಭಾರತದ ಡೇರಿ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆಯಿದೆಯೆಂದು ಅರಿಯಾಲಾಗಿದೆ.
- ಕರ್ನಾಟಕ ಸಹಕಾರ ಹಾಲು ಮಹಾಮಂಡಳದಿಂದ ವಾರ್ಷಿಕ ರೂ.50 ಕೋಟಿ ಮೌಲ್ಯದ ಯು.ಹೆಚ್.ಟಿ ಹಾಲು, ಬೆಣ್ಣೆ, ಚೀಸ್, ತುಪ್ಪ, ಪನ್ನೀರ್, ಕೆನೆರಹಿತ ಹಾಲಿನಪುಡಿ, ಸಿಹಿ ಉತ್ಪನ್ನಗಳನ್ನು ನೇರವಾಗಿ ರಫ್ತು ಮಾಡಲು ಅವಕಾಶವಿದ್ದು, ಉತ್ಪನ್ನದ ಗುಣಮಟ್ಟ ಜೊತೆಗೆ ಬೆಲೆಯನ್ನು ಪರಿಗಣಿಸಿದರೆ ವಾರ್ಷಿಕವಾಗಿ ರೂ.100 ಕೋಟಿ ವಹಿವಾಟು ನಡೆಸಬಹುದಾಗಿದೆ.

## ಕರ್ನಾಟಕ ಸಹಕಾರ ಹಾಲು ಮಹಾಮಂಡಳದ ಉತ್ಪನ್ನಗಳ ರಫ್ತು ಯೋಜನೆ

- ರಫ್ತು ಮಾಡಲು ಅವಶ್ಯವಾದ ಲೈಸನ್ಸ್ ಗಳನ್ನು ಉತ್ಪನ್ನ ಘಟಕಗಳು ಅವಶ್ಯವಾಗಿ ಪಡೆಯುವುದು.
- ಪ್ರತಿ ದೇಶಕ್ಕೆ ಅವಶ್ಯವಾದ ಗುಣಮಟ್ಟದ ಅಂಕಿ ಅಂಶಗಳು ಕೆಎಂಎಫ್ ಬಳಿ ಸಿದ್ಧವಾಗಿರಬೇಕು.
- ಬೇರೆ ದೇಶಗಳಿಗೆ ಅವಶ್ಯವಾದ ಉತ್ಪನ್ನಗಳ ಬೇಡಿಕೆಯನ್ನು ಅಭ್ಯಸಿಸಲು ರಫ್ತು ತಂಡ ರಚಿಸಿ ಇದಕ್ಕೆ ಅವಶ್ಯವಾದ ಮಾಹಿತಿ ಪಡೆಯಲು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಆಯೋಜಿಸಲಾಗುವ ಪ್ರದರ್ಶನದಲ್ಲಿ ಭಾಗವಹಿಸುವುದು.
- ಆಯಾ ದೇಶಕ್ಕೆ ತಕ್ಕಂತೆ ಗುಣಮಟ್ಟ, ಬೆಲೆ ಹಾಗೂ ಮಾರಾಟದ ಮಾರ್ಜಿನ್ ನಿರ್ಧರಿಸುವುದು.
- ಆಯಾ ದೇಶಗಳಿಗೆ ಅನ್ವಯವಾಗುವಂತೆ ಜಾಹೀರಾತು/ಪ್ರಚಾರ ಕಾರ್ಯಕ್ರಮಗಳನ್ನು ರೂಪಿಸುವುದು.
- ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳು ಅಂತರ್‌ರಾಷ್ಟ್ರೀಯ ಗುಣಮಟ್ಟದ ಉತ್ಪನ್ನಗಳನ್ನು ತಯಾರಿಸಲು ಅವಶ್ಯವಾದ ಮುಂಜಾಗ್ರತಾ ಕ್ರಮಗಳನ್ನು ಚಾಚೂತಪ್ಪದೇ ಅನುಸರಿಸಬೇಕು. ಹಾಗೂ ರಫ್ತಾಗುವ ದೇಶದ ಉತ್ಪನ್ನದ ಗುಣಮಟ್ಟದ ಮಾನದಂಡಗಳ (ಸ್ಟ್ಯಾಂಡರ್ಡ್ಸ್)ಅನುಗುಣವಾಗಿ ಸೂಕ್ತವಾದ ಪ್ಯಾಕೇಜಿಂಗ್ ವಸ್ತು ಬಳಸಿ ಉತ್ಪನ್ನಗಳನ್ನು ಪ್ಯಾಕ್ ಮಾಡಬೇಕು.

## ಅನುಬಂಧ-2

| ಕ್ರ ಸಂ | ಉತ್ಪನ್ನಗಳು | ವರ್ಷ (ದಿನವಹಿ ಲೀಟರ್/ಕೆಜಿಗಳಲ್ಲಿ ಮಾರಾಟ) | | | | |
|---|---|---|---|---|---|---|
| | | 2018-19 | 2019-20 | 2020-21 | 2021-22 | 2022-23 |
| 1 | ಸ್ಯಾಚೆ ಹಾಲು | 3487259 | 3733929 | 3510823 | 3716848 | 4296561 |
| 2 | ಮೊಸರು | 466361 | 549450 | 514295 | 590562 | 777608 |
| 3 | ಗುಡ್ ಲೈಫ್ | 548387 | 573413 | 680196 | 662274 | 668670 |
| 4 | ಸುವಾಸಿತ ಹಾಲು ಮತ್ತು ಲಸ್ಸಿ | 28284 | 11747 | 14134 | 15560 | 18450 |
| 5 | ಫ್ಲೆಕ್ಸಿ ಪ್ಯಾಕ್ | 63568 | 69790 | 105028 | 123210 | 127691 |
| | ಕಹಾಮ ಡಿಪೋಗಳಿಂದ ಮಾಹೆಯಾನ ಮಾರಾಟದ ವಿವರಗಳು (ಮೆಟ್ರಿಕ್ ಟನ್‌ನಲ್ಲಿ) | | | | | |
| 6 | ತುಪ್ಪ | 1233 | 1311 | 1239 | 1406 | 1415 |
| 7 | ಎಸ್.ಎಂ.ಪಿ | 290 | 338 | 164 | 80 | 52 |
| 8 | ಡೈರಿ ವೈಟನರ್ | 72 | 95 | 99 | 169 | 74 |
| 9 | ಬೆಣ್ಣೆ | 184 | 228 | 175 | 205 | 254 |
| 10 | ಪನ್ನೀರು | 83 | 86 | 87 | 104 | 121 |
| 11 | ಚೀಸ್ | 3 | 28 | 28 | 74 | 150 |
| 12 | ಇತರೆ ಕೋಲ್ಡ್ ಚೈನ್ | 16 | 10 | 18 | 12 | 23 |
| 13 | ತ್ವರಿತ ಮಿಶ್ರಣಗಳು | 20 | 13 | 22 | 25 | 19 |
| 14 | ಸಿಹಿ ಉತ್ಪನ್ನಗಳು | 121 | 124 | 154 | 194 | 174 |
| 15 | ಖಾರ ಉತ್ಪನ್ನಗಳು | 0 | 9 | 19 | 27 | 20 |
| 16 | ಚಾಕೋಲೇಟ್ | 6 | 6 | 8 | 9 | 11 |
| 17 | ಸುವಾಸಿತ ಹಾಲು ಮತ್ತು ಲಸ್ಸಿ | 3 | 4 | 3 | 4 | 3 |
| 18 | ಗುಡ್ ಲೈಫ್ ಬಾಟಲ್ | 0 | 0 | 0 | 0 | 4 |

| ನಂದಿನಿ ಎಲ್ಲಾ ಶ್ರೇಣಿಯ ಉತ್ಪನ್ನಗಳು | | |
|---|---|---|
| ಕ್ರಮ | ಉತ್ಪನ್ನಗಳು | ಮಾದರಿ |
| 1 | ಹಾಲು | ಟೋನ್ಡ್ ಹಾಲು |
| 2 | | ಡಬಲ್ ಟೋನ್ಡ್ ಹಾಲು |
| 3 | | ಶುಭಂ |
| 4 | | ಶುಭಂ ಗೋಲ್ಡ್ |
| 5 | | ಸಮೃದ್ಧಿ |
| 6 | | ಸ್ಪೆಷಲ್ ಹಾಲು |
| 7 | | ಹೊಮೊಜಿನೈಸಡ್ ಟೋನ್ಡ್ ಹಾಲು |
| 8 | | ಹೊಮೊಜಿನೈಸಡ್ ಹಸುವಿನ ಹಾಲು |
| 9 | | ಹೊಮೊಜಿನೈಸಡ್ ಸ್ಟಾಡಡೈಸ್ಡ್ ಹಾಲು |
| 10 | | ದೇಸಿ ಹಾಲು |
| 11 | | ಸಂತೃಪ್ತಿ ಹಾಲು |
| 12 | | ಎಮ್ಮೆ ಹಾಲು |
| 13 | ಮೊಸರು | ಮೊಸರು |
| 14 | | ನೈಜ ಮೊಸರು |
| 15 | ಯುಹೆಚ್‌ಟಿ | ಗುಡ್‌ಲೈಫ್ |
| 16 | | ಸ್ಮಾರ್ಟ್ |
| 17 | | ಸ್ಲಿಮ್ |
| 18 | | ಗೋಲ್ಡ್ |
| 19 | ಯುಹೆಚ್‌ಟಿ ಫ್ಲೆಕ್ಸಿ ಪ್ಯಾಕ್ | ತೃಪ್ತಿ |
| 20 | | ಹೆಲ್ತಿ ಲೈಫ್ |
| 21 | | ಎಮ್ಮೆ ಹಾಲು |
| 22 | ಕ್ರೀಂ | |
| 23 | ಲಸ್ಸಿ | ಲಸ್ಸಿ |
| 24 | | ಮ್ಯಾಂಗೊ ಲಸ್ಸಿ |
| 25 | ತುಪ್ಪ | |
| 26 | ಬೆಣ್ಣೆ | ಉಪ್ಪು ಸಹಿತ |
| 27 | | ಉಪ್ಪು ರಹಿತ |
| 28 | | ಚಿಪ್ಲೇಟ್ |
| 29 | ಕೆನೆರಹಿತ ಹಾಲಿನ ಪುಡಿ | |
| 30 | ಡೈರಿ ವೈಟನರ್ | |
| 31 | ಕೆನೆಭರಿತ ಹಾಲಿನ ಪುಡಿ | |

| | | |
|---|---|---|
| 32 | ಸುವಾಸಿತ ಹಾಲು (ಟೆಟ್ರಾ) | ಪಿಸ್ತಾ |
| 33 | | ಸ್ಟ್ರಾಬೆರಿ |
| 34 | | ಚಾಕೋಲೇಟ್ |
| 35 | | ಬಾದಾಮ್ |
| 36 | ಸುವಾಸಿತ ಹಾಲು (ಬಾಟಲ್) | ರೋಸ್ |
| 37 | | ಪಿಸ್ತಾ |
| 38 | | ಚಾಕೊಲೆಟ್ |
| 39 | | ಗುಲಾಬಿ |
| 40 | | ಸ್ಟ್ರಾಬೆರಿ |
| 41 | | ಮ್ಯಾಂಗೊ |
| 42 | | ಬಾಳೆಹಣ್ಣು |
| 43 | ಸುವಾಸಿತ ಹಾಲು (ಪೆಟ್ ಬಾಟಲ್) | ಪಿಸ್ತಾ |
| 44 | | ಚಾಕೊಲೆಟ್ |
| 45 | | ಬಾದಾಮ್ |
| 46 | | ಕಷಾಯ |
| 47 | | ಮಾವಿನ ಹಣ್ಣು |
| 48 | | ಜೀರಾ ಮಜ್ಜಿಗೆ |
| 49 | | ಸದಾ ಮಜ್ಜಿಗೆ |
| 50 | | ಕೋಲ್ಡ್ ಕಾಫಿ |
| 51 | ಮಿಲ್ಕ್ ಶೇಕ್‌ಗಳು (ಟೆಟ್ರಾ) | ಚಾಕೋಲೇಟ್ |
| 52 | | ಬಟರ್ ಸ್ಕಾಚ್ |
| 53 | ಪನ್ನೀರ್ | ಕ್ಯೂಬ್ , ಬ್ಲಾಕ್ |
| 54 | ಚೀಸ್ | ಚೆಡ್ಡಾರ್ ಚೀಸ್ |
| 55 | | ಪ್ರೋಸೆಸ್ಡ್ ಚೀಸ್ |
| 56 | | ಮೊಜೆರಲ್ಲಾ ಚೀಸ್ |
| 57 | | ಚೀಸ್ ಸ್ಲೈಸ್ |
| 58 | ಜಾಮೂನ್ ಮಿಕ್ಸ್ | |
| 59 | ಪಾಯಸ ಮಿಕ್ಸ್ | |
| 60 | ಬಾದಾಮ್ ಪೌಡರ್ | |
| 61 | ಪೇಡಾ | |
| 62 | ಧಾರವಾಡ ಪೇಡಾ | |
| 63 | ಕೇಸರ್ ಪೇಡಾ | |
| 64 | ಏಲಕ್ಕಿ ಪೇಡಾ | |
| 65 | ಮೈಸೂರ್ ಪಾಕ್ | |

| | | |
|---|---|---|
| 66 | ಪ್ರೀಮಿಯಂ ಬಾದಾಮ್ ಬರ್ಫಿ | |
| 67 | ಚಾಕೊಲೆಟ್ ಬರ್ಫಿ | |
| 68 | ಕಾಜು ಬರ್ಫಿ | |
| 69 | ಚಾಕೊಲೆಟ್ ಬರ್ಫಿ | |
| 70 | ಕೊಕೊನಟ್ ಬರ್ಫಿ | |
| 71 | ಖೋವಾ | |
| 72 | ನಂದಿನಿ ಬೈಟ್ | |
| 73 | RTE ಜಾಮೂನ್ | |
| 74 | RTE ರಸಗುಲ್ಲಾ | |
| 75 | ಬೆಳಗಾಂ ಕುಂದಾ | |
| 76 | ಮಾವಿನ ಯೋಗರ್ಟ್ | |
| 77 | ಸ್ಟ್ರಾಬೆರಿ ಯೋಗರ್ಟ್ | |
| 78 | ಮಿಶ್ರ ಸಿಹಿ ತಿನಿಸು | |
| 79 | | ಎಕ್ಲೈರ್ಸ್ |
| 80 | | ಕ್ರೀಮಿ ಬೈಟ್ |
| 81 | | ಗುಡ್ ಲೈಫ್ |
| 82 | ಚಾಕೊಲೇಟ್ | ಚಿಟ್ ಚಾಟ್ |
| 83 | | ಟ್ರೀಟೊ |
| 84 | | ಚಾಕೊಲೇಷಿಯಸ್ |
| 85 | | ಚಾಕೊಕ್ರಿಸ್ಪಿ |
| 86 | | ಕ್ಯಾರಮೆಲ್ ಬೈಟ್ |
| 87 | ತುಪ್ಪದ ಲಾಡು | |
| 88 | ಸ್ಪೆಷಲ್ ಲಾಡು | |
| 89 | | ಕೊಕೊನಟ್ |
| 90 | ನಂದಿನಿ ಕುಕ್ಕೀಸ್ | ಸಿಹಿ ಹಾಗೂ ಉಪ್ಪು |
| 91 | | ಕಾಳುಮೆಣಸು & ಜೀರಿಗೆ |
| 92 | | ಕೆಂಪು ಮೆಣಸು |
| 93 | | ಏಲಕ್ಕಿ |
| 94 | | ಮಾವಿನ ಹಣ್ಣು |
| 95 | | ಸ್ಟ್ರಾಬೆರಿ |
| 96 | ಶ್ರೀಖಂಡ್ | ಸೀಬೆಹಣ್ಣು |
| 97 | | ಅನಾನಸ್ |
| 98 | | ಗ್ರೀನ್ ಅಪಲ್ |
| 99 | | ಬಟರ್ ಸ್ಕಾಚ್ |

| | | |
|---|---|---|
| 100 | | ಕಿವಿ ಹಣ್ಣು |
| 101 | ಬೇಸನ್ ಲಾಡು | |
| 102 | ಮಿಲ್ಕ್ ಶೇಕ್ | ವೆನಿಲಾ |
| 103 | | ಬಟರ್ ಸ್ಕಾಚ್ |
| 104 | | ಮ್ಯಾಂಗೊ |
| 105 | | ಚಾಕೊಲೇಟ್ |
| 106 | ಮಿಲ್ಲೆಟ್ ಮಿಕ್ಸ್ | |
| 107 | ಮಿಲ್ಲೆಟ್ ಲಾಡು | |
| 108 | ನಂದಿನಿ ಖಾರ ತಿನಿಸುಗಳು | ಖಾರಾ ಬೂಂದಿ |
| 109 | | ಬೆಣ್ಣೆ ಮುರುಕು |
| 110 | | ಬಾಂಬೆ ಮಿಕ್ಸರ್ |
| 111 | | ಕೋಡುಬಳೆ |
| 112 | ಮಿಲ್ಕ್ ರಸ್ಕ್ | |
| 113 | ಗೋಧಿ ಲಾಡು | |
| 114 | ಸಿರಿಧಾನ್ಯ ಖಾರಾ ಪೊಂಗಲ್ | |
| 115 | ಸಿರಿಧಾನ್ಯ ಸಿಹಿ ಪೊಂಗಲ್ | |
| 116 | ಸಿರಿಧಾನ್ಯ RTE ಪಾಯಸ | |
| 117 | ಬ್ಲೂಬೆರಿ ಗ್ರೀಕ್ ಯೋಗರ್ಟ್ | |
| 118 | ಜೇನು ಬಾಳೆಹಣ್ಣು ಗ್ರೀಕ್ ಯೋಗರ್ಟ್ | |
| 119 | ಮ್ಯಾಂಗೊ ಗ್ರೀಕ್ ಯೋಗರ್ಟ್ | |
| 120 | ಗ್ರೀಕ್ ಯೋಗರ್ಟ್ | |
| 121 | ಬಾದಾಮ್ ಹಲ್ವ | |
| 122 | ವೇ ಪೌಡರ್ | |
| 123 | ಐಸ್ ಕ್ರೀಂ | ಸೀಬೆಹಣ್ಣು |
| 124 | | ಸಪೋಟಾ |
| 125 | | ಲಿಚಿ |
| 126 | | ಸ್ಟ್ರಾಬೆರಿ |
| 127 | | ಮ್ಯಾಂಗೊ |
| 128 | | ಎಳನೀರು |
| 129 | | ಹಲಸಿನ ಹಣ್ಣು |
| 130 | | ಸೀತಾಫಲ |
| 131 | | ವೆನಿಲಾ ಪೇಸ್ಟ್ರಿ |
| 132 | | ಸೀಬೆಹಣ್ಣು ಕ್ಯಾಂಡಿ |
| 133 | | ಬ್ಲಾಕ್ ಕರೆಂಟ್ ಸಂಡೆ |

| | | |
|---|---|---|
| 134 | | ಫ್ರೂಟ್ ಬೊನಾನ್ಜಾ |
| 135 | | ಸ್ಪೈಸಿ ಮ್ಯಾಂಗೊ |
| 136 | ಬ್ರೆಡ್ | ಹಾಲಿನ ಬ್ರೆಡ್ |
| 137 | | ಬಹುದಾನ್ಯ ಬ್ರೆಡ್ |
| 138 | | ಸ್ಯಾಂಡ್ವಿಚ್ ಬ್ರೆಡ್ |
| 139 | | ವ್ಹೋಲ್ ವ್ಹೀಟ್ ಬ್ರೆಡ್ |
| 140 | ಆರ್ಯುವೇದ ಹಾಲು | ಶುಂಠಿ |
| 141 | | ಕಾಳು ಮೆಣಸು |
| 142 | | ಅಶ್ವಗಂಧ |
| 143 | | ತುಳಸಿ |
| 144 | | ಲವಂಗ |
| 145 | | ಅರಿಶಿನ ಹಾಲು |
| 146 | ಸಕ್ಕರೆ ರಹಿತ ಸಿಹಿ ತಿನಿಸು | ಸಕ್ಕರೆರಹಿತ ಪೇಡ, |
| 147 | | ಸಕ್ಕರೆರಹಿತ ಕೇಸರಿ ಪೇಡ, |
| 148 | | ಸಕ್ಕರೆರಹಿತ ಬೆಸನ್ ಲಾಡು, |
| 149 | | ಸಕ್ಕರೆರಹಿತ ಕೊಕೊನೆಟ್ ಬರ್ಫಿ |
| 150 | ಕರದಂಟು | |
| 151 | ಗೋಡಂಬಿ ಶಕ್ತಿ | |
| 152 | ಲಡಗಿ ಲಡ್ಡು | |
| 153 | ರಾಗಿ ಬೈಟ್ | |
| 154 | ಸಕ್ಕರೆ ರಹಿತ ಐಸ್ ಕ್ರೀಂ | |
| 155 | ಬಾಸುಂದಿ ಮಿಕ್ಸ್ | |
| 156 | ಕೇಸರ್ ಕುಲ್ಫಿ | |
| 157 | ಪಿಸ್ತಾ ಕುಲ್ಫಿ | |
| 158 | ಖೋವಾ ಬಾದಾಮ್‌ರೋಲ್ | |
| 159 | ಖೋವಾ ಚಾಕೋನಟ್ಟಿ ರೋಲ್ | |
| 160 | ಖೋವಾ ಗೋಡಂಬಿ ರೋಲ್ | |
| 161 | ಹೆಸರು ಕಾಳು ಲಾಡು | |
| 162 | ಕಲಾಕಂದ್ | |
| 163 | ಪನೀರ್ ಬರ್ಫಿ | |
| 164 | ಬೆಲ್ಲದ ಬರ್ಫಿ | |
| 165 | ಖೋವಾ ಲಾಡು | |
| 166 | ಪನೀರ್ ಮುರುಕು | |
| 167 | ರಾಗಿ ಖಾರಾ ಬಿಸ್ಕತ್ | |
| 168 | ಬೆಣ್ಣೆ ಬಿಸ್ಕತ್ | |
| 169 | ಚಾಕೋಲೇಟ್ ಗಿಫ್ಟ್ ಬಾಕ್ಸ್ (ಉತ್ಸವ) | |
| 170 | ಚಾಕೋಲೇಟ್ ಗಿಫ್ಟ್ ಟಿನ್ | |

## Karnataka Co-operative Milk Producer's Federation LTD., Bangalore-560029

A Milk Products Manufactured at KMF unit /Unions :- (Oct'2023)

Kgs/Month

| SL NO | Union / KMF Unit | Cream | Butter | Ghee | Whey powder | Cheese | Paneer | Curd | Yogurt/Real Thick / Probiotic / Kholar Cup Curd | Shrikhand | Icecream Nandini/ Co-Packing) |
|---|---|---|---|---|---|---|---|---|---|---|---|
| 1 | BAMUL | 1210466 | 524479 | 105928 | 59550 | 121990 | 42850 | 4756325 | | | |
| 2 | KOMUL | 480490 | 411364 | 220118 | | 16404 | 10751 | 2965040 | | | |
| 3 | MANMUL | 1096174 | 472826 | 159023 | | | 10605 | 2336044 | | | |
| 4 | TUMUL | 268520 | 107327 | 104813 | | | | 2497527 | | | |
| 5 | MYMUL | 492498 | 292406 | 246329 | | | 12310 | 2191100 | 520 | | |
| 6 | CHAMUL | 189900 | 143476 | 78257 | | | | 336507 | | | |
| 7 | HAMUL | 305500 | 371592 | 289864 | | | | 1217484 | | | 258251 |
| 8 | SHIMUL | 45304 | 158915 | 63605 | | | 7321 | 1943013 | | | |
| 9 | DKMUL | 341260 | 16193 | 143961 | | | 81089 | 2350037 | | | |
| 10 | DHAMUL | 0 | 180969 | 17499 | | | 18087 | 735088 | | | |
| 11 | HAVEMUL | 0 | 0 | 0 | 0 | 0 | 0 | 0 | 0 | | 0 |
| 12 | RBKMUL | 44280 | 0 | 15918 | | | | 343881 | | | |
| 13 | GUMUL | | | 29375 | | | 4191 | | | | |
| 14 | VIMUL | 9831 | 53419 | 15581 | | | 2893 | 431702 | 2344 | | |
| 15 | BEMUL | 41221 | 0 | 36049 | | | 9560 | 281594 | | | |
| KMF Unit | | | | | | | | | | | |
| 16 | Mother Dairy | 716150 | 339824 | 96285 | | | 101335 | 2284059 | 100 | | 410558 |
| 17 | Bellary IC Plant | | | | | | | | | | 150164 |
| 18 | DEMPO | | | | | | | | | 2449 | |
| Total Qty | | 5241594 | 3072790 | 1622605 | 59550 | 138394 | 300992 | 24669401 | 2964 | 2449 | 818973 |

Note:- Generated Cream converted into Butter and ghee.

SMP and WMP production facilities at NHMPP, Ramanagara, NHPP CRP, Mother dairy, Dempo, Damul Manmul and Bamul.

WMP production as per Ksheer Bhagya yojana.

B FM, Lassi and Butter Milk production In sachets & Bottles/ PB at union /unit :- (lts/month)

| (lts/Month) | | In Sachets | | | IN Bottle/ pet Bottle/Tetra | | |
|---|---|---|---|---|---|---|---|
| SL NO | Union | Sweet / Mango lassi | Masala / Jeera/ plainButter Milk | Flavoured Milk | Flavoured Milk-SFM | Lassi (Tetra) | Butter Milk (Tetra) |
| 1 | BAMUL | 15588 | 116382 | 21780 | 0 | 0 | 0 |
| 2 | KOMUL | 0 | 30276 | 0 | 0 | 0 | 0 |
| 3 | MANMUL | 0 | 0 | 0 | 0 | 0 | 0 |
| 4 | TUMUL | 0 | 17400 | 0 | 0 | 0 | 0 |
| 5 | MYMUL | 63466 | 115531 | 0 | 0 | 0 | 0 |
| 6 | CHAMUL | 2448 | 38820 | 0 | 0 | 0 | 0 |
| 7 | HAMUL | 0 | 45210 | 0 | 0 | 0 | 0 |
| 8 | SHIMUL | 5236 | 55173 | | 0 | 0 | 0 |
| 9 | DKMUL | 118368 | 162111 | 85916 | 0 | 0 | 0 |
| 10 | DHAMUL | 0 | 0 | 0 | 0 | 0 | 0 |
| 11 | HAVEMUL | 0 | 0 | 0 | 0 | 0 | 0 |
| 12 | RBKMUL | 0 | 0 | 0 | 0 | 0 | 0 |
| 13 | GUMUL | 0 | 0 | 0 | 0 | 0 | 0 |
| 14 | VIMUL | 2707 | 8725 | 0 | 0 | 0 | 0 |
| 15 | BEMUL | 0 | 35572 | 0 | 0 | 0 | 0 |
| KMF Unit | | 0 | | 0 | 0 | 0 | 0 |
| 16 | Mother Dairy | 0 | 90490 | 0 | 23839 | 20692 | 20800 |
| 17 | Dempo | 0 | 0 | 0 | 23915 | 0 | 0 |
| Total quantity ( lts/month) | | 207813 | 715690 | 107696 | 47754 | 20692 | 20800 |

C MILK Based Nandini SWEETS manufactured at unions/kmf unit :-

(Production/month in kgs)

| SL NO | Union/ KMF units | Khova | Peda | Dharwad peda | Kesar /Elachi Peda/ assorted sweets | Jaggery Peda | Cashew/ Chocolate /Coconut/ Dry Fruit/ Badam Burfi | Nandini Bite | Mysore Pak | Milk Burfi | Jaggery Burfi | Khova Laddu | Spl Milk Burfi | Khov cashew /chocolate/ Badam Roll | Chakki Ladoo | Green Gram Ladoo/ Besan Laddu/ Millet Laddu | Kunda | Kalakanda/ Paneer Burfi | Kajukatli | Ladagi Laddu | Karadantu | Badam Powder | Millet Malt Mix | Gulab Jamoon/ Jamoon Mix | ullas-Gulla | khov peanut chikki | Basundi/ payasa mix/Rice Kheer Mix | Badam Halwa | Rasagulla | Total |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| 1 | BAMUL | | 18586 | | | | | | 17070 | | | | | | | 6443 | | 1000 | | | | | | | | | | | | 43099 |
| 2 | KOMUL | | 6566 | 2501 | | | | | 4356 | | | | | 727 | | | | | | | | | | | | | | | | 14150 |
| 3 | MANMUL | 603 | | | | | | | | 291 | 796 | 145 | 677 | | | | | | | | | | | | | | | | | 2512 |
| 4 | TUMUL | | 6625 | | | | 271 | | 6257 | | | | | | | | | | | | | | | | | | | | | 13153 |
| 5 | MYMUL | 4909 | 19107 | | | | 3515 | | | | | | | | 2125 | | | | | | | | | | | | | | | 29656 |
| 6 | CHAMUL | 924 | 2285 | | | | | | | | | | | | | | | | | | | | | | 2197 | | | | | 5406 |
| 7 | HAMUL | 675 | 3765 | | | | | 1675 | 3630 | | | | | | | | | | | | | | | | | | | | | 9745 |
| 8 | SHIMUL | 1931 | 6607 | | | | 160 | 88 | | | | | | | | | | | | | | | | | | 106 | | | | 8892 |
| 9 | DKMUL | 3710 | | | | | 1867 | 2972 | 9043 | | | | | | | | | | | | | | | | | | | | | 17592 |
| 10 | DHAMUL | 1446 | 1090 | 6526 | | | | | | | | | | | | 481 | | | | | | | | | | | | | | 9543 |
| 11 | HAVEMUL | | | | | | | | | | | | | | | | | | | | | | | | | | | | | 0 |
| 12 | RBKMUL | 261 | 693 | | | | | | 340 | | | | | | | | | | | | | | | | | | | | | 1294 |
| 13 | GUMUL | 813 | 3103 | | | | | | | | | | | | | | | | | | | | | | | | | | | 3916 |
| 14 | VIMUL | | 1656 | | | | | | | | | | | | | | | | | | | | | | | | 250 | | | 1906 |
| 15 | BEMUL | 167 | 2298 | | | | | | 459 | | | | | | | | 7188 | | | | | | | | | | | | | 10112 |
| 16 | Dempo, KMF | | | 2674 | | 960 | | | 1978 | | | | | | | | | | | 241 | 2283 | 305 | | 110 | | | | | | 8550.5 |
| 17 | NMP,KMF | 3091 | 37976 | 34207 | 4553 | | 11907 | 1232 | 22281 | | | | | | | 6443 | | | 6255 | | | 7938 | 2001 | 8810 | | | 10232 | 1191 | 4000 | 162117 |
| | Total QTY (kgs/month) | 18530 | 110357 | 45908 | 4553 | 960 | 17720 | 5967 | 65414 | 291 | 796 | 145 | 677 | 727 | 2125 | 13367 | 7188 | 1000 | 6255 | 241 | 2283 | 8243 | 2001 | 8920 | 2197 | 106 | 10482 | 1191 | 4000 | 342024 |

D SAVORIES:- (Kgs/ Month)

| SL NO | Union/ KMF units | Paneer Nippattu | Paneer Muruku | Butter Muruku | Cookies | Rusk | Total |
|---|---|---|---|---|---|---|---|
| 1 | NMP | | 285 | 5890 | 35230 | 3700 | 45105 |
| 2 | Mandya | 380 | | | | | 380 |
| | Total qty (kgs/ month) | 380 | 285 | 5890 | 35230 | 3700 | 45485 |